# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

ಜುಲೈ, ೨೦೧೮ **ಸಂಪಾದಕ : ಡಿ.ಎಸ್.ನಾಗಭೂಷಣ** ಸಂಪುಟ: ೭ ಸಂಚಿಕೆ: ೬

**ಚಂದಾ ರೂ. ೧೫೦/-(ಮಾರ್ಚ್‌ನಿಂದ ಸೆಪ್ಟಂಬರ್, ೨೦೧೮ರ ಸಂಚಿಕೆಯವರೆಗೆ ಮಾತ್ರ ಬೆಲೆ:** ಬಿಡಿ ಪ್ರತಿ: ರೂ. ೨೦/- ಪುಟ: ೨೦


**ವಿಳಾಸ:** ಎಚ್.ಐ.ಜಿ.–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಅಂತೂ ರಾಜ್ಯದ ಹೊಸ ಸರ್ಕಾರ ಇನ್ನೂ ಕೊನೆಗಾಣದ ಅನಿಶ್ಚಿತತೆ ಮತ್ತು ಅಪಾಯಗಳ ನಡುವೆಯೇ ಆಡಳಿತ ಆರಂಭಿಸಿದೆ. ಹಲವು ಗೊಂದಲಗಳ ನಡುವೆ ಭಾಗಶಃವಾದರೂ ಸಚಿವ ಸಂಪುಟ ಅಧಿಕಾರದ ಪ್ರಮಾಣ ಸ್ವೀಕರಿಸಿದೆ.ಆದರೆ ಖಾತೆಗಳ ಹಂಚಿಕೆಯ ಬಗೆಗಿನ ಅಸಮಧಾನ ಮತ್ತು ಸಚಿವ ಸ್ಥಾನ ಆಕಾಂಕ್ಷಿಗಳ ಅಶಾಂತಿ ಬೂದಿ ಮುಚ್ಚಿದ ಕೆಂಡದಂತೆ ಹೊಗೆಯಾಡುತ್ತಲೇ ಇದೆ. ಸಭೆಗಳು ನಡೆಯುತ್ತಲೇ ಇವೆ, ಸಂಧಾನಗಳೂ ಮುಂದುವರೆದಿವೆ. ಹಠ ಹಿಡಿದಂತೆ, ಎಂಟನೇ ತರಗತಿ ಪದವಿ ಪಡೆದಿರುವ ಜಿ.ಟಿ., ದೇವೇಗೌಡರಿಗೆ ಉನ್ನತ ಶಿಕ್ಷಣ ಖಾತೆ ವಹಿಸಿರುವುದು ಈ ಸಚಿವ ಸಂಪುಟ ಇರುವುದು ಕೆಲವರ ಲಾಭೋದ್ಯಮಕ್ಕೇ ಹೊರತು ಜನತೆ ಹಿತ ರಕ್ಷಣೆಗಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ಜಿಟಿಡಿ ಆ ಖಾತೆ ಬೇಡವೆನ್ನಲು ಕಾರಣ ಅರ್ಥ ಮುಜುಗರದಿಂದ ಆದರೆ, ಇನ್ನರ್ಥ ಅದರಿಂದ ಏನೂ ಗಿಟ್ಟುವುದಿಲ್ಲ ಎಂಬುದೂ, ಅವರಿಗೆ ಬೇರೆ ಖಾತೆ ಕೊಡಲು ಲಾಭದಾಯಕ ಖಾತೆಗಳೆಲ್ಲ ಒಂದು ನಿರ್ದಿಷ್ಟ ಹಿತಾಸಕ್ತ ಗುಂಪಿನ ಪಾಲಾಗಿಬಿಟ್ಟಿರುವುದೂ ಕಾರಣಗಳಾಗಿರುವಂತಿದೆ.

ಇದು ಜಿಟಿಡಿಯವರಿಗೆ ಮಾತ್ರ ಸಂಬಂಧಿಸಿದ ದುರಂತದ ಸಂಗತಿಯಲ್ಲ. ಸಚಿವರಿಗೆ ತಮ್ಮ ಖಾತೆಯ ಕ್ಷೇತ್ರದ ಪರಿಚಯ ಅಥವಾ ಒಲವಿರುವ ಅಗತ್ಯವೇನಿಲ್ಲ ಎಂದರೆ ಏನರ್ಥ? ಹಾಗಾದರೆ ಅಧಿಕಾರಶಾಹಿ ಆಡಳಿತದ ಮೇಲುಸ್ತುವಾರಿಯಷ್ಟೇ ಸಚಿವರ ಜವಾಬ್ದಾರಿಯೇ? ಆಯಾ ಖಾತೆಯ ಆಶಯಗಳ ಒಂದು ಸ್ಥೂಲ ಚಿತ್ರವಾದರೂ, ಅದರ ಗ್ರಹಿಕೆಗೆ ಬೇಕಾದ ಪ್ರಾಥಮಿಕ ಸಿದ್ಧತೆಯಿಲ್ಲದವರ ಉಸ್ತುವಾರಿಯಾದರೂ ಹೇಗಿದ್ದೀತು? ಇಂತಹ ಪ್ರಶ್ನೆಗಳಿಗೆ ಅವಕಾಶವೇ ಇಲ್ಲದ ಆಡಳಿತದ ದಿನಗಳಿಗೆ ನಾವು ಬಂದಿದ್ದೇವೆ. ಮೊನ್ನೆ ವಿಧಾನ ಪರಿಷತ್ತೆಂಬ ಹಿರಿಯರ ಸದನಕ್ಕೆ ಸಮ್ಮಿಶ್ರ ಸರ್ಕಾರದ ಎರಡೂ ಪಕ್ಷಗಳು ನಾಮಕರಣ ಮಾಡಿದ 'ಹಿರಿಯ'ರನ್ನು ನೋಡಿದರೇ ಸಾಕು ಈ ಸರ್ಕಾರದ ಚಾಲೂ ಚಹರೆಗಳು ಸ್ಪಷ್ಟವಾಗುತ್ತವೆ.

ಈ ಸಂಪುಟದ ಜಾತಿ ಸ್ವರೂಪ ನೋಡಿ. ಇದರ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ರಾಜ್ಯದ ಜನಸಂಖ್ಯೆಯ ಶೇ. ಹತ್ತನೇ ಒಂದು ಭಾಗದಷ್ಟೂ ಇಲ್ಲದ ಜಾತಿಯವರಿಂದ ಕೂಡಿದೆ. ಇದೇನೂ ಯೋಗ್ಯತೆಗೆ ಆದ್ಯತೆ ಕೊಟ್ಟು ಮಾಡಿದ ಆಯ್ಕೆಯಿಂದ ಉದ್ಭವಿಸಿರುವ ಅಸಮತೋಲನವಲ್ಲ. ಈ ಸರ್ಕಾರದ ಹಿಂದಿರುವ ಮೈತ್ರಿ ರಾಜಕಾರಣದ ಫಲವಿದು. ಮಾಜಿ ಪ್ರಧಾನಿ ದೇವೇಗೌಡರನ್ನು ಅವರ ಹಿರಿತನಕ್ಕಾಗಿ ಕೆಲವರು ರಾಜಕೀಯ ಮುತ್ಸದ್ದಿ ಎಂದು ಕರೆಯುತ್ತಾರೆ. ಆ ಮುತ್ಸದ್ದಿತನದಿಂದಲಾದರೂ ಅವರು ತಮ್ಮ ಕುಟುಂದ ಸದಸ್ಯರಿಗೆ 'ನಮ್ಮ ಕುಟುಂಬದಿಂದಲೇ ಒಬ್ಬರು ಮುಖ್ಯಮಂತ್ರಿಯಾಗಿರುವುದರಿಂದ ನಮ್ಮ ಕುಟುಂಬದ ಮತ್ತಾರೂ ಸಚಿವರಾಗುವುದು ಅನುಚಿತ ಮತ್ತು ಜನ ಏನೆಂದುಕೊಳ್ಳುತ್ತಾರೆ, ಯೋಚಿಸಿ!' ಎಂದು ಹೇಳಬೇಕಿತ್ತು. ಆದರೆ ಹೇಳಿಲ್ಲವೆಂದರೆ ಅವರನ್ನು ಜನ ಏನೆಂದು ವರ್ಣಿಸಬೇಕು? ಅವರ ಮತ್ತೊಬ್ಬ ಮಗ ಮತ್ತು ಓರ್ವ ಬೀಗರು ಇಂಥಹುದೇ ಖಾತೆ ಬೇಕೆಂದು ಹಠ ಮಾಡಿ ಸಚಿವರಾಗಿದ್ದರೆ, ಮತ್ತೋರ್ವ ಬೀಗ ಉನ್ನತ ಶಿಕ್ಷಣ ಖಾತೆಯ ಸಲಹಾಕಾರರಾಗಿ ನೇಮಕಗೊಂಡಿದ್ದಾರೆ. ಈ ಮೂವರೇನು ಕರ್ನಾಟಕದ ಜನರ ಹಿತ ರಕ್ಷಣೆಗೆ ಅನಿವಾರ್ಯವಾಗುವಂತಹ ಪ್ರತಿಭೆ ಮೆರೆದವರೇ? ಸಾರ್ವಜನಿಕ ಲಜ್ಜೆಯೆಂಬುದೇ ಕಳೆದು ಹೋಗಿರುವ ದಿನಗಳಿವು. ಈ ದೃಷ್ಟಿಯಿಂದ ಬರಲಿರುವ ವಿಧಾನಮಂಡಲದ ಅಧಿವೇಶನ ಹಲವು ಕುತೂಹಲಗಳಿಗೆ ಕಾರಣವಾಗಿದೆ.

ಇನ್ನು ನಮ್ಮ ಸಿದ್ಧರಾಮಯ್ಯನವರನ್ನು ನೋಡಿ. ಸಚಿವ ಸಂಪುಟ ರಚನೆಯ ಗೋಜಲಲ್ಲಿ ಸೋತು ಕಂಗೆಟ್ಟು ದೇಶಾಂತರ ಹೊರಟವರಂತೆ ಮೊದಲು ತಮ್ಮ ಹೊಸ ಕ್ಷೇತ್ರ ಬಾದಾಮಿಯ ಪ್ರವಾಸಕ್ಕೆಂದು, ನಂತರದಲ್ಲೇ ಪ್ರಕೃತಿ ಚಿಕಿತ್ಸೆಗೆಂದು ಉಜಿರೆಗೂ ಹೋಗಲು ನಿರ್ಧರಿಸಿ ತಮ್ಮೊಳಗೆ ಆಗುತ್ತಿರುವ ರಾಜಕೀಯ ತಳಮಳಗಳನ್ನು ಹತ್ತಿಕ್ಕುವ ಯತ್ನ ಮಾಡಿರುವಂತಿದೆ. ಅವರಿಗೆ ಈಗಲಾದರೂ 'ವಿಶ್ರಾಂತಿ' ಅಗತ್ಯವೆನಿಸಿರುವುದು ಸಂತೋಷದ ಸಂಗತಿ. ಅವರು ಈ ಬಾರಿಯ ಸೋಲಿನ ನಂತರ 'ನಾನು ಬಡವರ ಪರ ಕೆಲಸ ಮಾಡಿದರೂ ಜನ ಮತ ಹಾಕಲಿಲ್ಲ!' ಎಂದು ಅಲವತ್ತುಕೊಳ್ಳುತ್ತಾ, ದೂರುತ್ತಾ ಓಡಾಡುತ್ತಿರುವುದನ್ನು ನೋಡಿದರೆ ಮರುಕವೆನ್ನಿಸುತ್ತದೆ. ಮತ ಕೊಡಲಿಲ್ಲ ಎಂಬ ದೂರಿಗೆ ಬದಲಾಗಿ, ಏಕೆ ಮತ ಕೊಡಲಿಲ್ಲ ಎಂಬ ಪ್ರಶ್ನೆಯನ್ನು ಕೇಳಿಕೊಂಡಿದ್ದರೆ ಅವರು ಮುಂದಾದರೂ ರಚನಾತ್ಮಕ ರಾಜಕಾರಣ ಮಾಡುವ ಸಾಧ್ಯತೆಗಳು ತೆರೆಯುತ್ತಿದ್ದುವೇನೋ. ಸಿದ್ಧರಾಮಯ್ಯ ಸೇರಿದಂತೆ ಬಹುಪಾಲು ನಮ್ಮೆಲ್ಲ ರಾಜಕಾರಣಿಗಳಿಗೆ ಇನ್ನೂ ಅರ್ಥವಾಗದ ಸಂಗತಿ ಎಂದರೆ ಬಡತನ ನಿವಾರಣೆಯ ರಾಜಕಾರಣದ ದಿನಗಳು ಮುಗಿದಿವೆ ಎಂಬುದು. ಜಾಗತೀಕರಣದ ದೀರ್ಘಕಾಲೀನ ಮತ್ತು ನೈತಿಕ ನೆಲೆಯ ದುಷ್ಪರಿಣಾಮಗಳೇನೇ ಇರಲಿ, ಅದರ ಫಲವಾಗಿ ಜನರ ಬಹುಭಾಗಕ್ಕೆ ಕನಿಷ್ಟ ಅಗತ್ಯಗಳು ಪೂರೈಕೆಯಾಗಿವೆ. ಈಗ ಅವರು ಸಂಕೀರ್ಣವಾದ ಭಾವನಾತ್ಮಕ ಅಗತ್ಯಗಳ ಪೂರೈಕೆಗಾಗಿ ಕಾತುರರಾಗಿದ್ದಾರೆ. ಇದರ ಲಾಭ ಪಡೆಯುವ ಹೊಸ ತೆರನ ರಾಜಕಾರಣ ಬಲವಾಗಿ ಬೆಳೆಯುತ್ತಿರುವ ಈ ಹೊತ್ತಿನಲ್ಲಿ ಸಿದ್ಧರಾಮಯ್ಯನವರಂತಹ ರಾಜಕಾರಣಿಗಳಿಂದ ಹೆಚ್ಚಿನ ಪ್ರಬುದ್ಧತೆಯ ರಾಜಕಾರಣವನ್ನು ನಿರೀಕ್ಷಿಸಲಾಗಿತ್ತು. ಆದರೆ ಅವರು ಮಾಡಿದ್ದು ಅಗ್ಗದ ಜನಪ್ರಿಯ ರಾಜಕಾರಣ. ಅದರ ಫಲವಾದ ಮಾನಸಿಕ ಗಾಯಗಳನ್ನು ಅವರು ವಿಶ್ರಾಂತಿಯಲ್ಲಿ ನೆಕ್ಕಿಕೊಳ್ಳುತ್ತಿರುವ ಹೊತ್ತಿನಲ್ಲೇ ಅವರ ಹೈಕಮಾಂಡ್ ಸಚಿವ ಸಂಪುಟ ರಚನೆ ಮತ್ತು ರಾಜ್ಯಾಡಳಿತಕ್ಕೆ ಸಂಬಂಧಿಸಿದಂತೆ ಕುಮಾರಸ್ವಾಮಿಯವರನ್ನು ದೆಹಲಿಗೆ ಕರೆಸಿಕೊಂಡು ಸಮಾಲೋಚಿಸಲು ತೊಡಗಿರುವ ಅನುಚಿತ ಬೆಳವಣಿಗೆಯು ರಾಜ್ಯ ರಾಜಕಾರಣ ಸದ್ಯಕ್ಕಲ್ಲದಿದ್ದರೂ, ಶೀಘ್ರದಲ್ಲೇ ಹೊಸ ಸಮೀಕರಣಗಳನ್ನು ಕಾಣುವ ಎಲ್ಲ ಸೂಚನೆಗಳನ್ನು ನೀಡುತ್ತಿರುವಂತಿದೆ.

ಇನ್ನು ಮೋದಿಯವರ ಆಡಳಿತದತ್ತ ನೋಡಿದರೆ, ಅವರು ನಿಜವಾಗಿಯೂ ಆತಂಕಿತರಾಗಿದ್ದಂತೆ ಕಾಣುತ್ತಿದೆ. ಅವರ ಬಡಾಯಿಯ ಮುಖ್ಯ ವಸ್ತುವಾದ ಅಭಿವೃದ್ಧಿಯ ಸೂಚ್ಯಂಕಗಳು ಏನು ಮಾಡಿದರೂ ಮೇಲೇಳುತ್ತಲೇ ಇಲ್ಲ. ಅವರ ಆರ್ಥಿಕ ಸಲಹಾಕಾರ ಅರವಿಂದ ಸುಬ್ರಮಣ್ಯಂ ಬೇಸತ್ತು ರಾಜೀನಾಮೆ ನೀಡಿ ಸರ್ಕಾರಕ್ಕೆ ಮುಜುಗರ ತಂದೊಡ್ಡಿದ್ದಾರೆ, ಮೋದಿ ಮತ್ತವರ ಬಳಗಕ್ಕೆ ನಿಧಾನವಾಗಿ ವಾಗಾಡಂಬರದ ಮೂಲಕ ಅಧಿಕಾರ ಗಳಿಸಬಹುದೇ ಹೊರತು ಆಡಳಿತ ನಡೆಸಲಾಗದು ಎಂಬುದು ಗೊತ್ತಾಗಿದೆ. ಹಾಗಾಗಿಯೇ ಮೋದಿ ಬಳಗ ೨೦೧೯ರ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಗೋಜಲಿನಿಂದ ಪಾರಾಗಲೆಂದೇ ಸ್ವಯಂಕೃತಾಪರಾಧವಾದ ಜಮ್ಮು ಮತ್ತು ಕಾಶ್ಮೀರದಲ್ಲಿ, ಆಳದಲ್ಲಿ ಪ್ರತ್ಯೇಕವಾದಿಯಾಗಿರುವ ಪಿಡಿಪಿಯೊಡನೆಯ ಮೈತ್ರಿ ಕಡಿದುಕೊಂಡು–ಆ ಮೂಲಕ ತನ್ನ ಕಾಶ್ಮೀರ ನೀತಿಯ ಸಂಪೂರ್ಣ ವೈಫಲ್ಯವನ್ನೊಪ್ಪಿಕೊಂಡು 'ರಾಷ್ಟ್ರಪತಿ ಆಡಳಿತ'ದಡಿಯಲ್ಲಿ ಕಾಶ್ಮೀರದಲ್ಲಿ 'ವೀರಾವೇಶ'ದ ರಾಜಕಾರಣ ಮಾಡಲು ಹೊರಟು 'ದೇಶಭಕ್ತಿ'ಯ ಹೊಸ ಅಲೆ ಎಬ್ಬಿಸುವ ಯೋಜನೆ ಹಾಕಿಕೊಂಡಂತಿದೆ. ಇದು ಕಾಶ್ಮೀರಕ್ಕೆ ಮಾತ್ರವಲ್ಲ, ದೇಶಕ್ಕೇ ಮಾರಕವಾಗಬಹುದಾದ ಮತ್ತಷ್ಟು ಅಪಾಯಕಾರಿ ರಾಜಕಾರಣ. ಅಯ್ಯೋ! ಬಿಜೆಪಿಯಲ್ಲಿ ದೇಶಪ್ರೇಮದ ನಿಜವಾದ ಅರ್ಥ ಗೊತ್ತಿರುವ ವಿವೇಕಿಗಳು ಈಗ ಯಾರೂ ಉಳಿದಿಲ್ಲವೇ?

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಜೂನ್ ಸಂಚಿಕೆ ಸಮೃದ್ಧವಾಗಿ ಹೊರಬಂದಿದೆ. ಕೇವಲ ಇಪ್ಪತ್ತು ಪುಟಗಳಲ್ಲಿ ಎಷ್ಟೊಂದು ವಿಷಯಗಳ ಅಡಕವಾಗಿವೆ! ಕಾರ್ಲ್ ಮಾರ್ಕ್ಸ್ ಕುರಿತ ರಾಜಾರಾಂ ತೋಳ್ಪಾಡಿಯವರ ಲೇಖನ ನಮ್ಮಂಥವರಿಗೆ ಕಬ್ಬಿಣದ ಕಡಲೆ ಎಂಬುದರ ಹೊರತಾಗಿ ಮಿಕ್ಕೆಲ್ಲ ಬರಹಗಳೂ ಆಸಕ್ತಿಯಿದ ಓದಿಸಿಕೊಂಡು ಹೋದವು. ಸಿ. ಸದಾನಂದ ಅವರ 'ಯುವ ಲಹರಿ'ಯ ಲೇಖನ ಹಾಗೂ ಜಯಂತ ಕಾಯ್ಕಿಣಿಯವರ ಲಲಿತ ಪ್ರಬಂಧ ಆಪ್ತವೆನಿಸಿದವು. ಕಾಯ್ಕಿಣಿ ವರ್ಣಿಸಿರುವಂತಹ ಜನ ನಮ್ಮ ಸುತ್ತಮುತ್ತಲೇ ಇದ್ದರೂ, ಅವರಂತೆ ಈ ಜನರನ್ನು ಅಕ್ಷರಗಳಲ್ಲಿ ಹಿಡಿದಿಡುವುದು ನಿಜವಾಗಿಯೂ ಕಷ್ಟವೇ.

**–ಬಿಲ್ಲೇಶ್ವರ ಅಚ್ಚು,** ಹುಂಚ

ಜೂನ್ ಸಂಚಿಕೆಯಲ್ಲಿನ ನಿಮ್ಮ ಸಂಪಾದಕೀಯ, ಚುನಾವಣಾ ವಿಶ್ಲೇಷಣೆ ಮತ್ತು ರೇಷ್ಮೆಯವರ ಲೇಖನ ಮೌಲಿಕವಾಗಿವೆ. ಆದರೆ ಎಲ್ಲ ಬಿಟ್ಟು ರಾಜಕಾರಣ ಮಾಡಲು ಬಂದವರಿಗೆ ಏನು ಹೇಳಿದರೂ ನಾಟಲಾರದು. ಇನ್ನು 'ಬಿಳಿ ಶ್ರೇಷ್ಠತಾವಾದ.. ಲೇಖನದ ಬಗ್ಗೆ ಹೇಳುವುದಾದರೆ, ಇಂತಹ ವಿಕ್ಷಿಪ್ತ ಬೆಳವಣಿಗೆ ಅಲ್ಲಲ್ಲಿ ನಡೆಯುತ್ತಿರಬಹುದಾದರೂ, ಸಮಾಜದ ಮೇಲೆ ಅದರ ಒಟ್ಟಾರೆ ಪ್ರಭಾವ ಸಂಶಯಾಸ್ಪದವೇ. ಸಿ. ಸದಾನಂದ ಅವರ 'ಯುವ ಲಹರಿ' ಓದಿದಾಗ ಇತ್ತೀಚೆಗೆ ನಾನು ಭೇಟಿಕೊಟ್ಟಿದ್ದ ಚೀನಾದಲ್ಲಿ ಜನ ತಮ್ಮ ಭಾಷೆಯ ಮಹತ್ವ ಕಿಂಚಿತ್ತೂ ಊನವಾಗದಂತೆ ದೇಶವನ್ನು ಬಲಾಢ್ಯವಾಗಿ ಕಟ್ಟಿಕೊಂಡಿರುವ ರೀತಿ ನೆನಪಿಗೆ ಬಂತಲ್ಲದೆ ನಮ್ಮ ನಾಡನಲ್ಲಿ ಕನ್ನಡಕ್ಕೆ ಒದಗಿರುವ ಗತಿ ನೆನೆದು ಕಣ್ಣೀರು ಬಂತು. ಮಿಕ್ಕಂತೆ ಜಯಂತ ಕಾಯ್ಕಿಣಿ ಅವರ ಲಲಿತ ಪ್ರಬಂಧ ಇಷ್ಟವಾಯಿತು. ಇಬ್ಬರು ಲೇಖಕರನ್ನು ಕುರಿತ ಶ್ರದ್ಧಾಂಜಲಿ ಬರಹಗಳು ಭಾವಪೂರ್ಣವಾಗಿವೆ. 'ಕಾಲಕ್ರಮ' ಕುರಿತ ಚೆನ್ನಿಯವರ ವಿಮರ್ಶೆ ಆ ಪುಸ್ತಕದಷ್ಟೇ ಗಂಭೀರವಾಗಿದ್ದು ಗಮನ ಸೆಳೆಯಿತು. ಜೈನ ಕಥೆಗಳಿಗೆ ತೀರ್ಥಂಕರರ ಚಿತ್ರ ಹಾಕಬೇಕಿತ್ತೇನೋ!

**–ವೆಂಕಟೇಶ ಮಾಚಕನೂರು,** ಧಾರವಾಡ

ಜೂನ್ ತಿಂಗಳ ಮೊನಚಾದ ಸಂಪಾದಕೀಯ, ರಾಜಕೀಯ ವಿಶ್ಲೇಷಣೆ, ಲೋಹಿಯಾ ಸರಣಿ, ಕವನಗಳು, ಜಯಂತ ಕಾಯ್ಕಿಣಿಯವರ ಲಲಿತ ಪ್ರಬಂಧ, ಜೈನ ಕತೆಗಳು, ಪುಸ್ತಕ ಪರಿಚಯ ಮುಂತಾದ ವೈವಿಧ್ಯತೆಯಿಂದ ಗಮನ ಸೆಳೆಯಿತು. ನನ್ನ ವಿಶೇಷ ಗಮನ ಸೆಳೆದದ್ದು ಕೆರೋಲ್ ಶಾಫರ್ ಅವರ "ಬಿಳಿ ಶ್ರೇಷ್ಠತಾವಾದ" ಕುರಿತ ಲೇಖನ. ಇದು ಸೂಚಿಸುವ ವಿದ್ಯಮಾನವನ್ನು ನಾನೂ ಗುರುತಿಸಿದ್ದೇನೆ, ಗೆಳೆಯರ ಬಳಿ ಚರ್ಚಿಸಿದ್ದೇನೆ. ಆದರೆ ಭಾರತದ ಬಲಪಂಥೀಯ ಚಿಂತನೆಗೆ ಅದರ ನಂಟು ಇರುವ ಸುಳಿವು ಸಿಕ್ಕಿರಲಿಲ್ಲ. ಓದಿದ ನಂತರ ಮುಂದಿನ ದಿನಗಳನ್ನು ನೆನೆದು ದುಗುಡವಾಯಿತು. ಆದರೆ ಆರ್ಥಿಕತೆಯೇ ಮುಖ್ಯವಾದ ಈ ಕಾಲದಲ್ಲಿ ಹಿಟ್ಲರನ ಜರ್ಮನಿಯಲ್ಲಾದ ಕುರುಡು ಹಿಂಬಾಲಿಸುವಿಕೆ ಈಗ ಆಗುವುದಿಲ್ಲ ಎಂದುಕೊಳ್ಳುತ್ತೇನೆ.

**–ಮಲ್ಲಿಕಾರ್ಜುನ ಹೊಸಪಾಳ್ಯ,** ತುಮಕೂರು

ಕಳೆದ ನಾಲ್ಕು ಸಂಚಿಕೆಗಳಲ್ಲಿ ಮೂಡಿಬಂದ ನ್ಯಾ. ಬಿ. ಸುದರ್ಶನ ರೆಡ್ಡಿಯವರ ಲೋಹಿಯಾ ಸ್ಮಾರಕ ಉಪನ್ಯಾಸದ ಕನ್ನಡ ಅನುವಾದ ಬರಹವನ್ನು ಓದುತ್ತಾ ಹೋದಂತೆ ನನ್ನ ನೆನಪುಗಳು ಎಪ್ಪತ್ತರ ದಶಕದ ನನ್ನ ವಿದ್ಯಾರ್ಥಿ ಜೀವನದ ಸಮಾಜವಾದಿ ಯುಜನ ಸಭಾದ ದಿನಗಳತ್ತ ಜಾರಿಹೋದವು. ಡಾ. ಲೋಹಿಯಾ ಅವರ ಚಿಂತನೆಗಳನ್ನು ನಮ್ಮ ಮಧ್ಯೆ ಜೀವಂತವಾಗಿಟ್ಟಿರುವ ನಿಮಗೆ ಮತ್ತು ನಿಮ್ಮ ಪತ್ರಿಕೆಗೆ ನನ್ನ ನಮನಗಳು. ಪತ್ರಿಕೆ ಇತ್ತೀಚಿನ ರಾಜಕೀಯ ವಿದ್ಯಮಾನಗಳ ವಸ್ತುನಿಷ್ಠ ವಿಶ್ಲೇಷಣೆಗಳನ್ನು ನೀಡುತ್ತಲೂ ನಮ್ಮ ಮೆಚ್ಚುಗೆಗೆ ಪಾತ್ರವಾಗಿದೆ. ನಾನಂತೂ ನಿಮ್ಮ ಸಂಪಾದಕೀಯ ಟಿಪ್ಪಣಿಗಳನ್ನು ಮತ್ತೆ ಮತ್ತೆ ಓದುತ್ತಿರುತ್ತೇನೆ!

**–ಸೋಮಶೇಖರ ದ್ಯಾವಲಾಪುರ,** ಧಾರವಾಡ

ಜೂನ್ ಸಂಚಿಕೆಯಲ್ಲಿನ ನಿಮ್ಮ ಸಂಪಾದಕೀಯ ಟಿಪ್ಪಣಿಗಳನ್ನು ನಮ್ಮಂತಹ ಓದುಗರಿಗಿಂತ ಹೆಚ್ಚಾಗಿ ರಾಜಕಾರಣಿಗಳು ಓದಬೇಕು. ಯಾವುದೇ ತತ್ವಬದ್ಧತೆ ಇಲ್ಲದ ನಮ್ಮ ಶಾಸಕರು ಮೂಢ ನಂಬಿಕೆ ವಿರೋಧಿ ಕಾನೂನನ್ನೂ ತಂದು ತಾವೇ ಅದನ್ನು ಉಲ್ಲಂಘಿಸುವ ದುಃಸ್ಥಿತಿಗೆ ಈಡಾಗಿರುವುದು ಸಹಜವೇ ಆಗಿದೆ. 'ಯಾವಾಗ ನಮ್ಮ ರಾಜಕಾರಣಿಗಳು ಕನಿಷ್ಠ ಘನತೆ ಗೌರವಗಳನ್ನು ಕಲಿಯುವುದು? ಜನ ಕೂಡ ಇವರನ್ನು ತಲೆ ಮೇಲೆ ಹೊತ್ತು ಮೆರೆಸುವುದನ್ನು ನಿಲ್ಲಿಸಬೇಕು. ನಿಮ್ಮ ಪತ್ರಿಕೆ ಮುಂದೆ ಕೂಡ ರಾಜಕಾರಣಿಗಳ ಮೇಲೆ ಹೀಗೇ ಚುರುಕಾಗಿ ಚಾಟಿ ಬೀಸುತ್ತಿರಲಿ. ಇಂತಹ ಪತ್ರಿಕೆಯೊಂದು ಬರುತ್ತಿದೆ ಎಂದು ಬಹಳ ಜನಕ್ಕೆ ಗೊತ್ತಿಲ್ಲ. ಪತ್ರಿಕೆ ವ್ಯಾಪಕ ಪ್ರಸಾರ ಪಡೆಯಲಿ.ರೂ. ೧ ಸಾವಿರ ದೇಣಿಗೆ ಕಳಿಸಿರುವೆ,

**–ಪೌಳಿ ಶಂಕರಾನಂದಪ್ಪ,** ತುಮಕೂರು

ಶಿವರಾಮ ಕಾರಂತರು ಒಮ್ಮೆ ತಮ್ಮ ಭಾಷಣದಲ್ಲಿ ಈ ದೇಶವನ್ನು ರಕ್ಷಿಸಿ ಎಂದು ಯಾರನ್ನು ಕೇಳಲಿ? ಎಂದಿದ್ದರು. ಕರ್ನಾಟಕದಲ್ಲಿ ಈ ಬಾರಿಯ ಚುನಾವಣೆಯ ಚೋದ್ಯದ ಸಂಗತಿಯೆಂದರೆ ದೈವಬಲ, ಜ್ಯೋತಿಷ್ಯಫಲವೂ ಪ್ರಬಲವಾಗಿರುವುದು. ಈ ವಿದ್ಯಮಾನಗಳಿಂದಾಗಿ ಮೌಢ್ಯ ಮಸೂದೆಯಿಂದಲೇ ಹಿಂದಿನ ಸರ್ಕಾರದ ಮಂತ್ರಿಗಳನ್ನೆಲ್ಲ ರಾಹು, ಕೇತು, ಶನಿ ವಕ್ಕರಿಸಿಕೊಂಡರು ಎಂಬ ನಂಬಿಕೆ ಜನಮನದಲ್ಲಿ ಬಲಗೊಳ್ಳುವುದಾದರೆ ಆಶ್ಚರ್ಯವಿಲ್ಲ.

ಈ ಸಮಯದಲ್ಲಿ ಗತ್ಯಂತರವಿಲ್ಲದೆ ಸಾಹಿತಿಗಳೇನಕರು ಜಾತಿ ಸಂಗತಿಯನ್ನು ಒಪ್ಪಿಕೊಂಡು ತಂತಮ್ಮ ಧುರೀಣರನ್ನು ಅಪ್ಪಿಕೊಳ್ಳುವುದಲ್ಲದೆ ಅದರ ಅಸ್ತಿತ್ವಕ್ಕಾಗಿ ಮಠಗಳು, ಸ್ವಾಮಿಗಳು ಅನಿವಾರ್ಯ ಅನ್ನುವಂತಾಗಿದ್ದಾರೆ.

ಮೈ ಮೇಲಿನ ಬಟ್ಟೆ ಹರಿದರೆ ಹೊಲಿಸಿಕೊಳ್ಳಬಹುದು. ಮನಸೂ, ನಾಲಿಗೆಯೂ ಹರಿದರೆ ತೇಪೆ ಹಾಕುವವರು ಯಾರು? 'ಹೊಸ ಮನುಷ್ಯ'ದ ಜೂನ್' ಸಂಚಿಕೆಯ ಸಂಪಾದಕರ ಟಿಪ್ಪಣಿಗಳು ಯಾರನ್ನು ಮುಟ್ಟಬೇಕೋ ಅವರನ್ನು ತಟ್ಟುವುದೇ? ಹಾಗೆಂದು ಸುಮ್ಮನಿರಲು ಸಾಧ್ಯವೇ?

**–ಡಾ. ಕೃಷ್ಣಮೂರ್ತಿ ಹನೂರು,** ಮೈಸೂರು

ಸ್ವಘೋಷಿತ ಚಿಂತಕ, ಲೇಖಕ, ಬುದ್ಧಿಜೀವಿ, ಪ್ರಗತಿಪರರು ಎದೆಮುಟ್ಟಿಕೊಂಡು ನೋಡಿಕೊಳ್ಳಬೇಕಾದ ಇಂಥ ಬರಹಗಳ ಬಗ್ಗೆ ಯಾಕೆ ಇವರೆಲ್ಲ ಜಾಣಮೌನ ವಹಿಸುತ್ತಾರೆಂಬುದು ಚೋದ್ಯ! .ಎಲ್ಲರೂ ನೀವು ಪ್ರಸ್ತಾಪಿಸಿದ ರಾಜಕಾರಣಿಗಳಂತಾಗಿರುವುದು ದುರಂತ. ನಿಜ ಚಿಂತನೆಗೆ ಹಚ್ಚಿದ ಬರಹ.

**–ಡಾ. ಗೀತಾ ವಸಂತ,** ತುಮಕೂರು

ನಿಮ್ಮ ಚುನಾವಣಾ ವಿಶ್ಲೇಷಣೆಯು ಸಿದ್ಧರಾಮಯ್ಯನವರು ಲೋಹಿಯಾ ಹೆಸರು ಹೇಳಿಕೊಂಡು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮಾಡಿದ ಜಾತಿ ರಾಜಕಾರಣ ಹೇಗೆ ಅವರಿಗೇ ತಿರುಗುಬಾಣವಾಯಿ–ತೆಂಬುದನ್ನು ಬಹು ಸೂಕ್ಷ್ಮವಾಗಿ ವಿವರಿಸಿದ್ದೀರಿ. ಲೋಹಿಯಾರ ಜಾತಿ ವಿನಾಶ ತತ್ವವನ್ನು ಜಾತಿವಾದವಾಗಿ ಅವನತಿಗೊಳಿಸಿರುವ ಭಂಡ ಸಮಾಜವಾದಿಗಳಿಗೆ ಇದು ಒಂದು ಪಾಠ.

**–ಕೆ.ಬಿ. ಲಿಂಗರಾಜು,** ನಂಜನಗೂಡು

ನಿಮ್ಮ ಚುನಾವಣಾ ವಿಶ್ಲೇಷಣೆಯನ್ನು ನಮ್ಮ ರಾಜಕಾರಣಿಗಳು, ಅದೂ ಮುಖ್ಯವಾಗಿ ಕಾಗೋಡು ತಿಮ್ಮಪ್ಪ, ಸಿದ್ಧರಾಮಯ್ಯ ಮುಂತಾದ ಮಾಜಿ ಸಮಾಜವಾದಿ ರಾಜಕಾರಣಿಗಳು ಓದಬೇಕು. ಜಾತಿ ಪ್ರಜ್ಞೆಯನ್ನು ರಚನಾತ್ಮಕವಾಗಿ ಬಳಸಿಕೊಳ್ಳುವ ಬದಲು ಸಾಮಾಜಿಕ ವಿಘಟನೆಗೆ ಬಳಸಿಕೊಳ್ಳುವ ಸಮಾಜವಾದಿಗಳು ಲೋಹಿಯಾ, ಹೆಸರು ಹೇಳಲೂ ಅನರ್ಹರು.

**–ಎನ್. ರಾಜಶೇಖರ,** ಚಿತ್ರದುರ್ಗ

ಜೂನ್ ಸಂಚಿಕೆಯ ಸಂಪಾದಕರ ಟಿಪ್ಪಣಿಗಳನ್ನು ಓದಿ ನಮ್ಮ ರಾಜ್ಯದ ಈ ಅವನತಿಗೆ ಮದ್ದೇ ಇಲ್ಲವೇ ಎಂಬ ಚಿಂತೆ ನನ್ನನ್ನು ಕಾಡಿತು. ೭೦–೮೦ರ ದಶಕಗಳಲ್ಲಿ ಯುವಜನರಲ್ಲಿ ಕಾಣುತ್ತಿದ್ದ ರಾಜಕೀಯ ಪ್ರಜ್ಞೆ ಮತ್ತು ಚಳುವಳಿಗಳು ಎಲ್ಲಿ, ಏಕೆ ಕಣ್ಮರೆಯಾದವು ಎಂದು ಆಶ್ಚರ್ಯವಾಯಿತು. ಇತ್ತೀಚೆಗೆ ದೂರದರ್ಶನದ ಸಂದರ್ಶನವೊಂದರಲ್ಲಿ 'ಹೆಬ್ಬೆಟ್ಟಿನ ರಾಮಕ್ಕ' ಚಿತ್ರದ ನಿರ್ದೇಶಕ ನಂಜುಂಡೇಗೌಡರು ತಾವು ಆ ದಶಕಗಳ ಚಳುವಳಿಗಳ ಉತ್ಪನ್ನವೆಂದೂ ಈ ಚಿತ್ರದಲ್ಲಿ ಆ ಚಳುವಳಿಗಳ ಹಿಂದಿದ್ದ ಲೋಹಿಯಾ ಪ್ರಜ್ಞೆಯೇ ತಮ್ಮ ಈ ಚಿತ್ರವನ್ನು ಕಟ್ಟಿರುವುದೆಂದೂ ಹೇಳಿದ್ದನ್ನು ಕೇಳಿದಾಗ ಆ ಕಾಲದ ಪ್ರಜ್ಞೆಯ ಬೀಜ ಎಲ್ಲೋ ಹೇಗೋ ಜೀವಂತವಿದೆ ಎಂಬ ಆಸೆಯ ಚಿಗುರೂ ಬೆಳೆಯಿತು. 'ಹೊಸ ಮನುಷ್ಯ' ಈ ಆಸೆಯ ಚಿಗುರು ಗಿಡವಾಗಿ, ಮರವಾಗಿ ಬೆಳೆಯಲು ಆಸರೆಯಾಗಲಿ ಎಂದು ಹಾರೈಸುತ್ತೇನೆ.

**–ರಾಜೇಶ್ವರಿ ತೇಜಸ್ವಿ,** ಮೂಡಿಗೆರೆ

ಜೂನ್ ಸಂಚಿಕೆಯಲ್ಲಿ ಡಾ. ಪ್ರಭುಶಂಕರ ಕುರಿತ ಶ್ರದ್ಧಾಂಜಲಿ ಬರೆಹ ನನ್ನ ಹಲವು ನೆನಪುಗಳಿಗೆ ಕಾರಣವಾಗಿದೆ. ಅವರು ನನಗೆ ಅಧ್ಯಾಪಕರಾಗಿದ್ದರು; ನನ್ನ ಹಿತೈಷಿಗಳಾಗಿದ್ದರು; ಜೊತೆಗೆ ಕುಟುಂಬದ ಸ್ನೇಹಿತರೂ ಆಗಿದ್ದರು. ನಮಗೆ ಪ್ರಿಯವಾಗುವ ಎಲ್ಲ ಮಾನವ ಮೌಲ್ಯಗಳ ಸಾಕಾರರೂಪವಾಗಿದ್ದ ಅವರ ಪಾಂಡಿತ್ಯ, ತಿಳಿ ಹಾಸ್ಯ, ಅಕ್ಕರೆ, ಆಸಕ್ತಿ, ಆಧ್ಯಾತ್ಮ ಅವರ ವ್ಯಕ್ತಿತ್ವದ ಲಾಂಛನಗಳು. ಅವರೊಬ್ಬ ಶುದ್ಧ ಅಪರಂಜಿ. ಅವರಿಗೆ ಈ ಮೂಲಕ ನನ್ನ ಗೌರವಪೂರ್ವಕ ನಮನಗಳು.

**–ಡಾ. ಹೆಚ್. ಎಸ್. ಈಶ್ವರ,** ಬೆಂಗಳೂರು

ತುಂಬಾ ವರ್ಷಗಳ ಹಿಂದೆ 'ಲಂಕೇಶ್ ಪತ್ರಿಕೆ'ಯಲ್ಲಿ ರಾಜಕೀಯ ಚುನಾವಣಾ ವಿಶ್ಲೇಷಣೆಯನ್ನು ಅಚ್ಚುಕಟ್ಟಾಗಿ, ಅರ್ಥಪೂರ್ಣವಾಗಿ ಬರೆಯುತ್ತಿದ್ದ ರವೀಂದ್ರ ರೇಷ್ಮೆಯವರ ಬರಹವನ್ನು ಈಗ ನಿಮ್ಮ ಪತ್ರಿಕೆಯಲ್ಲಿ ಓದಿ ಖುಷಿಯಾಯ್ತು. ಮುಂದೆಯೂ ಅವರು ನಿಮ್ಮ ಪತ್ರಿಕೆಯಲ್ಲಿ ಬರೆಯಲಿ.

**–ಡಾ. ಎಂ. ಈ. ಶಿವಕುಮಾರ ಹೊನ್ನಾಳಿ,** ರಾಣೇಬೆನ್ನೂರು

ಮಂತ್ರಕ್ಕೆ ಮಾವಿನಕಾಯಿ ಉದುರಿದ ಈ ದೈವ ಕೃಪೆಯ ಪುಣ್ಯ ಸಮಯದ ಪೂರ್ವಭಾವಿಯಾಗಿ ಜರುಗಿದ ನಮ್ಮ ರಾಜ್ಯದ ಚುನಾವಣೆಯನ್ನು "ಮಲದ ಗುಂಡಿಯ" ಉಪಮೆಯೊಂದಿಗೆ ವಿಚಾರಣೆಗೆ ಒಳಪಡಿಸಿರುವ ಸಂಪಾದಕರು, ನಮ್ಮ ರಾಜಕೀಯ 'ಮುತ್ಸದ್ದಿ'ಗಳ ಬಗ್ಗೆ ನಮಗೆ ತಿಳಿದಿರುವುದನ್ನೇ ಮತ್ತಷ್ಟು ಹರಿತವಾಗಿ ವ್ಯಕ್ತಪಡಿಸಿದ್ದಾರೆ. ದುರಂತವನ್ನು ಪ್ರಹಸನದ ಮೂಲಕ ಪ್ರತಿರೋಧಿಸುವುದನ್ನು ಬಿಟ್ಟು ಬೇರೆ ದಾರಿಯಾದರೂ ಏನು? ತಮ್ಮ ಚೇತನಗಳ ಸ್ವಾತಂತ್ರ್ಯದ ಪರಿವೆಯೇ ಇಲ್ಲದ ಹಲವು ಬಿರುದಾಂಕಿತ ಗೆಳೆಯರ ಲಜ್ಜೆಗೆಟ್ಟ ಕಸರತ್ತು, ಕಸದ ಬುಟ್ಟಿಗೆ ಸೇರಿದ್ದರ ಬಗ್ಗೆ ಸೂಕ್ಷ್ಮವಾಗಿಯೇ ಗಮನ ಸೆಳೆದಿದ್ದಾರೆ. ಗದ್ದುಗೆ ಕಳೆದುಕೊಂಡ ಮರುಕ್ಷಣದಿಂದ ದೈನೇಸಿಯಾಗಿರುವ ನನ್ನ ಒಂದು ಕಾಲದ ಹೀರೋ ಸಿದ್ದರಾಮಯ್ಯನವರ ಪರಿಸ್ಥಿತಿಯಿಂದಾಗಿ ನನ್ನ ಹಲವು ವ್ಯಥೆಗಳ ಪಟ್ಟಿಗೆ ಮತ್ತೊಂದು ಸೇರಿದೆ.

ಇವುಗಳೆಲ್ಲದರ ಪ್ರಸ್ಥಾನದಲ್ಲಿ ರೂಪುಗೊಂಡಿರುವ ಜೂನ್ ಸಂಚಿಕೆ ಹಲವು ವಿಶಿಷ್ಟ ಸಂಗತಿಗಳು ಹಾಗೂ ಸಂದರ್ಭಗಳಿಗೆ ನಮ್ಮನ್ನು ಮುಖಾಮುಖಿಯಾಗಿಸಿದೆ. ಕರೋಲ್ ಶಾಫರ್ ನಿರೂಪಿಸಿರುವ ಭಯಂಕರ ಸೈತಾನ್ ಸಿದ್ಧಾಂತದ ಕಿಂಚಿತ್ ಅರಿವು ನನಗಿರಲಿಲ್ಲ. ನಾಗರೀಕತೆ ಎಂಬುದು ಆಧುನಿಕ ವಿಜ್ಞಾನ ತಂತ್ರಜ್ಞಾನಗಳ ಸಾಮಗ್ರಿಗಳೊಂದಿಗೆ ಪೈಶಾಚಿಕವಾಗುತ್ತಿರುವುದಲ್ಲದೇ, ಅದು ನಮ್ಮ ನೆಲದಲ್ಲಿ ಬೇರೂರಿ ತನ್ನ ಜಾಲವನ್ನು ವಿಸ್ತರಿಸುತ್ತಿರುವ ಪರಿ ಕಂಗೆಡುವಂತೆ ಮಾಡಿದೆ. ದೂರದ ಜರ್ಮನಿಯಿಂದ ಸಿ.ಸದಾನಂದ ಎಂಬ ಯುವ ಕನ್ನಡಿಗನ ಡಿಂಡಿಮ ತನ್ನ ಹಲವು ಪ್ರಶ್ನೆಗಳೊಂದಿಗೆ ಭರವಸೆ ,ಸಂತೋಷ ಮೂಡಿಸಿತು. ಅಂತರಂಗವನ್ನು ಬೆಚ್ಚಗಾಗಿಸಿದ ಜಯಂತ್ ಪ್ರಬಂಧ, ಲಕ್ಷ್ಮೀಶ ತೋಳ್ಪಾಡಿಯವರ ದರ್ಶನಗಳು, ಜೈನ ಕಥಾ ಸರಿತ್ಸಾಗರದ ಹೊಳಹು ಹಾಗು ಅರಿವು ಭವಲೋಕದ ಜಂಜಾಟಗಳ ತಾಪಕ್ಕೆ ತಂಪೆರೆಯಿತು.ಅಜೆಂಡಾ ಆಧರಿತ, ತೀವ್ರ ಆತ್ಮಮರುಕದ ರೇಜಿಗೆ ಹುಟ್ಟಿಸುವ ಬರಹಗಳಿಂದ ಸುಬ್ಬು ಹೊಲೆಯಾರ್ ಆದಷ್ಟು ಬೇಗ ಹೊರಬರಲಿ ಎಂದು ಆಶಿಸುತ್ತೇನೆ. "ಬೀದಿ ಗುಡಿಸುವ ಸದ್ದು" ಇತ್ತೀಚಿನ ದಿನಗಳಲ್ಲಿ ಓದಿದ ಸುಂದರ ಕವನ. ಸುನಂದಾ ಅವರು ಕಡಮೆ ಏನಲ್ಲ. ಸ್ವಲ್ಪ ಜಾಸ್ತೀನೆ.

**–ಬಿ.ಎಸ್. ದಿವಾಕರ್,** ಅಲ್ಮೋರಾ (ಉತ್ತರಾಖಂಡ)

### ಬಿಳಿ ಶ್ರೇಷ್ಠತಾವಾದ ಮತ್ತು ಆಧುನಿಕತೆ

ಬಲಪಂಥೀಯತೆಗೆ ಮೂಲ ಕಾರಣ ಆಧುನಿಕತೆ ಎಂದು 'ಬಿಳಿ ಶ್ರೇಷ್ಠತಾವಾದ ಕುರಿತ ತಮ್ಮ ಲೇಖನದಲ್ಲಿ ಕರೋಲ್ ಶಾಫರ್ ಸರಿಯಾಗಿಯೇ ಗುರುತಿಸಿದ್ದಾರೆ. (ಜೂನ್ ಸಂಚಿಕೆ)ಆಧುನಿಕತೆಯ ಕೊನೆಯಿಲ್ಲದ ಆವಿಷ್ಕಾರಗಳು ಅಭಿವೃದ್ಧಿ ಪ್ರಕ್ರಿಯೆಗಳನ್ನು ದಂಡಿ ದಂಡಿಯಾಗಿ ಹೆಚ್ಚಿಸುತ್ತಲೇ ಇದ್ದು ಮನುಷ್ಯ ಕೌಟುಂಬಿಕ ಪ್ರೀತಿ ಮತ್ತು ಧಾರ್ಮಿಕ ಅನುಭೂತಿಗಳಿಂದ ವಂಚಿತನಾಗಿ ಅಸ್ವಸ್ಥನಾಗುತ್ತಿದ್ದಾನೆ. ಆಧುನಿಕತೆಯ ಚಾಲಕ ಶಕ್ತಿಯಾದ ವಿಜ್ಞಾನವು ತನ್ನ ಪ್ರಯೋಗಕ್ಕೆ ದಕ್ಕಿದ್ದು ಮಾತ್ರ ಸತ್ಯ ಮತ್ತು ಜ್ಞಾನ, ಮಿಕ್ಕಿದ್ದೆಲ್ಲ ಅಜ್ಞಾನವೆಂದು ಸಾರುತ್ತ ದೈವತ್ವವನ್ನು, ಆಧ್ಯಾತ್ಮವನ್ನು ನಿರಾಕರಿಸುತ್ತ ಬಂದಿರುವುದು ಬಲಪಂಥೀಯತೆ ಬೆಳೆಯಲು ಕಾರಣವಾಯಿತು. ವಿಜ್ಞಾನ ಎಷ್ಟೆಲ್ಲ ಬೆಳೆದಿದ್ದರೂ ಜಗತ್ತಿನಾದ್ಯಂತ ಮುಕ್ಕಾಲು ಪಾಲು ಜನರು ಆಸ್ತಿಕರೇ ಆಗಿರುವುದು ಏನನ್ನು ಸೂಚಿಸುತ್ತದೆ? ಅಜ್ಞಾನವೆ ಅಥವಾ ವಿನಯವೆ ? ಸಮುದಾಯಗಳ ನಂಬಿಕೆ– ಶ್ರದ್ಧೆಗಳನ್ನು , ಜೀವನ ಶೈಲಿಯನ್ನು ಸಾರಾಸಗಟಾಗಿ ಮೌಢ್ಯವೆಂದು ಕರೆಯುವದು ನಮಗೆಲ್ಲ ರೂಢಿಯಾಗಿದೆ. ಎಲ್ಲ ಸಮುದಾಯಗಳ ನಂಬಿಕೆಯನ್ನು ಗೌರವಿಸುತ್ತಲೇ ಅವರನ್ನು ವಿವೇಕಿಗಳನ್ನಾಗಿಸುವುದು ಆಧುನಿಕ ಜಗತ್ತಿನ ಸವಾಲಾಗಿದೆ.

ಬಲಪಂಥೀಯತೆಗೆ ರಾಜಕೀಯದ ಬಲ ದೊರೆಯದ ಹೊರತು ಅದಕ್ಕೆ ಬಲವೇ ಇಲ್ಲ. ರಾಜಕೀಯ ಅಧಿಕಾರದ ಬಲ ಹೆಚ್ಚಿದಷ್ಟೂ ಅನ್ಯರ ಬಗೆಗಿನ ಅಸಹನೆ ಹಿಂಸೆ ಹೆಚ್ಚುತ್ತಾ ಹೋಗುತ್ತದೆ. ಕೊನೆಗೂ ಈ ರಾಜಕೀಯ ಶಕ್ತಿಯೇ ರಾಷ್ಟ್ರದ ದುರಂತಕ್ಕೆ, ವಿನಾಶಕ್ಕೆ ಕಾರಣವಾಗುತ್ತದೆ. ಬಲಪಂಥೀಯತೆಗೆ ಅನ್ಯ ಸಿದ್ಧಾಂತಗಳ ಮೂಲಕ ಉತ್ತರಿಸುವುದರಲ್ಲಿ ಅರ್ಥವಿಲ್ಲ. ಸರಳ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದೇ ಉತ್ತರ.

**–ಎನ್. ಎಮ್. ಕುಲಕರ್ಣಿ,** ಹೆಗ್ಗೋಡು

## ಮಾರ್ಕ್ಸ್‌ನ ಸಮಕಾಲೀನತೆ : ಕೆಲವು ಪ್ರತಿಕ್ರಿಯೆಗಳು

### ವಿವರಣೆಗಳಿಲ್ಲದ ಸಮರ್ಥನೆ

ನಿಮ್ಮ ಪತ್ರಿಕೆಯ ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಡಾ. ರಾಜಾರಾಂ ತೋಳ್ಪಾಡಿಯವರ ಮಾರ್ಕ್ಸ್‌ನ ಕುರಿತ ಲೇಖನ ಓದಿದೆ. ತಾನು ಹುಟ್ಟಿಕೊಂಡ ಯೂರೋಪ್‌ನಲ್ಲೇ ಅದು ವಾಸ್ತವಿಕ ರಾಜಕಾರಣದಿಂದಲೂ ಮತ್ತು ಚರಿತ್ರೆಯ ತನ್ನ ತಪ್ಪು ಗ್ರಹಿಕೆ, ವಿಶ್ಲೇಷಣೆ ಮತ್ತು ಅವುಗಳನ್ನಾಧರಿಸಿದ ರಾಜಕಾರಣದ ತಪ್ಪು ಹೆಜ್ಜೆಗಳಿಂದಾಗಿ ಬೌದ್ಧಿಕ ನೆಲೆಯಲ್ಲೂ ಈ ಸಿದ್ಧಾಂತ ಮತ್ತು ರಾಜಕಾರಣ ನಾಮಾವಶೇಷವಾಗಿದೆ. ಆದರೂ ಇದು ಸಮಕಾಲೀನವಾಗಿದೆ ಎಂದು ಹೇಳುವ ಧೈರ್ಯ ಅದರಿಂದ ಅಮೂರ್ತ ಬೌದ್ಧಿಕ ಸುಖ ಅನುಭವಿಸುತ್ತಾ ಬಂದಿರುವ ನಮ್ಮ ದೇಶದ ಪಂಡಿತರಿಗೆ ಮಾತ್ರ ಸಾಧ್ಯವೇನೋ!

ಲೇಖಕರು ಪೋಪರ್‌ನ ಪ್ರಸ್ತಾಪ ಮಾಡುತ್ತಾರೆ. ಗ್ರಾಂಶಿಯ ಪ್ರಸ್ತಾಪ ಮಾಡುತ್ತಾರೆ. ಹಾಗೂ ವಿಭಿನ್ನ ಚಾರಿತ್ರಿಕ ದೃಷ್ಟಿಗಳ–ಅವು ಯಾವುವೆಂಬುದನ್ನು ಸ್ಪಷ್ಟವಾಗಿ ಹೇಳದೆ–ಹಿನ್ನಲೆಯ ವಿಮರ್ಶೆಗಳ ಪ್ರಸ್ತಾಪ ಮಾಡುತ್ತಾರೆ. ಆದರೆ ಇವರೆಲ್ಲ ಏನು ಹೇಳುತ್ತಾರೆ ಮತ್ತು ಏಕೆ ಅದನ್ನು ಹೇಳುತ್ತಾರೆ ಎಂಬುದನ್ನು ಮಾತ್ರ ತಿಳಿಸುವುದಿಲ್ಲ. ಹಾಗೇ ಕಮ್ಯೂನಿಸ್ಟ್ ಪಕ್ಷಗಳು ಸಿದ್ಧಾಂತದಲ್ಲಿ ಮಾಡಿದ ವಿರೂಪಗಳ ಬಗ್ಗೆಯೂ ಪ್ರಸ್ತಾಪಿಸುತ್ತಾರೆ. ಆದರೆ ಅವು ಏನು, ಏಕೆ ಎಂದು ವಿವರಿಸುವ ಗೋಜಿಗೆ ಹೋಗುವುದಿಲ್ಲ. ಬದಲಿಗೆ ಇವೆಲ್ಲವೂ ಮಾರ್ಕ್ಸ್‌ವಾದವನ್ನು ಗ್ರಹಿಸಬೇಕಾದ ಬಗೆಯನ್ನು ಹೆಚ್ಚು ಸೂಕ್ಷ್ಮಗೊಳಿಸಿವೆ ಎಂದು ಒಂದೇ ಏಟಿನಲ್ಲಿ ಹೇಳಿ ತಮ್ಮ ವಾದವನ್ನು ಮುಂದುವರೆಸುತ್ತಾರೆ. ಆದರೆ ಇವೆಲ್ಲ ಏಕೆ ಅಗತ್ಯವಾದವು ಎಂದು ಹೇಳುವುದಿಲ್ಲ ಮತ್ತು ಇವೆಲ್ಲವೂ ಮಾರ್ಕ್ಸ್‌ವಾದದ ಮೂಲ ನೆಲೆಗಳನ್ನೇ ಪಲ್ಲಟಗೊಳಿಸುವಂತಹವು ಎಂಬುದು ಅವರ ಗಮನಕ್ಕೆ ಬರುವುದಿಲ್ಲ.

ಇನ್ನು ಮಾರ್ಕ್ಸ್‌ವಾದಕ್ಕೆ ಭಾರತೀಯ ಮಾರ್ಕ್ಸ್‌ವಾದಿ ಚಿಂತಕರ ಕೊಡುಗೆ ಏನು? ನಾಮಾವಶೇಷದ ಹಂತ ತಲುಪಿರುವ ಕಮ್ಯೂನಿಸ್ಟ್ ಪಕ್ಷಗಳ ಹೊರತಾಗಿ? ಹಲವು ಹೋರಾಟಗಳ ದಾಖಲೆ ಹೊಂದಿದ್ದರೂ ಈ ಪಕ್ಷಗಳ ಅವನತಿಗೆ ಕಾರಣಗಳೇನು? ಈ ಯಾರಾದರೂ ನಿಷ್ಠುರವಾಗಿ ಯೋಚಿಸುವ ಪ್ರಯತ್ನ ಮಾಡಿದ್ದಾರೆಯೇ? ಈ ಬಗ್ಗೆಯೂ ಈ ಲೇಖನ ಏನೂ ಹೇಳುವುದಿಲ್ಲ..

ಹಾಗೇ, ಮೂಲತಃ ಮಾರ್ಕ್ಸ್‌ವಾದಿಯಾಗಿದ್ದ ಭಾರತದ ಸಮಾಜವಾದಿ ಆಂದೋಲನ ತನ್ನ ನಾಯಕ ಜಯಪ್ರಕಾಶ್ ನಾರಾಯಣರೊಂದಿಗೆ ಬಹುಬೇಗನೆ ಅದನ್ನು ತೊರೆದರೇಕೆ? ಅವರೆಲ್ಲ ಚರಿತ್ರೆಯನ್ನು ಮಾರ್ಕ್ಸ್‌ನಗಿಂತ ಬಹು ಭಿನ್ನವಾಗಿ ನೋಡುವ (ಬಾಹ್ಯ ಪ್ರಪಂಚದ ಪರಿಣಾಮಗಳಿಗಿಂತ ಮನುಷ್ಯನ ಆಂತರಿಕ ಪ್ರಪಂಚದ ಪ್ರಕಾಶವನ್ನು ಹೆಚ್ಚಾಗಿ ನೆಚ್ಚಿದ್ದ) ಗಾಂಧಿಯವರ ಪ್ರಭಾವಕ್ಕೆ ಒಳಗಾಗಲು ಕಾರಣಗಳೇನು? ಮತ್ತು ಭಾರತದ ಸಮಾಜವಾದಿಗಳಲ್ಲಿ ಹೆಚ್ಚು ತಾತ್ವಿಕ ಜಿಜ್ಞಾಸುವಾಗಿದ್ದ ಲೋಹಿಯಾ ಮಂಡಿಸಿದ ಚರಿತ್ರೆಯನ್ನು ನೋಡುವ ಪೌರ್ವಾತ್ಯ ದೃಷ್ಟಿಕೋನವು ಮಾರ್ಕ್ಸ್‌ವಾದವನ್ನು ಕುರಿತಂತೆ ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ನೆಲೆಗಳಿಂದ ಮಾಡಿದ ಟೀಕೆ–ಇವಾವುವನ್ನೂ ಲೆಕ್ಕಿಸದೆ ತೋಳ್ಪಾಡಿಯವರು ನಿಶ್ಚಿಂತೆಯಿಂದ ತಮ್ಮ ಮಾರ್ಕ್ಸ್‌ವಾದದ ಬಂಡಿಯನ್ನು ಹೊಡೆದುಕೊಂಡು ಹೋಗಿದ್ದರೆ ಅದಕ್ಕೆ ಕಾರಣ, ಅವರ ಬಂಡಿಯ ದಾರಿ ಈ ನೆಲದ ಮೇಲೆ ಇಲ್ಲದಿರುವುದೇ ಆಗಿದೆ.

**–ಡಾ. ಎಂ. ನಾರಾಯಣ** ಬೆಂಗಳೂರು

ರಾಜಾರಾಮ ತೋಳ್ಪಾಡಿಯವರ ಪ್ರಕಾರ ಮಾರ್ಕ್ಸ್ ನಮ್ಮ ಸಮಕಾಲೀನನೇ ಇರಬಹುದು. ಆದರೆ ಅವನ ಸಿದ್ಧಾಂತವನ್ನು ಹೇಳಿಕೊಂಡು ಸ್ಥಾಪಿತವಾದ ಪ್ರಭುತ್ವಗಳೆಲ್ಲ ಬಿದ್ದುಹೋದ ಮೇಲೆ ಈಗ ಈ ಸಿದ್ಧಾಂತ ಕೆಲವು ತಿದ್ದುಪಡಿಗಳೊಂದಿಗೆ ಹೆಚ್ಚು ಪ್ರಸ್ತುತವಾಗಿದೆ ಎಂದು ಹೇಳುವುದು ಒಣ ಬುದ್ಧಿಜೀವಿತ್ವವಾಗುತ್ತದೆಯೇ ಹೊರತು ನೆಲದ ಸಮಕಾಲೀನತೆ ಆಗುವುದಿಲ್ಲ. ಸಂಸದೀಯ ಪ್ರಜಾಪ್ರಭುತ್ವದ ನಿಯಮಗಳನ್ನು ಪಾಲಿಸಬಯಸುವ ಪಕ್ಷ ಮತ್ತು ಸರ್ಕಾರಗಳು ಮಾರ್ಕ್ಸ್‌ವಾದಿಯಾಗಿರಲು ಹೇಗೆ ಸಾಧ್ಯ? ಅವರ 'ಕ್ರಾಂತಿ' ಕಲ್ಪನೆಯ ಗತಿ? ಅದನ್ನು ಅವರು ಕೈಬಿಟ್ಟಿದ್ದಾರೆಯೇ?

**–ಸಿ.ಎಸ್. ರಾಮಚಂದ್ರ,** ಶಿವಮೊಗ್ಗ

ಮಾರ್ಕ್ಸ್‌ನೋ ಮತ್ತೊಬ್ಬನೋ ನಮಗೆ ಸಮಕಾಲೀನನಾಗಬೇಕಾದರೆ ಮೊದಲು ಅವನು ಕಾಮನ್ ಸೆನ್ಸ್ ಮಟ್ಟದಲ್ಲಾದರೂ ಜನಸಾಮಾನ್ಯರಿಗೂ ಅರ್ಥವಾಗುವಂತಿರಬೇಕು. ನಮ್ಮ ಬುದ್ಧನಂತೆ, ಗಾಂಧಿಯಂತೆ, ಲೋಹಿಯಾರಂತೆ. ಆದರೆ ಮಾರ್ಕ್ಸ್‌ವಾದ ಪಂಡಿತರಿಗೂ ತೊಂದರೆ ಕೊಡುವ ಸಿದ್ಧಾಂತ. ಈ ತೊಂದರೆಗಳ ಸಹಿತವೇ ಅವರು ಅದನ್ನು ಅರ್ಥ ಮಾಡಿಕೊಂಡು ಹೇಳಿದ್ದನ್ನು ನಾವು ನಂಬಬೇಕು!

**–ಡಾ. ಜಿ. ನಾಗರಾಜಮೂರ್ತಿ,** ಮೈಸೂರು

## ಕಾಲದೇಶಗಳನ್ನು ಮೀರಿದ ಪ್ರಸ್ತುತತೆ

೨೦೧೮ಕ್ಕೆ ಕಾರ್ಲ್‌ಮಾರ್ಕ್ಸ್ ಜನನವಾಗಿ ೨೦೦ ವರ್ಷ ಕಳೆಯಿತು; ಮಾರ್ಕ್ಸ್‌ವಾದದ ಮುಖ್ಯ ಪಠ್ಯಗಳಲ್ಲಿ ಒಂದು, 'ದ ಕ್ಯಾಪಿಟಲ್' ಪ್ರಕಟವಾಗಿ ೧೫೧ ವರ್ಷಗಳಾದವು. ಮಾರ್ಕ್ಸ್ ಮತ್ತು ಅವನು ಹುಟ್ಟು ಹಾಕಿದ ಸಿದ್ಧಾಂತವನ್ನು ಈಗ ನೆನಪು ಮಾಡಿಕೊಳ್ಳುವುದಕ್ಕೆ ನಮಗೆ ಇನ್ನೊಂದು ಕಾರಣವಿದೆ. ಭಾರತದ ತಮಿಳುನಾಡು ರಾಜ್ಯದ ನಾಗಪಟ್ಟಣಂ ಜಿಲ್ಲೆಯ ಕಿಲುವೆನ್ಮಣಿ ಎಂಬ ಹಳ್ಳಿಯಲ್ಲಿ ಭೂಮಾಲಕರು ೪೪ ದಲಿತರನ್ನು ೨೨ ಮಕ್ಕಳೂ ಸೇರಿದಂತೆ – ಗುಡಿಸಲು ಒಂದರ ಒಳಗೆ ಕೂಡಿ ಹಾಕಿ, ಸಜೀವ ಸುಟ್ಟು ಸಾಯಿಸಿದ ಘಟನೆಯ ೫೦ರ ಆಚರಣೆಯ ವರ್ಷ, ೨೦೧೮. ಕಿಲುವೆನ್ಮಣಿಯಲ್ಲಿ ಅಂದು ಸಾವಿಗೀಡಾದ ದಲಿತರೆಲ್ಲರೂ ಭೂಹೀನ ಕೃಷಿಕೂಲಿಗಳಾಗಿದ್ದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರೈತ ಸಂಘಟನೆಯ ನಾಯಕತ್ವದಲ್ಲಿ ಹೆಚ್ಚುವರಿ ದಿನಗೂಲಿಗಾಗಿ ಚಳುವಳಿ ನಡೆಸಿದ್ದರು. ಇದನ್ನು ಸಹಿಸದ ಆ ಪ್ರದೇಶದ ಸವರ್ಣೀಯ ಭೂಮಾಲಕರು ೧೯೬೮ ಡಿಸೆಂಬರ್ ೨೫, ಕ್ರಿಸ್‌ಮಸ್ ದಿನದಂದು ಆ ಬಡಪಾಯಿ ದಲಿತರ ಹತ್ಯಾಕಾಂಡವನ್ನು ನಡೆಸಿದರು. ಪ್ರಕರಣದ ಕುರಿತು ಪೋಲೀಸರು ಒಲ್ಲದ ಮನಸ್ಸಿನಿಂದ ಕೇಸು ದಾಖಲಿಸಿದರು ಮತ್ತು ಅದಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಕಲೆ ಹಾಕುವುದರಲ್ಲಿ, ಯಥಾ ಪ್ರಕಾರ ಅಸಡ್ಡೆ ತೋರಿದರು; ಯಥಾಪ್ರಕಾರ ತಮಿಳುನಾಡಿನ ಹೈಕೋರ್ಟು ಹತ್ಯಾಕಾಂಡದಲ್ಲಿ ಹೆಸರಿಸಲಾದ ಎಲ್ಲ ಆರೋಪಿಗಳನ್ನು ಖುಲಾಸೆಗೊಳಿಸಿತು. ತಮಿಳುನಾಡಿನ ಎರಡು ಪ್ರಮುಖ ರಾಜಕೀಯ ಪಕ್ಷಗಳು, ಕಾಂಗ್ರೆಸ್ ಮತ್ತು ಡಿ.ಎಂ.ಕೆ, ಕಿಲುವೆನ್ಮಣಿಯರಲ್ಲಿ ನಡೆದ ಈ ಘಟನೆಯ ಬಗ್ಗೆ ಆತಂಕ ಬಿಡಿ, ಕುತೂಹಲ ಕೂಡ ತೋರಲಿಲ್ಲ. ಕಿಲುವೆನ್ಮಣಿಯ ದಲಿತ ದಹನದ ಮುಖ್ಯ ರೂವಾರಿಗಳಲ್ಲಿ ಒಬ್ಬನಾಗಿದ್ದ ಭೂಮಾಲಕ ಗೋಪಾಲಕೃಷ್ಣ ನಾಯುಡು ತಮಿಳುನಾಡು ಕಾಂಗ್ರೆಸ್‌ನ ಓರ್ವ ಧುರೀಣನಾಗಿದ್ದ. ರಾಜ್ಯದ ಆಗಿನ ಮುಖ್ಯಮಂತ್ರಿ ಮತ್ತು ಡಿ.ಎಂ.ಕೆ. ನಾಯಕ ಸಿ.ಎನ್. ಅಣ್ಣಾದೊರೈ ಈ ಘಟನೆಯ ಬಗ್ಗೆ ಒಂದಿಷ್ಟೂ ವಿಚಲಿತರಾಗದೆ 'ಜನ ಇದನ್ನು ಮರೆಯಬೇಕು' ಎಂದು ಅಪ್ಪಣೆ ಕೊಡಿಸಿದರು; ಒಂದು ತಿಂಗಳ ನಂತರ, ತಮಿಳುನಾಡಿನ ದ್ರಾವಿಡ ಚಳುವಳಿಯ ಸಂಸ್ಥಾಪಕ ಹಾಗೂ ವಿಚಾರವಾದಿ, ಇ.ವಿ.ರಾಮಸ್ವಾಮಿ ಪೆರಿಯಾರ್ 'ದುಡಿಮೆಯ ಕೂಲಿ, ಚಳುವಳಿ ಮಾಡಿ ಪಡೆಯುವಂತಹದ್ದಲ್ಲ. ಕೂಲಿಯನ್ನು ನಿರ್ಧರಿಸುವುದು ಮಾರುಕಟ್ಟೆ' ಎಂದು ಹೇಳಿದರು. ಕಿಲುವೆನ್ಮಣಿ, ಈ ದೇಶದ ಅಧಿಕಾರ ವ್ಯವಸ್ಥೆಯಲ್ಲಿ ಆಸ್ತಿ ಮತ್ತು ಜಾತಿ ಹೇಗೆ ನಿರ್ಣಾಯಕವಾಗುತ್ತವೆ ಎಂಬುದಕ್ಕೆ ಒಂದು ಜ್ವಲಂತ ನಿದರ್ಶನ. ಕಾರ್ಲ್‌ಮಾರ್ಕ್ಸ್ ಹುಟ್ಟಿ ೧೫೦ ವರ್ಷ ಕಳೆದ ನಂತರ, ಮಾರ್ಕ್ಸ್‌ವಾದದ ಮೇರು ಕೃತಿ 'ದ ಕ್ಯಾಪಿಟಲ್' ಪ್ರಕಟವಾಗಿ ೧೦೧ ವರ್ಷಗಳ ನಂತರ ಭಾರತದ ಯಾರೂ ಕೇಳಿ ಅರಿಯದ ಒಂದು ಹಳ್ಳಿಯ ಬಡಕೃಷಿ ಕೂಲಿಗಳನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಂಘಟಿಸಿ ಹೆಚ್ಚಿನ ಕೂಲಿಗಾಗಿ ಚಳುವಳಿಗೆ ಅಣಿಗೊಳಿಸಿದ್ದು, ಮತ್ತು ರಾಜ್ಯದ ಅಧಿಕಾರ ವ್ಯವಸ್ಥೆ ಈ ಚಳುವಳಿಯನ್ನು ಬಗ್ಗುಬಡಿಯಲು ಯತ್ನಿಸಿದ್ದು – ಈ ವಿದ್ಯಮಾನವೇ ಕಾಲದೇಶಗಳನ್ನು ಮೀರಿದ ಮಾರ್ಕ್ಸ್‌ವಾದದ ಪ್ರಸ್ತುತತೆಗೆ ಸಾಕ್ಷಿ. ರಾಜಾರಾಂ ತೋಳ್ಪಾಡಿಯವರ ಲೇಖನದ ತಲೆಬರಹವೂ ಅದನ್ನೇ ಹೇಳುತ್ತದೆ – 'ನಮ್ಮ ಸಮಕಾಲೀನನೇ ಆದ ಕಾರ್ಲ್‌ಮಾರ್ಕ್ಸ್'.

ನಿಜ, ರಷ್ಯಾದಲ್ಲಿ ಕಮ್ಯುನಿಸ್ಟ್ ಅಧಿಕಾರ ವ್ಯವಸ್ಥೆ ಕೊನೆಗೊಂಡು ಮೂರು ದಶಕಗಳೇ ಸಂದಿವೆ. ಚೀನಾದ ಹಾಲೀ ಸರಕಾರವನ್ನು ನೂರಕ್ಕೆ ನೂರು ಕಮ್ಯುನಿಸ್ಟ್ ಎಂದು ಪರಿಗಣಿಸಬಹುದೇ ಎಂಬ ಬಗ್ಗೆ ಹಲವು ವಾದಗಳಿವೆ. ಕಮ್ಯುನಿಸಂನ ಈ ಹಿನ್ನಡೆ ಅಲಕ್ಷಿಸಿ ಬಿಡುವಷ್ಟು ಸಣ್ಣ ಸಂಗತಿ ಏನಲ್ಲ. ತೋಳ್ಪಾಡಿಯವರಿಗೂ ಇದರ ಅರಿವು ಇದೆ. ತಮ್ಮ ಲೇಖನದಲ್ಲಿ ಒಂದೆಡೆ ಅವರು ಹೀಗೆ ಬರೆಯುತ್ತಾರೆ, '೨೦ನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಸಂಘಟಿತ ಕಮ್ಯುನಿಸ್ಟ್ ವ್ಯವಸ್ಥೆಗಳು, ಮಾರ್ಕ್ಸ್‌ನ ಈ ಇತಿಹಾಸದ ತತ್ವಜ್ಞಾನೀಯ ದೃಷ್ಟಿಯನ್ನು ಚರಿತ್ರೆಯ ಚಲನೆ ಹಾಗೂ ಗತಿಶೀಲತೆಯು ಉಲ್ಲಂಘಿಸಲಾಗದ ನಿಯಮವನ್ನಾಗಿಸಿ ವಿರೂಪಗೊಳಿಸಿದೆ.' ಚರಿತ್ರೆ ಕುರಿತ ಮಾರ್ಕ್ಸ್‌ನ ಭೌತವಾದಿ ನಿರೂಪಣೆ ಹಾಗೂ ದುಡಿಮೆಗೆ ಆತ ನೀಡಿದ ಪ್ರಾಶಸ್ತ್ಯಗಳನ್ನು ಮಾರ್ಕ್ಸ್‌ನ ಕಾಲಾನಂತರ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ವ್ಯವಸ್ಥೆಗಳು ಎಲ್ಲ ಕಾಲಕ್ಕೂ ಸಲ್ಲುವ ಪವಿತ್ರ ಗ್ರಂಥವೊಂದರ ಸುಭಾಷಿತಗಳಂತೆ ಪರಿಗಣಿಸಿದವು; ಮತ್ತು ಚರಿತ್ರೆಯ ಚಲನಶೀಲತೆ ಮತ್ತು ಪರಿವರ್ತನಶೀಲತೆಗಳನ್ನೇ ಅಲ್ಲಗಳೆದವು. ಆದರೆ ಕಮ್ಯುನಿಸ್ಟ್ ಪಕ್ಷ ಮತ್ತು ಸರಕಾರಗಳಿಗೆ ಬದ್ಧನಾಗದ, ಮಾರ್ಕ್ಸ್‌ವಾದಿ ಚಿಂತಕ ಆ್ಯಂಟೋನಿಯೋ ಗ್ರಾಮ್‌ಶಿಯನ್ನು ಹೆಸರಿಸುತ್ತ ಮಾರ್ಕ್ಸ್‌ನ ಚಾರಿತ್ರಿಕ ದೃಷ್ಟಿಯ ಹೊಸ ನೋಟಗಳ ಕುರಿತು ತೋಳ್ಪಾಡಿ ಹೇಳುವ ಮಾತು ಕೂಡ ಈ ಭಿನ್ನಮತೀಯ ಮಾರ್ಕ್ಸ್‌ವಾದದ ಇರವನ್ನೇ ಸೂಚಿಸುತ್ತದೆ. ಜಗತ್ತಿನ ಹಲವು ದೇಶಗಳ ಕಮ್ಯುನಿಸ್ಟ್ ಪಕ್ಷಗಳ 'ಪಾರ್ಟಿಮಾರ್ಕ್ಸ್‌ವಾದ' ಮತ್ತು ಕಮ್ಯುನಿಸ್ಟ್ ಅಧಿಕಾರ ವ್ಯವಸ್ಥೆಗಳ 'ಅಧಿಕೃತ' ಮಾರ್ಕ್ಸ್‌ವಾದಗಳಿಗಿಂತ, ಹೆಚ್ಚು ಪ್ರಖರ ವಾಗ್ವಾದಗಳಿಗೆ ಅವಕಾಶ ಮಾಡಿಕೊಡುವ ಹಲವು ಬಗೆಯ ಭಿನ್ನಮತೀಯ ಮಾರ್ಕ್ಸ್‌ವಾದಗಳೂ ಇವೆ.

ಆಧುನಿಕ ಯುರೋಪ್‌ನ ನ್ಯೂಲೆಫ್ಟ್ ಹಾಗೂ ಫ್ರಾಂಕ್‌ಫರ್ಟ್ ಸ್ಕೂಲ್‌ನ ಮಾರ್ಕ್ಸ್‌ವಾದಿಗಳ ಚಿಂತನೆ ಈ ಬಗೆಯ ಭಿನ್ನಮತೀಯ ಮಾರ್ಕ್ಸ್‌ವಾದಕ್ಕೆ ಒಂದು ಉದಾಹರಣೆ. ಮಾರ್ಕ್ಸ್‌ನ ಬರಹ ಮತ್ತು ಬೈಬಲ್‌ನ ಬೋಧನೆಗಳನ್ನು ಒಟ್ಟೊಟ್ಟಿಗೇ ಸ್ವೀಕರಿಸುವ, ದಕ್ಷಿಣ ಅಮೇರಿಕದ ಹಲವು ದೇಶಗಳ 'ಲಿಬರೇಷನ್ ಥಿಯೋಲಜಿ' ಎಂಬ ಸಂಶ್ಲೇಷಿತ ಮಾರ್ಕ್ಸ್‌ವಾದ ಅಂತಹದ್ದೇ ಇನ್ನೊಂದು ಉದಾಹರಣೆ. 'ಅಸ್ತಿತ್ವದಲ್ಲಿರುವ ಎಲ್ಲದರ ನಿಷ್ಠುರ ವಿಮರ್ಶೆ' ಆಗಿರುವ ಮಾರ್ಕ್ಸ್‌ವಾದ ಆ ಕಾರಣಕ್ಕೇನೆ ಸದಾ ಜೀವಂತವಾಗಿರುತ್ತದೆ.

**–ಜಿ. ರಾಜಶೇಖರ,** ಉಡುಪಿ

## ಮೊದಲು ಕ್ರೈಸ್ತ ಧರ್ಮ, ನಂತರ ಕಮ್ಯುನಿಸಂ!

ಎಳವೆಯಲ್ಲಿ ನಮ್ಮನ್ನು ಮೊದಲು ಸೆಳೆದಿದ್ದೇ ಮಾರ್ಕ್ಸ್‌ವಾದಿ ಚಿಂತನಕ್ರಮ. ಅದರಲ್ಲೂ ಚರಿತ್ರೆಯನ್ನು ವಿಶ್ಲೇಷಿಸುವ ಅವರ ಭೌತವಾದಿ ಸಿದ್ಧಾಂತ. ಆಗ ನಮಗೆ ವೈಜ್ಞಾನಿಕವಾಗಿ ಕಂಡಿದ್ದು ಅದೊಂದೇ ಸಿದ್ಧಾಂತ. ಅಂಬೇಡ್ಕರ್ ಮತ್ತು ಲೋಹಿಯಾ ಚಿಂತನೆಗಳಿಗೆ ನಾವು ಕಣ್ಣು ತೆರೆದಿದ್ದು ನಂತರವೇ. ಲೋಹಿಯಾ ಹೇಳಿದಂತೆ 'ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ತೆತ್ತುಕೊಂಡವನಿಗೆ ಎಂದೂ ಖಾಸಗಿ ಆಸ್ತಿಯ ಮೋಹ ಕಾಡಲಾರದು' ಎಂಬುದು ಈಗಲೂ ಉಳಿದಿರುವ ಆ ತತ್ವದ ಪ್ರಮುಖ ಆಕರ್ಷಣೆ.

ಆದರೆ ೧೯೪೨ರಲ್ಲಿ ಇತರೆ ಅನೇಕ ಸಮಾಜವಾದಿ ತರುಣರಂತೆ ಬ್ರಿಟಿಷರ ವಿರುದ್ಧ ಭೂಗತ ಚಟುವಟಿಕೆಗಳಲ್ಲಿ ನಿರತರಾಗಿದ್ದ ಡಾ. ರಾಮಮನೋಹರ ಲೋಹಿಯಾ, ತಮ್ಮ ಕಣ್ಣೆದುರೇ ಸಾಮ್ರಾಜ್ಯಶಾಹಿ ಪರ ನಿಂತ ಕಮ್ಯುನಿಸ್ಟರ ವರ್ತನೆಯಿಂದ ದಿಗ್ಭ್ರಾಂತರಾಗಿ ಮಾರ್ಕ್ಸ್‌ವಾದಿ ಸಿದ್ಧಾಂತದ ಶೋಧನೆಗೆ ತೊಡಗಿದರು. ಆಗ ಅವರು ಮಂಡಿಸಿದ ವಿಚಾರಗಳಿಂದಾಗಿ ನನ್ನಂಥವರ ಮಬ್ಬು ಹರಿಯಿತು. ಮುಖ್ಯವಾಗಿ ಅವರ 'Economics after Marx' (೧೯೪೩) ಮತ್ತೂ ಮುಂದಕ್ಕೆ 'Marxism and Socialism' (೧೯೫೨) ಮೂಲಕ ಮಂಡನೆಯಾದ ವಿಶ್ಲೇಷಣೆಯ ಮೂಲಕ ನನ್ನ ತಲೆಮಾರಿಗೆ ಹೊಸ ಕಣ್ಣು ಮೂಡಿದ್ದು ಸುಳ್ಳಲ್ಲ.

ಈ ಪುಟ್ಟ ಪ್ರತಿಕ್ರಿಯೆಯಲ್ಲಿ ಆ ಅಂಶಗಳನ್ನೆಲ್ಲ ಮುಂದಿಟ್ಟು ಮಾರ್ಕ್ಸ್‌ವಾದದ ಇತಿಮಿತಿಗಳನ್ನು ಚರ್ಚಿಸುವುದು ಸಾಧ್ಯವಿಲ್ಲವಾದರೂ, 'ಮೂರನೇ ಜಗತ್ತಿನ ಪಾಲಿಗೆ ಕಮ್ಯುನಿಸಂ ಎಂದೂ ಬಿಡುಗಡೆಯ ಸಾಧನವಾಗಿಲ್ಲ; ಉದಾಹರಣೆಗೆ ಆರಂಭದಿಂದಲೂ ಮೇಲ್ಜಾತಿಯವರ ನಾಯಕತ್ವದಲ್ಲೇ ಬೆಳೆದ ಭಾರತದ ಕಮ್ಯುನೀಸ್ಟ್ ಪಕ್ಷ ಪ್ರಣೀತವಾದ ಮಾರ್ಕ್ಸ್‌ವಾದ ಇನ್ನೂ ಇಲ್ಲಿನ ಕಟುವಾಸ್ತವವಾದ ಜಾತಿ ವ್ಯವಸ್ಥೆಯೊಂದಿಗೆ ಒಂದು ಖಚಿತ ತಾತ್ವಿಕ ಅನುಸಂಧಾನವನ್ನು ಕಂಡುಕೊಳ್ಳಲಾಗಿಲ್ಲ. ಬಿಳಿಯರ ಜಗತ್ತು, ಕರಿಯ ಜಗತ್ತಿನ ಮೇಲೆ ತಾನು ಸಾಧಿಸಿದ ಯಜಮಾನಿಕೆಯನ್ನು ಮುಂದುವರೆಸಿಕೊಂಡು ಹೋಗುವ ಸಲುವಾಗಿ ಮೊದಲು ಕ್ರೈಸ್ತ ಧರ್ಮವನ್ನು ಹೇರಿತು, ನಂತರ ಕಮ್ಯುನಿಸಂ ಸಿದ್ಧಾಂತವನ್ನು ಹೇರಿತು' ಎಂಬ ಲೋಹಿಯಾ ವ್ಯಾಖ್ಯಾನವನ್ನು ನಾವು ಬದಿಗೊತ್ತುವುದು ಸಾಧ್ಯವಿಲ್ಲ.

ಈ ಎಲ್ಲ ಹಿನ್ನೆಲೆಯಲ್ಲಿ 'ನಮ್ಮ ಸಮಕಾಲೀನನೇ ಆದ ಕಾರ್ಲ್‌ಮಾರ್ಕ್ಸ್' ಲೇಖನ ಓದುವಾಗ ಮಾರ್ಕ್ಸ್‌ವಾದ ಕುರಿತ ಲೇಖಕರ ಅಮಾಯಕ ಉತ್ಸಾಹ ಕಂಡು ಸೋಜಿಗವೇ ಆಯಿತು. 'ಕ್ರಾಂತಿಯನ್ನು ಅಥವಾ ಬದಲಾವಣೆಯನ್ನು ಮಾನವನ ಪ್ರಜ್ಞಾಪೂರ್ವಕ ಪ್ರಯತ್ನದ ಪರಿಣಾಮವೆಂದು ವಾದಿಸುವ ಮಾರ್ಕ್ಸ್ ಇಂದಿನ ನಮ್ಮ ಕಾಲದ ಸಾಮುದಾಯಿಕತೆಯ ಮತ್ತು ಸೃಜನಶೀಲತೆಯ ನಿರಾಕರಣೆಯ ಯುಗದಲ್ಲಿ ಭರವಸೆಯ ಬೆಳಕು ಬೀರುವವನಾಗಿದ್ದಾನೆ' ಎಂಬ ಅವರ ತೀರ್ಮಾನವು ಒಂದು ಶತಮಾನದ ಜಾಗತಿಕ ಬೆಳವಣಿಗೆಗಳಷ್ಟೇ ಅಲ್ಲ, ಭಾರತೀಯ ವಾಸ್ತವಗಳಿಗೂ ಕುರುಡಾದ ಉದ್ಗಾರವಾಗಿಯೇ ಭಾಸವಾಯಿತು.

**–ಎನ್.ಎಸ್. ಶಂಕರ್,** ಬೆಂಗಳೂರು

**(ಇನ್ನಷ್ಟು ಪ್ರತಿಕ್ರಿಯೆಗಳು ಮುಂದಿನ ಸಂಚಿಕೆಯಲ್ಲಿ)**

# ಅಗಲಿದ ನಾಲ್ವರು ಹಿರಿಯ ಸಮಾಜವಾದಿಗಳು

## ನ್ಯಾಯಮೂರ್ತಿ ರಾಜೇಂದರ್ ಸಚ್ಚರ್



**ದೆ**ಹಲಿ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ, ನಂತರ ಭಾರತದಲ್ಲಿನ ಮುಸ್ಲಿಂ ಜನಾಂಗದ ಸ್ಥಿತಿಗತಿಗಳನ್ನು ಕುರಿತ ತಮ್ಮ ವರದಿಯ ಮೂಲಕ ಹೆಸರಾಗಿದ್ದ ನ್ಯಾ. ರಾಜೇಂದರ್ ಸಚ್ಚರ್ ತಮ್ಮ ೯೪ನೇ ವಯಸ್ಸಿನಲ್ಲಿ ಇದೇ ಏಪ್ರಿಲ್ ೨೦ರಂದು ನಿಧನ ಹೊಂದಿದರು. ಲಾಹೋರ್ ಮೂಲದ, ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಭೀಮಸೇನ ಸಚ್ಚರ್ ಅವರ ಮಗನಾಗಿದ್ದ ಅವರು ಎಳವೆಯಲ್ಲೇ ಸಮಾಜವಾದದ ಕಡೆ ಸೆಳೆಯಲ್ಪಟ್ಟು ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಕ್ರಿಯ ಕಾರ್ಯಕರ್ತರಾದರು.

ಸಮಾಜವಾದಿ ನಾಯಕ ಡಾ. ರಾಮಮನೋಹರ ಲೋಹಿಯಾ ಅವರ ಕಟ್ಟಾ ಅಭಿಮಾನಿಯಾಗಿದ್ದ ಸಚ್ಚರ್ ೧೯೪೮ರಲ್ಲಿ ಲೋಹಿಯಾರವರ ನೇತೃತ್ವದಲ್ಲಿ ಸಮಾಜವಾದಿ ಪಕ್ಷ ದೆಹಲಿಯಲ್ಲಿ ನೇಪಾಳದ ರಾಣಾ ಮಹಾರಾಜರ ನಿರಂಕುಶ ಸರ್ವಾಧಿಕಾರದ ವಿರುದ್ಧ ನಡೆಸಿದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಲೋಹಿಯಾರ ಜೊತೆಯಲ್ಲಿ ಒಂದೂವರೆ ತಿಂಗಳು ಜೇಲುವಾಸ ಅನುಭವಿಸಿ ಸಮಾಜವಾದಿ ನಾಯಕರ ಗಮನ ಸೆಳೆದರು. ಮುಂದೆ ದೆಹಲಿ ಸಮಾಜವಾದಿ ಪಕ್ಷದ ಘಟಕದ ಕಾರ್ಯದರ್ಶಿಯೂ ಆದ ಅವರು ೧೯೬೦ರಲ್ಲಿ ಸರ್ವೋಚ್ಚ ನ್ಯಾಯಾಲಯದ ವಕೀಲರಾಗಿ, ನಂತರ ವಿವಿಧ ರಾಜ್ಯಗಳ ನ್ಯಾಯಾಧೀಶರಾಗಿ ನೇಮಕಗೊಂಡು ದೆಹಲಿ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದರು. ಅವರು ಒಂದು ಅವಧಿಗೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಪೋಷಣೆ ಮತ್ತು ಸಂರಕ್ಷಣಾಯೋಗದ ಸದಸ್ಯರಾಗಿ ಕೂಡ ಕೆಲಸ ಮಾಡಿದ್ದರು

ಎಲ್ಲ ಸಮಾಜವಾದಿಗಳಂತೆ ಮಾನವ ಹಕ್ಕುಗಳ ಬಗ್ಗೆ ವಿಶೇಷ ಕಳಕಳಿ ಹೊಂದಿದ್ದ ಸಚ್ಚರ್ ನಿವೃತ್ತಿಯ ನಂತರ ನಾಗರಿಕ ಹಕ್ಕುಗಳ ಸಂರಕ್ಷಣಾ ವೇದಿಕೆಯ(ಪಿಯುಸಿಎಲ್) ಅಧ್ಯಕ್ಷರಾಗಿ ನಾಗರಿಕ ಹಕ್ಕುಗಳ ಉಲ್ಲಂಘನೆಯ ಅನೇಕ ಪ್ರಕರಣಗಳಲ್ಲಿ ಸ್ವತಃ ತಾವೇ ವಕಾಲತ್ತು ವಹಿಸಿ ಮೊಕದ್ದಮೆಗಳನ್ನು ನಡೆಸಿದ್ದರು. ಅಣ್ಣ ಹಜಾರೆ ಆಂದೋಲನದ ಬೆಂಬಲಿಗರಾಗಿದ್ದ ಅವರು ಈ ಆಂದೋಲನದ ಭಾಗವಾಗಿ ಒಮ್ಮೆ ದಸ್ತಗಿರಿಯಾಗಿದ್ದೂ ಉಂಟು

೨೦೦೫ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಮುಸ್ಲಿಮರ ತುಷ್ಟೀಕರಣದ ಕೂಗಿನ ಹಿನ್ನೆಲೆಯಲ್ಲಿ ಆ ಸಮುದಾಯದ ಆರ್ಥಿಕ-ಸಾಮಾಜಿಕ-ಶೈಕಣಿಕ ಸ್ಥಿತಿಗತಿಗಳ ಅಧ್ಯಯನಕ್ಕೆ ರಚಿಸಿದ ಆಯೋಗದ ಅಧ್ಯಕ್ಷರಾದ ಸಚ್ಚರ್ ಅವರು ಸರ್ವ ಕ್ಷೇತ್ರಗಳಲ್ಲೂ ಮುಸ್ಲಿಮರು ಇತರೆಲ್ಲ ಸಮುದಾಯಗಳಿಗಿಂತ ಹಿಂದುಳಿದಿರುವುದನ್ನು ಶಿಸ್ತುಬದ್ಧ ಅಧ್ಯಯನದ ಮೂಲಕ ಅಂಕಿ-ಅಂಶಗಳ ಸಹಿತವಾದ ವರದಿಯೊಂದನ್ನು ಸಿದ್ಧಪಡಿಸಿ ನೀಡಿದ್ದಾರೆ. ಆದರೆ ಆ ವರದಿ ಸರ್ಕಾರದ ಬಳಿ ಧೂಳು ತಿನ್ನುತ್ತಾ ಬಿದ್ದಿದೆ ಎಂಬುದು ಬೇರೆ ವಿಚಾರ.

ಇತ್ತೀಚಿನ ವರ್ಷಗಳಲ್ಲಿ ಸಚ್ಚರ್ ಅವರು ಅಳಿದುಳಿದ ಸಮಾಜವಾದಿಗಳನ್ನು ಒಗ್ಗೂಡಿಸಿ ಸಮಾಜವಾದಿ ಪಕ್ಷ (ಭಾರತ)ದ ಸ್ಥಾಪನೆಗಾಗಿ ದುಡಿದಿದ್ದರು

## ಭಾಯಿ ವೈದ್ಯ



**ಹಿ**ರಿಯ ಸಮಾಜವಾದಿ ನಾಯಕ ಹಾಗೂ ಸಮಾಜವಾದಿ ಪಕ್ಷ (ಭಾರತ)ದ ಅಧ್ಯಕ್ಷರಾಗಿದ್ದ ತೊಂಬತ್ತು ವರ್ಷ ವಯಸ್ಸಿನ ಭಾಯಿ ವೈದ್ಯ ಕಳೆದ ಏಪ್ರಿಲ್ ೨ರಂದು ಪುಣೆಯಲ್ಲಿ ನಿಧನ ಹೊಂದಿದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಭಾಲಚಂದ್ರ ಸದಾಶಿವ ವೈದ್ಯ ಅವರು ತಮ್ಮ ೧೪ನೇ ವಯಸ್ಸಿನಲ್ಲಿಯೇ ಕಾಂಗ್ರೆಸ್ ಸಮಾಜವಾದಿ ಪಕ್ಷ ಸೇರಿದ್ದರು. ಅವರು 'ಭಾರತ ಬಿಟ್ಟು ತೊಲಗಿ', ಗೋವಾ ವಿಮೋಚನಾ ಚಳವಳಿ ಮತ್ತು ೧೯೭೫ರಲ್ಲಿ ತುರ್ತುಪರಿಸ್ಥಿತಿ ವಿರುದ್ಧ ಪುಣೆಯ ಮೇಯರ್ ಆಗಿ ಪ್ರತಿಭಟಿಸಿ ಜೈಲು ಸೇರಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಪ್ರತಿಯಾಗಿ ಯುವಜನರಲ್ಲಿ ದೇಶಪ್ರೇಮ, ವಿಶ್ವಪ್ರೇಮ, ಧರ್ಮನಿರಪೇಕ್ಷತೆ, ವೈಜ್ಞಾನಿಕ ಮನೋಭಾವ, ಸಮಾನತೆ, ಬಂಧುತ್ವ ಭಾವನೆಗಳನ್ನು ಬಿತ್ತುವ ರಾಷ್ಟ್ರೀಯ ಸೇವಾ ದಳದ ಸ್ಥಾಪರಲ್ಲಿ ಇವರೂ ಒಬ್ಬರು.

೧೯೭೭ರಲ್ಲಿ ಮಹಾರಾಷ್ಟ್ರದಲ್ಲಿ ಮೊಟ್ಟಮೊದಲಿಗೆ ಕಾಂಗ್ರೆಸ್ಸೇತರ ಸರಕಾರ ರಚನೆಯಾದಾಗ ರಾಜ್ಯದ ಗೃಹಸಚಿವರಾಗಿ ಪೊಲೀಸ್ ಇಲಾಖೆಯಲ್ಲಿ ನುಸುಳಿದ್ದ ಕೋಮುವಾದ ಮತ್ತು ಜಾತಿವಾದಗಳನ್ನು ನಿಯಂತ್ರಿಸಿ ಕಾನೂನು ಮತ್ತು ಸುವ್ಯವಸ್ಥೆಗೆ ಜನವಿಶ್ವಾಸಾರ್ಹತೆ ಗಳಿಸಿಕೊಟ್ಟ ಕೀರ್ತಿ ಅವರದ್ದು.

ಇತ್ತೀಚಿನ ವರ್ಷಗಳಲ್ಲಿ ಸಮಾಜವಾದಿ ಚಳುವಳಿಯ ಅವನತಿಯಿಂದ ನೊಂದಿದ್ದ ಅವರು ೨೦೧೧ರಲ್ಲಿ ಸಮಾಜವಾದಿ ಶಕ್ತಿಗಳನ್ನು ಒಗ್ಗೂಡಿಸಿ ಸಮಾಜವಾದಿ ಪಕ್ಷ(ಭಾರತ)ವನ್ನು ಸ್ಥಾಪಿಸಿ, ಅದರ ಅಧ್ಯಕ್ಷರಾಗಿ ತಮ್ಮ ತೊಂಬತ್ತರ ಇಳಿ ವಯಸ್ಸಿನಲ್ಲಿಯೂ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು

**-ಪ್ರೊ. ಹನುಮಂತ**

## ಪ್ರೊ. ಕೇಶವರಾವ್ ಜಾಧವ್



ಕೆಲವು ದಿನಗಳ ಹಿಂದಷ್ಟೇ ನಮ್ಮನ್ನಗಲಿದ ಇನ್ನೋರ್ವ ಸಮಾಜವಾದಿ ಎಂದರೆ ಹೈದರಾಬಾದ್‌ನ ಪ್ರೊ. ಕೇಶವರಾವ್ ಜಾಧವ್. ಐವತ್ತರ ದಶಕದಲ್ಲಿ ಲೋಹಿಯಾ ತಮ್ಮದೇ ಸಮಾಜವಾದಿ ಪಕ್ಷ ಸ್ಥಾಪಿಸಿ ಅದರ ಮುಖ್ಯ ಕಛೇರಿಯನ್ನು ಹೈದರಾಬಾದ್‌ನಲ್ಲಿ ಆರಂಭಿಸಿದ ಕಾಲದಲ್ಲಿ ಅವರ ಅನುಯಾಯಿಯಾಗಿ ಬೆಳೆದ ಜಾಧವ್ 'ಸಮಾಜವಾದಿ ಯುವಜನ ಸಭಾ'ದ ಅಧ್ಯಕ್ಷರಾಗಿ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಂಡವರು. ಆದರೆ ಲೋಹಿಯೋತ್ತರ ಸಮಾಜವಾದಿ ರಾಜಕಾರಣದಿಂದ ಬೇಸತ್ತ ಅವರು ಇನ್ನೋರ್ವ ಸಮಾಜವಾದಿ ನಾಯಕ ಕಿಷನ್ ಪಟ್ನಾಯಕ್ ಅವರ ಜೊತೆ ಸೇರಿ ಲೋಹಿಯಾ ವಿಚಾರಗಳ ಚರ್ಚೆ, ವಿಸ್ತರಣೆ ಮತ್ತು ಪ್ರಸಾರಕ್ಕಾಗಿ 'ಲೋಹಿಯಾ ವಿಚಾರ ಮಂಚ್' ಸ್ಥಾಪಿಸಿ ಅನೇಕ ಸಮಾಜವಾದಿ ಸಮಾವೇಶಗಳನ್ನು ನಡೆಸಿದರು. ಈ ಸಂಬಂಧ ಅವರು ಕರ್ನಾಟಕದ ಹಲವು ಯುವ ಸಮಾಜವಾದಿಗಳೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದು ಕರ್ನಾಟಕಕ್ಕೆ ಹಲವು ಬಾರಿ ಬಂದುಹೋದದ್ದುಂಟು. ಈ ಸಂದರ್ಭದಲ್ಲಿ ಅವರು ಆಂಧ್ರದಲ್ಲಿ ಸಕ್ರಿಯವಾಗಿದ್ದ ನಕ್ಸಲ್ ಚಳುವಳಿಯ ಅನೇಕ ಯುವಕರನ್ನು ಲೋಹಿಯಾ ವಿಚಾರಗಳತ್ತ ಸೆಳೆದು ಸಮಾಜವಾದಿಗಳನ್ನಾಗಿ ಬೆಳೆಸಿದರು.

ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಕೇಶವ ರಾವ್ ತೆಲುಗು, ಉರ್ದು, ಹಿಂದಿ ಇಂಗ್ಲಿಷ್‌ನಲ್ಲಿ ಪದ್ಯಗಳನ್ನು ಬರೆಯುತ್ತಿದ್ದರಲ್ಲದೆ ಕೆಲ ವರ್ಷಗಳ ಕಾಲ 'ಒಲಂಪಸ್' ಎಂಬ ಇಂಗ್ಲಿಷ್ ಸಮಾಜವಾದಿ ಮಾಸಿಕವನ್ನು ಪ್ರಕಟಿಸುತ್ತಿದ್ದರು. ೧೯೮೦ರಲ್ಲಿ ಇಂದಿರಾ ಗಾಂಧಿಯವರು ಆಂಧ್ರದ ಮೇಡಕ್‌ನಿಂದ ಲೋಕಸಭೆಗೆ ಸ್ಪರ್ಧಿಸಿದಾಗ ಜಾಧವ್ ಲೋಕದಳದಿಂದ ಅವರ ವಿರುದ್ಧದ ಏಕೈಕ ಅಭ್ಯರ್ಥಿಯಾಗಿ ನಿಂತು ತುರುಸಿನ ಸ್ಪರ್ಧೆಗೆ ಕಾರಣರಾದರು.

ತೆಲಂಗಾಣ ರಾಜ್ಯ ಚಳುವಳಿಯ ಪ್ರಮುಖ ನಾಯಕರಲ್ಲೊಬ್ಬರಾಗಿದ್ದ ಅವರು ಇದಕ್ಕಾಗಿ ಎರಡು ವರ್ಷಗಳ ಸೆರೆಮನೆ ವಾಸವನ್ನೂ ಅನುಭವಿಸಬೇಕಾಯಿತು. ಜೊತೆಗೇ ಅವರು ರಾಷ್ಟ್ರದ ಎಲ್ಲ ಜನಾಂದೋಲನಗಳ ಐಕ್ಯತೆಗಾಗಿ ಶ್ರಮಿಸಿ, ಅದಕ್ಕಾಗಿ ಸ್ಥಾಪಿಸಲಾದ ಸಮಾಜವಾದಿ ಜನಪರಿಷದ್‌ನ ಸಂಚಾಲಕರಾಗಿದ್ದರು. ಹೈದರಾಬಾದ್‌ನಲ್ಲಿರುವ ರಾಮಮನೋಹರ ಲೋಹಿಯಾ ಸಮತಾ ಟ್ರಸ್ಟ್‌ನ ಟ್ರಸ್ಟಿಯೂ ಆಗಿದ್ದ ೮೬ ವರ್ಷಗಳ ವಯಸ್ಸಿನ ಪ್ರೊ. ಕೇಶವರಾವ್ ಜಾಧವ್ ಜೂನ್೧೬ರಂದು ಹೈದರಾಬಾದ್‌ನಲ್ಲಿ ನಿಧನ ಹೊಂದಿದರು.

## ಪುರುಷೋತ್ತಮಲಾಲ್ ಕೌಶಿಕ್

ಇತ್ತೀಚೆಗೆ ನಿಧನರಾದ ಇನ್ನೋರ್ವ ಹಿರಿಯ ಸಮಾಜವಾದಿ ಎಂದರೆ ಈ ಹಿಂದಿನ ಮಧ್ಯಪ್ರದೇಶದ(ಈಗ ಚತ್ತೀಸಗಢ) ಮಹಾಸಮುಂದ್‌ನ ರೈತನಾಯಕರಾಗಿದ್ದ ಪುರುಷೋತ್ತಮಲಾಲ್ ಕೌಶಿಕ್.ರಾಯ್‌ಪುರದಿಂದ ಎರಡು ಬಾರಿ ಲೋಕಸಭಾ ಸದಸ್ಯರಾಗಿದ್ದ ಅವರು ೧೯೭೭ರ ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಸರ್ಕಾರದಲ್ಲಿ ನಾಗರಿಕ ವಿಮಾನಯಾನ ಖಾತೆಯ ಸಚಿವರಾಗಿದ್ದರು.

ಈ ನಾಲ್ವರು ಹಿರಿಯ ಸಮಾಜವಾದಿಗಳಿಗೆ 'ಹೊಸ ಮನುಷ್ಯ' ಶ್ರದ್ಧಾಂಜಲಿ ಅರ್ಪಿಸುತ್ತದೆ.

**-ಡಿಎಸ್ನೆಸ್**

ಯುವಲಹರಿ

# ಗ್ರಾಮೀಣ ಕಾಲೇಜುಗಳಲ್ಲಿ ಭಾಷೆ-ಸಾಹಿತ್ಯ ಬೋಧನೆಯ ಸಮಸ್ಯೆ-ಸವಾಲುಗಳು

-ಆರ್. ದಿಲೀಪ್‌ಕುಮಾರ್



ನಗರ ಪ್ರದೇಶಗಳ ಪರಿಸ್ಥಿತಿ ನನಗೆ ತಿಳಿಯದು. ಆದರೆ ಭಾಷೆ-ಸಾಹಿತ್ಯದ ಬೋಧನೆ ಗ್ರಾಮೀಣ ಪ್ರದೇಶದಲ್ಲಂತೂ ಸಮಕಾಲೀನ ಸಂದರ್ಭದಲ್ಲಿ ಬಹುದೊಡ್ಡ ಸವಾಲಿನ ಕೆಲಸವಾಗಿದೆ. ಭಾಷೆ ಕಾಲ-ದೂರಗಳಿಗನುಗುಣವಾಗಿ ಬದಲಾಗುವ ಅವಕಾಶ ಮತ್ತು ಸಾಧ್ಯತೆಗಳನ್ನು ಒಪ್ಪದಿರಲಾಗುವುದಿಲ್ಲ. ಆದರೆ ಅದಕ್ಕೊಂದು ನಿಯಮದ ಅಗತ್ಯ ಇದ್ದೇ ಇದೆ. ಅದು ಬಳಸುವ ಜನಸಮುದಾಯದ ಒಟ್ಟಾರೆ ಗ್ರಹಿಕೆಗೆ ಸಿಗುವ ಮಾನ್ಯತೆಯನ್ನ ಪಡೆದಿರಬೇಕಾದ ಅಗತ್ಯ ಇರುತ್ತದೆ. ಆದರೆ ಇಂದಿನ ಸಮಾಜದಲ್ಲಿ ಶ್ರವ್ಯ-ದೃಶ್ಯ ಮಾಧ್ಯಮಗಳ ಹಾವಳಿಯಿಂದ ಭಾಷೆ ತನ್ನ ರಾಚನಿಕ ವಿನ್ಯಾಸದಲ್ಲಿ ಒಟ್ಟಾರೆ ಸಮಾಜದ ಗ್ರಹಿಕೆಗೆ ಸಿಗದ ವೇಗದಲ್ಲಿ ದಿನವಹಿ ಆಧಾರದ ಮೇಲೆ ಬಹುದೊಡ್ಡ ನೇತ್ಯಾತ್ಮಕ ಬದಲಾವಣಗೆ ಒಳಗಾಗುತ್ತಿದೆ. ಇದು ನೇತ್ಯಾತ್ಮಕವೆನ್ನುವುದಕ್ಕೆ ಈಗ್ಗೆ ಹತ್ತು ಹದಿನೈದು ವರ್ಷಗಳ ಹಿಂದಿನ ಮಾಧ್ಯಮಗಳಲ್ಲಿನ ಭಾಷೆಯನ್ನು ಇಂದಿನ ಭಾಷೆಯನ್ನು ನೋಡಿದರೆ ತಿಳಿಯುತ್ತದೆ. ಈ ದೃಷ್ಟಿಯಿಂದ, ಮಾಧ್ಯಮಗಳು ವಿದ್ಯಾರ್ಥಿಗಳ ವಯಸ್ಸು ಹಾಗೂ ಅಭಿರುಚಿಯ ಮಟ್ಟವನ್ನು ತಿದ್ದುವುದಿರಲಿ ಅವರ ಮುಗ್ಧತೆಯನ್ನು ಉಳಿಸಿದರೆ ಸಮಾಜಕ್ಕದು ಬಹುದೊಡ್ಡ ಕೊಡುಗೆಯಾದೀತು. ಚಲನಚಿತ್ರಗಳು ಪದವಿಪೂರ್ವ ಹಂತದಲ್ಲಿನ ಮಕ್ಕಳ ಮೇಲೆ ಬಹುದೊಡ್ಡ ಪ್ರಭಾವ ಬೀರುವ ಮಾಧ್ಯಮವಾಗಿದೆ. ಅವುಗಳ ಭಾಷೆ-ಅದರಲ್ಲಿನ ಆಂಗಿಕಾಭಿನಯವು ಗ್ರಾಮೀಣ ಭಾಗದಲ್ಲಿ ಭಾಷೆ ಬದುಕಿನಲ್ಲಿ ಒಂದು ದೊಡ್ಡ ಭಾಷಿಕ ಕಂದಕವನ್ನು ಉಂಟುಮಾಡಿದೆ. ಸಂವೇದನೆಯು ಸ್ಥೂಲಗೊಂಡು ವಾಚ್ಯವಾಗಿ ಎಲ್ಲವನ್ನು ಹೊರಹಾಕುತ್ತಿರುವಾಗ ಸಾಹಿತ್ಯದಂತಹ ಸೂಕ್ಷ್ಮಸಂವೇದಿತ್ವದ-ಧ್ವನಿ ಪೂರ್ಣವಾದ ಸಂಗತಿಗಳು ಮಕ್ಕಳಿಗೆ ತಲುಪುವ ಬಗೆಯಾದರೂ ಹೇಗೆ? ಈ ದಿಸೆಯಲ್ಲಿ ಭಾಷೆ ಮತ್ತು ಸಾಹಿತ್ಯದ ಅಧ್ಯಾಪಕರು ಇಂದು ಬಹುಮುಖವಾದ ಸವಾಲುಗಳನ್ನು ಎದುರಿಸುತ್ತಿದ್ದಾರೆ.

. ಏಕಕಾಲದಲ್ಲಿ ತರಗತಿಯ ಒಳಗಡೆ ಸಿಕ್ಕುವ ಪಠ್ಯಕೇಂದ್ರಿತ ಮೌಲ್ಯಕ್ಕೂ-ಹೊರಗಿನ ಪ್ರಪಂಚದಲ್ಲಿ ಸಿಕ್ಕುತ್ತಿರುವ ಮೌಲ್ಯಕ್ಕೂ ಇರುವ ವ್ಯತ್ಯಾಸದಲ್ಲಿ ಒಳಗಿನದಕ್ಕಿಂತ ಹೊರಗಿನದರ ಗಾಢ ಪ್ರಭಾವ ಎದ್ದುಕಾಣುತ್ತಿದೆ. ಇದಕ್ಕೆ ಕಾರಣ ಪಠ್ಯವಸ್ತುವಿನ ಸಂಯೋಜನೆ. ಕೆಲವು ವಿಷಯಗಳು ವಿದ್ಯಾರ್ಥಿಗಳಿಗಿರಲಿ ಶಿಕ್ಷಕರೂ ಓದುವ ಮನಸ್ಸಾಗದಂತಹ ರೀತಿಯಲ್ಲಿ ಅವುಗಳ ಜೋಡಣೆ ಇದೆ. ನನ್ನ ಪ್ರಕಾರ ಇದು ಬಹು ದೊಡ್ಡ ಸವಾಲಿನದು. ಪಾಠಗಳಿಗೆ ಪೂರಕವಾಗಿ ನಮ್ಮ ಪರಂಪರೆಯಲ್ಲಿನ ಜೀವಸತ್ವದಲ್ಲಿನ ಕುರುಹುಗಳ ಬಗೆಗೆ ಹೇಳಬೇಕಾದಾಗ ಆಗುವ ಸಮಸ್ಯೆ ಅಷ್ಟಿಷ್ಟಲ್ಲ. ಆಗ ಅವರೆಗೆ ಕಾಣದಿದ್ದ ಜಾತಿ ಗೋಡೆಗಳು ಎದ್ದು ನಿಂತುಬಿಡುತ್ತವೆ. ಅದೇನೇ ಇರಲಿ, ಇಂದಿನ ಬದುಕಿಗೆ ಯಾವುದೇ ರೀತಿಯಲ್ಲೂ ಪಠ್ಯಗಳು ಹತ್ತಿರವಿಲ್ಲವೆಂದು ಮಕ್ಕಳು ಭಾವಿಸಲು ಬಹುಮುಖ್ಯ ಕಾರಣ, ಇವೆಲ್ಲವೂ ಸೂಕ್ಷ್ಮತೆಯಿಂದ ಕೂಡಿರದ ಪಠ್ಯಗಳು ಹಾಗೂ ಪ್ರಾದೇಶಿಕವಾಗಿ ತಮಗೆ ಹತ್ತಿರವಾಗದ ಭಾಷೆ ಎಂಬುದು ಮಕ್ಕಳ ಅಭಿಪ್ರಾಯಗಳನ್ನು ಕೇಳಿಸಿಕೊಂಡಿರುವ ನನ್ನ ಅನ್ನಿಸಿಕೆ.

ಇದೇ ಹೊತ್ತಿಗೆ ವಿದ್ಯಾರ್ಥಿ ಸಮುದಾಯದಲ್ಲಿ ಕಾಣುವ ವೈಯುಕ್ತಿಕ-ಸಾಮಾಜಿಕ ಸಂಬಂಧಗಳಲ್ಲಿ ಬಿರುಕು, ಮಾನಸಿಕ ಜಡತೆ, ಅಸಹಾಯಕತೆ, ಹಿಂದೆಂದಿಗಿಂತ ಇಂದು ಹೆಚ್ಚಾಗಿರುವುದಕ್ಕೆ ಕಾರಣ ವಯಸ್ಸಿಗೆ ಮಿಗಿಲಾದ್ದನ್ನು ತಮ್ಮದಾಗಿಕೊಳ್ಳುವ ಹಠದಲ್ಲಿರುವವರಿಗೆ ಸಿಕ್ಕಿರುವ ಅವಕಾಶಗಳು ಮತ್ತು ಮೊಬೈಲ್ ಜಾಲತಾಣಗಳು ನೀಡುವ ರೋಚಕ ಮಾಹಿತಿಗಳಲ್ಲದೆ ಹಾವಳಿಯಲ್ಲದೆ ಮತ್ತಿನ್ನೇನೂ ಅಲ್ಲ. ಹೀಗಾಗಿ ಶಿಕ್ಷಣ ಮುಗಿಸುವ ಮೊದಲೇ ಮುಂದಿನ ಬದುಕಿನ ಕನಸುಗಳು ಆರಂಭವಾಗುತ್ತವೆ. ಇಲ್ಲಿಂದ ಮುಂದೆ ಓದಿನ ಬಗೆಗಾಗಲೀ ಅಥವಾ ಜ್ಞಾನದ ಬಗೆಗಾಗಲಿ ದಾರಿ ಕಂಡುಕೋಳ್ಳುವ ಯೋಚನೆ ಕೈಬಿಟ್ಟು ಹಣ ಗಳಿಕೆ-ವ್ಯಯದ ಬಗೆಗೆ ಮಾತ್ರ ಯೋಚಿಸುವ ಹಂತಕ್ಕೆ ತಲುಪಿರುತ್ತಾರೆ. ಸಾಹಿತ್ಯವನ್ನು ಆರ್ಥಿಕ ಗಳಿಕೆಯ ಅಂದರೆ ಒಳ್ಳೆಯ ಸಂಬಳದ ಉದ್ಯೋಗಕ್ಕೆ ದಾರಿಯೆಂದು ತಿಳಿದು ಬರುವ ಹುಡುಗರು ಸಾಹಿತ್ಯ ಸಂವೇದನೆಗೂ ಒಗ್ಗದೆ, ಉದ್ಯೋಗದ ಆಸೆಯೂ ಕಮರಿ ಅರ್ಧಕ್ಕೆ ಕಾಲೇಜು ಬಿಟ್ಟಿರುವುದೂ ನನ್ನ ಕಣ್ಣಮುಂದಿದೆ. ವಿದ್ಯಾರ್ಥಿಗಳಲ್ಲಿ ಸಾಹಿತ್ಯವೆಂದರೆ ಚಲನಚಿತ್ರಗಳಲ್ಲಿನ ಹಾಡುಗಳಲ್ಲದೆ ಮತ್ತೇನೂ ಅಲ್ಲವೆಂಬ ಅಭಿಪ್ರಾಯ ಇರುವುದನ್ನು ಗಮನಿಸಿದ ಅಧ್ಯಾಪಕರು ತರಗತಿಗಳಲ್ಲಿ ಛಂದಸ್ಸಿನ ಪಾಠಮಾಡುವಾಗ ಹಳಗನ್ನಡವಿರಲಿ ಹೊಸಗನ್ನಡದ ಪಠ್ಯಗಳೂ ತಿಳಿಯದ ವಿದ್ಯಾರ್ಥಿಗಳ ಸಪ್ಪೆಮೋರೆಗಳನ್ನು ನೋಡಿ ಸಾಕಾಗಿ ಕೆಲವೊಮ್ಮೆ ಅವರಿಷ್ಟದ ಚಿತ್ರಗೀತೆಗಳ ಸಾಲುಗಳಿಗೆ ಛಂದಸ್ಸು ಹಾಕಿ ಪಾಠ ಹೇಳಿರುವ ಉದಾಹರಣೆಗಳೂ ಇದ್ದು ಅವೇ ಅತ್ಯಂತ ಯಶಸ್ವಿ ತರಗತಿಗಳೆನಿಸಿಕೊಂಡ ವರದಿಗಳೂ ನನ್ನ ಬಳಿಯಿವೆ! ಸಾಹಿತ್ಯದ ಅಧ್ಯಾಪಕರಿಗೆ ಇದಕ್ಕಿಂತ ದುಃಸ್ಥಿತಿ ಮತ್ತೊಂದು ಇದೆಯೇ? ಅದೂ ಇಂದಿನ ಕನ್ನಡ ಚಲನಚಿತ್ರಗೀತೆಗಳ ಗುಣಮಟ್ಟವನ್ನು ಗಮನಿಸಿದಾಗ?

ಇಂತಹ ಸನ್ನಿವೇಶದಲ್ಲಿ ಸಾಹಿತ್ಯವನ್ನು ಬೋಧಿಸುವುದು ಎಂತಹವರಿಗಾದರೂ ಸವಾಲಿನ ಕೆಲಸವೇ ಏಕಕಾಲದಲ್ಲಿ ಹದಿಹರೆಯದ ತೀವ್ರ ಭಾವನಾತ್ಮಕತೆ, ಹಣ ಸಂಪಾದನೆಯ ಅವರ ಕನಸು, ಸಾಮಾಜಿಕ ಕಳಕಳಿ, ಬದುಕಿನ ಮೌಲ್ಯಗಳು ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಅಭಿರುಚಿಯನ್ನು ತಿದ್ದುವ ಕಾರ್ಯ ಕುಂಟುತ್ತಾ ನಡೆದಿದೆ. ಈ ನಡಿಗೆ ಸರಿಹೋಗಬೇಕಾದರೆ ಸಾಮಾನ್ಯವಾಗಿ ವಿದ್ಯಾರ್ಥಿಗಳಲ್ಲಿ ಇರುವ ವಿಜ್ಞಾನ, ವಾಣಿಜ್ಯ ವಿಷಯಗಳಿಗಿಂತ ಕಲಾ ವಿಭಾಗ ಅತಿ ಕೀಳೆಂಬ ಮನೋಭಾವನೆಯನ್ನು ಬೇರು ಸಮೇತವಾಗಿ ಕಿತ್ತು ಎಲ್ಲಾ ವಿಷಯಗಳು ಜ್ಞಾನ ಸಂಪಾದನೆಗೆ ಅನ್ನುವ ಮನೋಭಾವ ಮೂಡಿಸುವುದು ಕಷ್ಟದ ಕೆಲಸ ಆಗಬೇಕಿದೆ. ಇದಕ್ಕೆ ಸಮಾಜ, ಪೋಷಕರು ಮತ್ತು ಸರ್ಕಾರಗಳೂ ಸಹಕರಿಸಬೇಕಿವೆ.

ಒಂದು ಕುತೂಹಲದ ಸಂಗತಿಯೆಂದರೆ ತೇಜಸ್ವಿಯವರ ಪುಸ್ತಕಗಳ ಓದಿನ ಅಭಿರುಚಿಯಲ್ಲಿ ಮಕ್ಕಳು ನಿರತರಾಗಿರುವ ಸಮಯವಿದು. ಕನ್ನಡದಲ್ಲಿ ಇಷ್ಟು ಆಪ್ಯಾಯಮಾನವಾಗಿ ಎಲ್ಲಾ ವಯೋಮಾನದವರಿಗೂ ಹತ್ತಿರವಾಗುವ ಅವರ ಬರವಣಿಗೆಗೆ, ಅಲ್ಲಿನ ವಿಷಯಗಳಿಗೆ ಮುಖಾಮುಖಿಯಾದಾಗ ತೆರೆದುಕೊಳ್ಳುವ ವಿದ್ಯಾರ್ಥಿಗಳನ್ನು ನೋಡುವುದೇ ಚೆಂದವೆನಿಸುತ್ತದೆ. ಅವರ ಕಾದಂಬರಿಗಳನ್ನು ಒಳಗೊಂಡು ವಿಜ್ಞಾನದ ,ಪರಿಸರದ ಬಗೆಗೆ ಬರೆದ ಪುಸ್ತಕಗಳು ಈ ತಲೆಮಾರಿನ ವಿದ್ಯಾರ್ಥಿಗಳಲ್ಲಿ ಒಂದು ಬೆರಗನ್ನು, ಕಲಿಕೆಯ ಉತ್ಸಾಹವನ್ನು ತಂದಿರುವುದಂತೂ ಸುಳ್ಳಲ್ಲ. ಹಾಗಾಗಿ ಈ ವಿದ್ಯಮಾನದ ಜಾಡು ಹಿಡಿದು ನಮ್ಮ ಭಾಷೆ ಮತ್ತು ಸಾಹಿತ್ಯ ವ್ಯಾಸಂಗ ಕ್ರಮಗಳ ಪಠ್ಯಕ್ರಮವನ್ನು ರೂಪಿಸುವ ಪ್ರಯತ್ನ ಮಾಡುವುದು ಒಳಿತೆಂದೂ ನನ್ನ ನಮ್ರ ಅನಿಸಿಕೆ. ಮಕ್ಕಳಿಗೆ ಒಲವಿರುವ ಆದಷ್ಟೂ ಇಂತಹ ಪಾಠಗಳನ್ನೇ ಒದಗಿಸುತ್ತಲೇ ಇತರೆ ಅಗತ್ಯ ಪಠ್ಯಗಳ ಬೋಧನೆಯ ಕಡೆಗೆ ಕರೆತರುವುದು ಉತ್ತಮ. ಕುತೂಹಲ, ಓದುವ ಅಭಿರುಚಿ ಒಮ್ಮೆ ವಿದ್ಯಾರ್ಥಿಗಳಲ್ಲಿ ಒಮ್ಮೆ ಮೂಡಿದರೆ ಮಿಕ್ಕಿದ್ದನ್ನು ಅವರೇ ಓದುತ್ತಾರೆ. ಶಿಕ್ಷಕ ಮಾರ್ಗದರ್ಶಕನಾದರೆ ಸಾಕು. ಹಳೆಯ ತರಗತಿ ಬೋಧನೆಯ ಪದ್ಧತಿ ಇಂದು ಬೇಡವಾಗಿದೆ.



**(ದಿಲೀಪ್‌ಕುಮಾರ್ ಚಾಮರಾಜನಗರದ ಸರ್ಕಾರಿ ಪದವಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಕನ್ನಡ ಬೋಧಿಸುತ್ತಾರೆ.)**

ಧರ್ಮ ವಿಚಾರ ಪುಟ

ಒಳ್ಳೆಯ ಮನಸ್ಸೇ ಧರ್ಮ
–ತಿರುವಳ್ಳುವರ್

# ಓಹ್! ಆ ಜನ ಎಷ್ಟು ಒಳ್ಳೆಯವರು! ನಾವು?

–ಟಿ.ಎಸ್. ವೇಣುಗೋಪಾಲ್



**ನಾ**ನು ಮತ್ತು ನನ್ನ ಪತ್ನಿ ಶೈಲಜಾ ಮೇ ಕೊನೇ ವಾರದಲ್ಲಿ ಯುರೋಪ್ ಪ್ರವಾಸ ಹೊರಟೆವು. ಅದೊಂದು ಸ್ವತಂತ್ರ ಪ್ರವಾಸ. ಪ್ರಯಾಣ, ವಸತಿ, ಊಟ–ಉಪಹಾರ ಎಲ್ಲ ಏರ್ಪಾಡೂ ನಮ್ಮದೇ. ನಮ್ಮ ಈ ಯಾತ್ರೆಯ ೧೫ ದಿನ ಮುಗಿದಿತ್ತು. ಅಲ್ಲಿನ ವಸ್ತು ಸಂಗ್ರಹಾಲಯಗಳಲ್ಲಿ ಎಲ್ಲಾ ಪಸಿದ್ದ ಕಲಾವಿದರ ಕೃತಿಗಳನ್ನು ಮೂಲ ಪ್ರತಿಯನ್ನು ನೋಡಿ ರೋಮಾಂಚನಗೊಂಡಾಗಿತ್ತು. ನಂತರ ಸುಂದರ ಸ್ವಿಟ್ಜರ್‌ಲ್ಯಾಂಡನ್ನು ನೋಡಿ ಆನಂದಿಸಿದೆವು. ಅಲ್ಲಿನ ಆಲ್ಪ್ಸ್ ಪರ್ವತ ಶ್ರೇಣಿಯ ೧೩೦೦೦ ಅಡಿ ಎತ್ತರದ ಉಂಗ್ ಫ್ರೊ ಬೆಟ್ಟವನ್ನು ಎರಡು ಟ್ರೈನ್ ಹಿಡಿದು ಹತ್ತಿ ಅಲ್ಲಿನ ಹಿಮಾವೃತ ಪ್ರಕೃತಿ ಸೌಂದರ್ಯವನ್ನು ನೋಡಿ ಬೆರಗಾದೆವು. ಅಲ್ಲಿ ನಿರ್ಮಿಸಲಾಗಿದ್ದ ಒಂದು ದೊಡ್ಡ ಹಿಮಗುಹೆಯೊಳಗೆ ಶಿಲ್ಪಗಳ ಮುಂದೆ ನಿಂತು ಫೋಟೊ ತೆಗೆದುಕೊಂಡೆವು.

ಎಲ್ಲವೂ ಹೀಗೆ ಸುಂದರವಾಗಿದ್ದರೆ ಹೇಗೆ? ಒಂದು ತಿರುವು ಬೇಕಲ್ಲವೆ? ಹಿಮ ನೆಲದ ಮೇಲೆ ಜಾರಿ ಬಿದ್ದೆ.. ಅತೀವ ನೋವು ಮತ್ತು ಒಂದೇ ಸಮನೆ ಹೆಚ್ಚುತ್ತಿದ್ದ ಊತದಿಂದ ಕಾಲು ಮುರಿದಿದೆತು ಅಂತ ಗೊತ್ತಾಯಿತು.. ನಿಲ್ಲುವುದಕ್ಕೆ ಸಾಧ್ಯವೇ ಇರಲಿಲ್ಲ. ಕೊರೆಯುವ ಹಿಮ ಪ್ರಾಣ ಹಿಂಡತೊಡಗಿತು. ನಾವು ಕೂಡಲೇ ಆ ಹಿಮ ಪ್ರದೇಶದಿಂದ. ಈಚೆ ಬರಬೇಕಿತ್ತು. ೧೩೦೦೦ ಅಡಿ ಎತ್ತರದ ಶಿಖರದಿಂದ ಇಳಿಯಲೇಬೇಕಿತ್ತು. ಆ ಅಪರಿಚಿತ ಜಾಗದಲ್ಲಿ ಈ ಸ್ಥಿತಿಯಲ್ಲಿ ಯಾರಿಗಾದರೂ ದಿಕ್ಕೇ ತೋಚದ ಪರಿಸ್ಥಿತಿ ಅದು. ಶೈಲಾಗೆ ವಿಪರೀತ ಆತಂಕವಾಗಿತ್ತು.

ಆದರೆ ನಾವು ಭಾರತದಲ್ಲಿರಲಿಲ್ಲ. ಅಲ್ಲಿನ ಜನ ಒಳ್ಳೆಯವರು. ತಮ್ಮ ಪಿಕ್‌ನಿಕ್ ಸಮಯವನ್ನು ಕಳೆದುಕೊಂಡು, ನಮಗೆ ಆಚೆ ಬರುವುದಕ್ಕೆ ನೆರವಾದರು. ಕೊನೆಗೆ ಯಾರೊ ಎಮರ್ಜೆನ್ಸಿಗೆ ಕರೆ ಮಾಡಿದರು. ಒಬ್ಬರು ತಕ್ಷಣ ಬಂದರು. ವೀಲ್ ಚೇರ್ ಬೇಕು ಅಂತ ಇನ್ಯಾರಿಗೊ ಕರೆ ಮಾಡಿದರು. ಕೆಲವೇ ನಿಮಿಷಗಳಲ್ಲಿ ಒಬ್ಬ ವೈದ್ಯ,, ದಾದಿ ಗಾಲಿಕುರ್ಚಿ ಸಮೇತ ಬಂದರು! ನೋವಿಗೆ ಒಂದು ಚುಚ್ಚುಮದ್ದು ನೀಡಿ ಆತಂಕ ಬೇಡವೆಂದು ಸಾಂತ್ವನ ಹೇಳುತ್ತಾ ತಾತ್ಕಾಲಿಕ ಪ್ಲಾಸ್ಟ್‌ರ್ ಹಾಕಿದರು. ಅವರಿಗೆ ಇದು ಗಂಭೀರ ಪರಿಸ್ಥಿತಿ ಎಂದು ಗೊತ್ತಾಗಿತ್ತು. ಆದರೆ ನಮ್ಮನ್ನು ಮತ್ತಷ್ಟು ಕಂಗೆಡಿಸದ ರೀತಿಯಲ್ಲಿ, 'ನಿಮಗೆ ಕೂಡಲೇ ಶಸಸ್ತ್ರಚಿಕಿತ್ಸೆ ಆಗಬೇಕು ಇಂಟರ್‌ಲೇಕಾನ್‌ನಲ್ಲಿರುವ ಆಸ್ಪತ್ರೆಯಲ್ಲಿ ಮಾಡುತ್ತಾರೆ' ಅಂದರು.

ನಮಗೆ ಸ್ವಲ್ಪ ಗಾಬರಿಯಾಯಿತು. ನಾಳೆ ನಾವು ಜ಼ೂರಿಚ್ ಆಮೇಲೆ ರೋಂಗೆ ಹೋಗಬೇಕಿತ್ತು. ಆದರೆ ಅದೆಲ್ಲ ಈಗ ಸಾಧ್ಯವಾಗದ ಸಂಗತಿ. ಏನು ಮಾಡುವುದು ಎಂದು ತೋಚದ ಸ್ಥಿತಿ ಆಸ್ಪತ್ರೆಯ ಖರ್ಚು ಎಷ್ಟಾಗುವುದೋ ಎಂಬ ಆತಂಕ. ಕೂಡಲೇ ಹಣ ಎಲ್ಲಿಂದ ಒದಗಿಸುವುದು ಎಂಬ ಚಿಂತೆ. ನೋವು, ಊದು ಜಾಸ್ತಿಯಾಗುತ್ತಲೆ ಇತ್ತು. ಟ್ರೈನ್‌ನಲ್ಲಿ ಹೋದರೆ ಎರಡು ಗಂಟೆ ಬೇಕಾಗುತ್ತಿತ್ತು. ಆದರೆ ವೈದ್ಯರು ತಡಮಾಡದೆ ಶಸ್ತ್ರ ಚಿಕಿತ್ಸೆ ಆಗಬೇಕು, ಇಲ್ಲದಿದ್ದರೆ ಕಾಲೇ ಹೋಗುವ ಅಪಾಯವಿದೆ ಎಂದರು. ಅವರು ಹೆಲಿಕಾಪ್ಟರ್‌ನಲ್ಲಿ ಹೋಗೋದು ಒಳ್ಳೆಯದು ಅಂದರು. ಹೆಲಿಕಾಪ್ಟರ್? ನನ್ನ ಕಲ್ಪನೆಗೇ ಸಿಗದ ವಿಷಯವದು! ತುಂಬಾ ದುಡ್ಡಾಗುತ್ತಾ ಅಂದೆ. ಅದಕ್ಕವರು ಈಗ ನಿಮ್ಮ ಕಾಲು ಮುಖ್ಯ. ಹೋಗೊಣ ಅಂತ ಫೋನ್ ಮಾಡಿಯೇಬಿಟ್ಟರು. ಒಂದು ನಿಮಿಷ ಜನಗಳ ಓಡಾಟ ನಿಲ್ಲಿಸಿ ನನ್ನನ್ನು ಹಿಮದಾವರಣದಿಂದ ಆಚೆಗೆ ಕರೆದುಕೊಂಡು ಬಂದರು.

ಅಯ್ಯೋ! ಜಾಗ ನಿಖರವಾಗಿ ಗೊತ್ತಾಗದೆ ಹೆಲಿಕಾಪ್ಟರ್ ಎಲ್ಲೋ ಇನ್ನೊಂದು ಕಡೆ ಇಳಿದಿತ್ತು. ಇದರಿಂದ ನನಗಾದ ತೊಂದರೆಗೆ ಆ ವೈದ್ಯರು ಸಾವಿರ ಸಲ ಕ್ಷಮೆ ಕೇಳಿದರು. ಇನ್ನಿಬ್ಬರು ವೈದ್ಯರುಗಳು ಬಂದು ನನ್ನನ್ನು ಒಂದು ಪ್ಲಾಸ್ಟಿಕ ಬುಟ್ಟಿಯಂತಹ ಒಂದರಲ್ಲಿ ಕೂರಿಸಿ ಒಂದು ಕಿಮೀ ತಳ್ಳಿಕೊಂಡು ಬಂದರು. ಸುತ್ತ ಕಣ್ಣು ತುಂಬಿಕೊಂಡರೂ ಮಿಗುವ ಹಿಮಾವೃತ ಪರ್ವತಶ್ರೇಣಿ ಅನುಪಮ ಸೌಂದರ್ಯ! ಆದರೆ ನನ್ನ ಮನಸ್ಸಿನ ತುಂಬ ಮುಂದೇನು ಎಂಬ ಯೋಚನೆ! ಶೈಲಾಗೆ ಹೆಲಿಕಾಪ್ಟರ್‌ನಲ್ಲಿಲ್ಲಿ ಜಾಗ ಆಗಲಿಲ್ಲ. ಅವಳು ಟ್ರೈನ್‌ನಲ್ಲಿ ಬರಬೇಕಾಯಿತು.

ನಾವು ೫ ನಿಮಿಷದಲ್ಲಿ ಆಸ್ಪತ್ರೆಗೆ ಬಂದಾಗಿತ್ತು. ತಕ್ಷಣ ಎಕ್ಸರೆ, ಎಲ್ಲಾ ಟೆಸ್ಟುಗಳು ಆಯಿತು. ಡಾಕ್ಟರ್ ಬಂದು, ಆಪರೇಷನ್ ಅನಿವಾರ್ಯ ಅಂದರು. ಹೆಂಡತಿ ಬರಲೆಂದು ಕಾದರೆ ತಡವಾದೀತೆಂದು ಹೇಳಿ ಶಸ್ತ್ರಚಿಕಿತ್ಸೆಗೆ ನನ್ನೊಪ್ಪಿಗೆ ಪಡೆದೂಬಿಟ್ಟರು. ಡಾಕ್ಟರುಗಳು ಬಂದು ತಾವೇನು ಮಾಡುತ್ತೇವೆ ಅಂತ ವಿವರಿಸಿ ನನಗೆ ಅರ್ಥ ಆಗಿದೆ ಅಂತ ಖಾತರಿ ಮಾಡಿಕೊಂಡರು. ಯಾವುದಕ್ಕೂ ಸಹಿ ಕೇಳಲಿಲ್ಲ! ಹಣದ ಸುದ್ದಿ ಎತ್ತಲಿಲ್ಲ!! ಶಸ್ತ್ರ ಚಿಕಿತ್ಸೆ ಮುಗಿಸಿಬಿಟ್ಟರು. ವಾರ್ಡಿಗೆ ಬರುವಷ್ಟರಲ್ಲಿ ಸರಿಯಾಗಿ ಶೈಲಾ ಬಂದಿದ್ದಳು. ಆತಂಕದ ಕಣ್ಣುಗಳು ಎಲ್ಲಾ ಹೇಳುತ್ತಿತ್ತು. ಇನ್ನು ಹಣ, ವಿಮೆ ಮತ್ತು ಉಳಿದ ಪ್ರವಾಸ ರದ್ದು ಮಾಡುವುದು ಇತ್ಯಾದಿಗೆ ವ್ಯವಸ್ಥೆ ಮಾಡಬೇಕಿತ್ತು.

ನಮಗೆ ಪರ್ವತದ ಮೇಲೆ ಪ್ರಾಥಮಿಕ ಉಪಚಾರ ಮಾಡಿದ್ದ ವೈದ್ಯರು ಹುಡುಕಿಕೊಂಡು ಬಂದು ಆರೋಗ್ಯ ವಿಚಾರಿಸಿ ಶುಭ ಹಾರೈಸಿದರು. ನಮ್ಮ ದೇಶದ ಲೋಹ ಈಗ ನಿನ್ನ ದೇಹದಲ್ಲಿ ಇದೆ ಅಂತ ತಮಾಷೆ ಮಾಡಿದರು. ನನಗೆ ಸರ್ಜರಿ ಮಾಡಿದ ವೈದ್ಯ ತುಂಬಾ ಸಜ್ಜನ. ಬೇಗ ಕಳಿಸುವುದಕ್ಕೆ ಏರ್ಪಾಡು ಮಾಡುವುದಾಗಿ ಹೇಳಿ ಆತಂಕದಲ್ಲಿದ್ದ ಶೈಲಾಗೆ ಸಮಾಧಾನ ಹೇಳಿದರು. ಎಲ್ಲಾ ಅಗತ್ಯ ಸರ್ಟಿಫಿಕೇಟುಗಳಿಗೂ ಸಹಿ ಮಾಡಿಕೊಟ್ಟರು. ಆಸ್ಪತ್ರೆಯ ಸಿಬ್ಬಂದಿ ಶೈಲಾಗೆ ವಿಮೆಗೆ ಬೇಕಾದ ಸಂಪೂರ್ಣ ಸಹಾಯ ಮಾಡಿದರು. ಯಾವುದೇ ಅಲೆದಾಟ, ವಶೀಲಿಬಾಜಿ, ಅಂಗಲಾಚುವಿಕೆಗೆ ಆಸ್ಪದವೇ ಇಲ್ಲದೆ ಎಲ್ಲ ಸರಸರ ನಡೆದು, ದೂರದ ಊರಿನಲ್ಲಿ ಒಬ್ಬಂಟಿಗರಾಗಿ ಬಿಟ್ಟಿದ್ದೇವೆ ಅನ್ನುವ ಭಾವನೆ ಬರಲೇ ಇಲ್ಲ. 'ಅಕಸ್ಮಾತ್ ವಿಮೆ ಸಮಸ್ಯೆ ಆದರೆ ಒಂದು ಸಾಂಕೇತಿಕ ಮೊತ್ತ ಕೊಟ್ಟು ಹೋದರೆ ಸಾಕು. ನೀವು ನಿಶ್ಚಿಂತರಾಗಿ ನಿಮ್ಮ ಕೆಲಸ ಮಾಡಿಕೊಳ್ಳಿ' ಅಂತ ತುಂಬಾ ಸಮಾಧಾನ ಹೇಳಿದರು. ನಾವು ಈ ಭೂಮಿಯ ಮೇಲಿದ್ದೇವೆಯೇ ಎಂಬ ಆಶ್ಚರ್ಯ, ಆ ನೆಲದ ಬಗ್ಗೆ, ಆ ಜನರ ಬಗ್ಗೆ ಧನ್ಯತಾ ಭಾವ ನಮಗೆ! ಅಲ್ಲಿ ಪ್ಲಾಸ್ಟರ್ ಮಾಡಿಸಿಕೊಂಡು ಹೊರಡುವುದಕ್ಕೆ ಸಂಜೆಯಾಗಿಬಿಟ್ಟಿತ್ತು. ನಾವು ಹೋಟೆಲ್ ೧೧ ಗಂಟೆಗೆ ಖಾಲಿ ಮಾಡಬೇಕಿತ್ತು. ಹೋಟೆಲ್ಲಿನವರಿಗೆ ಶೈಲ ಫೋನ್ ಮಾಡಿ ಪರಿಸ್ಥಿತಿ ವಿವರಿಸಿದಳು. 'ಚಿಂತೆ ಬೇಡ. ಅನುಕೂಲವಾದಾಗ ಬನ್ನಿ.ಅವರು ಬೇಗ ಗುಣಮುಖರಾಗಲೆಂದು ದೇವರನ್ನು ಪ್ರಾರ್ಥಿಸುತ್ತೇವೆ' ಅಂತ ಉತ್ತರ ಬಂತು.

ಆಸ್ಪತ್ರೆಯವರೇ ಟ್ಯಾಕ್ಸಿ ಮಾಡಿಕೊಟ್ಟರು. ವಿಮಾನ ನಿಲ್ದಾಣದಲ್ಲಿ ಗಾಲಿಕುರ್ಚಿಯಲ್ಲಿ ಕತಾರ್ ಏರ್‌ವೇಯ್ಸ್‌ನ ಬೋರ್ಡಿಂಗ್ ಪಾಸ್ ಕೌಂಟರಿಗೆ ಬಂದೆವು. ನಾನು 'ಫಿಟ್‌ನೆಸ್' ಪತ್ರ ತೋರಿಸಿದ ಮೇಲೆ ತುಂಬಾ ಅನುಕೂಲ ಮಾಡಿಕೊಟ್ಟರು. ಕಾಲು ನೀಡಲು ಜಾಗ ಇರುವ ಮುಂದಿನ ಸೀಟಿನಲ್ಲಿ ವ್ಯವಸ್ಥೆ ಮಾಡಿಕೊಟ್ಟರು. ಒಳಗೆ ಬಿಸಿನೆಸ್ ಕ್ಲಾಸ್ ನೋಡಿಕೊಳ್ಳುತ್ತಿದ್ದ ಹಮೀದ್ ಅನ್ನುವವರು ತೋರಿಸಿದ ಪ್ರೀತಿ ನಮ್ಮನ್ನು ಅಲ್ಲಾಡಿಸಿಬಿಟ್ಟಿತು. ವಿಮಾನದಲ್ಲಿದ್ದ ರಗ್ಗನ್ನೆಲ್ಲಾ ಒಟ್ಟುಮಾಡಿ ಕಾಲಿಗೆ ಸೊಗಸಾದ ಸಪೋರ್ಟ ಮಾಡಿಕೊಟ್ಟರು. ವರ ಉಪಚಾರ ಅಲ್ಲಿಗೆ ಮುಗಿಯಲಿಲ್ಲ .ಮೂರು ಸೀಟು ಸೇರಿ ಬೆಡ್ಷೀಟ್ ಹಾಕಿ ಮಲಗಿಸಿ ಉದ್ದಕ್ಕೂ ವಿಚಾರಿಸಿಕೊಳ್ಳುತ್ತಾ ಊರು ತಲುಪಿಸಿಬಿಟ್ಟರು. ನನಗೆ ವಿಮಾನದ ಒಳಗಡೆ ವೀಲ್‌ಚೇರ್ ಕೊಡಲಿಲ್ಲ ಅಂತ ಸಿಟ್ಟಿನಿಂದ 'ನಿಯಮಗಳ ಹೆಸರಲ್ಲಿ ಮಾನವೀಯತೆ ಸಾಯುತ್ತಿದೆ' ಅಂತ ಬೇಸರಿಸಿಕೊಂಡಿದ್ದರು. ಬೆಂಗಳೂರಿನಿಂದ ಮಗಳು ಅಳಿಯ ಕಾರಲ್ಲಿ ಮೈಸೂರು ತಲುಪಿಸಿದರು.

. ಒಟ್ಟಿನಲ್ಲಿ ಹೇಳಬೇಕೆಂದರೆ ಸುದ್ದಿ ಕೇಳಿ ಮನೆಯವರು, ಆತ್ಮೀಯರು ಅನುಭವಿಸಿದ ಪ್ರಮಾಣದ ಆತಂಕವನ್ನು ನಾವು ಅನುಭವಿಸಲಿಲ್ಲ.

ಓಹ್! ಈ ಜನ ಎಷ್ಟು ಸರಳರು! ಒಳ್ಳೆಯವರು!! ನಾವು? ನಮ್ಮ ಆಸ್ಪತ್ರೆಗಳು, ನಮ್ಮ ವೈದ್ಯರು ಮತ್ತವರ ಸಿಬ್ಬಂದಿ?



**(ಸಂಖ್ಯಾಶಾಸ್ತ್ರದ ನಿವೃತ್ತ ಅಧ್ಯಾಪಕರಾದ ಟಿ.ಎಸ್. ವೇಣುಗೋಪಾಲ್ ಈಗ ತಮ್ಮ ಪತ್ನಿಯ ಜೊತೆ ಸಂಗೀತಗಾರರ ಕುರಿತ ಮಹತ್ವದ ಕೃತಿಗಳ ರಚನೆ ಮತ್ತು 'ರಾಗಮಾಲಾ' ಹೆಸರಿನಲ್ಲಿ ಅವುಗಳ ಪ್ರಕಾಶನದಲ್ಲಿಯೂ ತೊಡಗಿದ್ದಾರೆ.)**

ತಿಂಗಳ ವಿಶೇಷ ಲೇಖನ

# ದ್ವಿ-ರಾಷ್ಟ್ರ ಸಿದ್ಧಾಂತ: ಹಿಂದುತ್ವವಾದಿಗಳಿಂದ ಕಡ ತಂದ ಜಿನ್ನಾ

ಮೂಲ ಇಂಗ್ಲಿಷ್: **ಪ್ರೊ. ಶಂಸುಲ್ ಇಸ್ಲಾಮ್**



**ಇಂದೂ ದೇಶವನ್ನು ಹಲವು ರೀತಿಗಳಲ್ಲಿ ಕಾಡುತ್ತಿರುವ ರಾಷ್ಟ್ರವಿಭಜನೆಗೆ ನಿರ್ಣಾಯಕವಾಗಿ ಕಾರಣರಾದ್ದು ಮಹಮ್ಮದಾಲಿ ಜಿನ್ನಾ ಅವರೇ ಆದರೂ, ಹಿಂದೂ-ಮುಸ್ಲಿಮರಿಗೆ ಒಂದೇ ಸಾಮಾನ್ಯ ರಾಷ್ಟ್ರ ಸಲ್ಲದು ಎಂಬ ದ್ವಿ-ರಾಷ್ಟ್ರ ಸಿದ್ಧಾಂತವನ್ನು ಜಿನ್ನಾ ಅವರಿಗಿಂತ ಬಹುಮುನ್ನವೇ ಮಂಡಿಸಿದ್ದಷ್ಟೇ ಅಲ್ಲದೆ ಅದರ ವಿವರಗಳನ್ನೂ ಸಿದ್ಧಪಡಿಸಿದ್ದವರೂ ಹಿಂದೂ ರಾಷ್ಟ್ರೀವಾದಿ ನಾಯಕರೇ ಎಂಬುದು ಚರಿತ್ರೆಯ ದಾಖಲೆಗಳು ಸ್ಪಷ್ಟವಾಗಿ ಹೇಳುತ್ತವೆ. ಹಾಗೆ ನೋಡಿದರೆ ತನ್ನ ಹುಟ್ಟು ಧರ್ಮ ಇಸ್ಲಾಂ ಬಗೆಗೆ ಕಿಂಚಿತ್ತೂ ಶ್ರದ್ಧೆ ಇಲ್ಲದೆ ಕಟ್ಟಾ 'ಸೆಕ್ಯುಲರ್' ಆಗಿದ್ದ ಜಿನ್ನಾ ಇಸ್ಲಾಂ ರಾಷ್ಟ್ರವಾದಿಯಾಗಿ ಪರಿವರ್ತಿತವಾದ ಪ್ರಕ್ರಿಯೆ ಕುತೂಹಲಕಾರಿಯಾದದ್ದು. ಈ ಪ್ರಕ್ರಿಯೆಯ ಒಂದು ಹಿನ್ನೆಲೆಯನ್ನು ಒದಗಿಸುತ್ತದೆ ಈ ಲೇಖನ.-ಸಂ.**

೨೦೦೨ರಲ್ಲಿ ಗುಜರಾತಿನಲ್ಲಿ ಮುಸ್ಲಿಮರ ಮಾರಣಹೋಮ ನಡೆದಾಗ ಪ್ರಸಿದ್ಧ ಇಂಗ್ಲಿಷ್ ಪತ್ರಿಕೆಯೊಂದು ಆರ್ ಎಸ್ ಎಸ್ ನ ಬಗ್ಗೆ ಬರೆಯುವಾಗ ಜಾರ್ಜ್ ಆರ್ವೆಲ್ ಹೇಳುವ 'ಎರಡು ನಾಲಿಗೆಯ ಮಾತನ್ನು' ಕುರಿತು ಪ್ರಸ್ತಾಪ ಮಾಡಿತ್ತು *(ಟೈಮ್ಸ್ ಆಫ್ ಇಂಡಿಯಾ , ೧೬ ಆಗಸ್ಟ್, ೨೦೦೨)*. ಅದು ಬಹುಪಾಲು ಸರಿಯಾಗಿತ್ತು. ಅದರಲ್ಲೂ ಭಾರತದ ಮೊದಲ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು, ಆರ್ ಎಸ್ ಎಸ್ ನ ಸಂಚುಕೋರತನದ ಬಗ್ಗೆ ದೇಶದ ಮೊದಲ ಗೃಹ ಮಂತ್ರಿ ಸರದಾರ್ ಪಟೇಲ್ ಅವರಿಗೆ ಹೀಗೆ ಬರೆದಿದ್ದರು: "ಆರ್‌ಎಸ್‌ಎಸ್‌ನವರು ಗಲಾಟೆ ಮಾಡುತ್ತಾರೆಂದು ನನಗೆ ಮಾಹಿತಿ ಬಂದಿದೆ. ಮುಸ್ಲಿಮರಂತೆ ಕಾಣುವ ಅವರಲ್ಲಿ ಕೆಲವರು ಅವರಂತೆ ಬಟ್ಟೆ ಹಾಕಿಕೊಂಡು ಹಿಂದುಗಳ ಮೇಲೆ ಹಲ್ಲೆ ಮಾಡಿ ದೊಂಬಿ ಎಬ್ಬಿಸುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇನ್ನೂ ಕೆಲವರು ಹಿಂದುಗಳು ಮುಸ್ಲಿಮರ ಮೇಲೆ ಹಲ್ಲೆ ಮಾಡಿ ಮುಸ್ಲಿಮರನ್ನು ಪ್ರಚೋದಿಸಲು ಕಾದಿದ್ದಾರೆ. ಇದರಿಂದ ಹಿಂದು-ಮುಸ್ಲಿಮರ ನಡುವೆ ದೊಡ್ಡ ದಳ್ಳುರಿಯೊಂದು ಹತ್ತಿಕೊಳ್ಳಲಿದೆ".*[ರಾಜೇಂದ್ರ ಪ್ರಸಾದ್-ನೆಹರು: ಅಗ್ರಿಮೆಂಟ್ ವಿತಿನ್ ಡಿಫರೆನ್ಸ್- ಸೆಲೆಕ್ಟ್ ಕರೆಸ್ಪಾಂಡೆನ್ಸ್ ೧೯೩೩-೧೯೫೦'(ನೀರಜಾ ಸಿಂಗ್ ಸಂ. ೧೯೯೮), ಎನ್‌ಬಿಟಿ ಪು ೪೩]*

ಅಲಿಗಡ್ ಮುಸ್ಲಿಮ್ ವಿಶ್ವವಿದ್ಯಾಲಯದಲ್ಲಿ ಜಿನ್ನಾ ಅವರ ಭಾವಚಿತ್ರವನ್ನು ಕುರಿತ ವಿವಾದವನ್ನು ಗಮನಿಸಿದರೆ, ಅದು ಇದೇ ಪುಂಡರ ಕಾರಸ್ಥಾನ ಎಂಬುದು ಗೊತ್ತಾಗುತ್ತದೆ. ಮಾಜಿ ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಅವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು (AMUSU) ಉದ್ದೇಶಿಸಿ ಮಾತಾಡುವವರಿದ್ದರು. ಶಿಷ್ಟಾಚಾರದ ನಿಯಮಗಳ ಪ್ರಕಾರ ಈ ಕಾರ್ಯಕ್ರಮಕ್ಕೆ ಪೋಲಿಸ್ ಮತ್ತಿತರ ಇಲಾಖೆಗಳ ಅನುಮತಿ ಇತ್ತು. ಅದರಂತೆ ಸೂಕ್ತ ಭದ್ರತೆ ಹಾಗೂ ಸಿಬ್ಬಂದಿಯನ್ನು ಒದಗಿಸಲಾಗಿತ್ತು.

ಆದರೂ ಸಹ, ಅನ್ಸಾರಿಯವರ ಹೇಳಿಕೆಯಂತೆ ಅವರು ತಂಗಿದ್ದ " ಅತಿಥಿ ಗೃಹಕ್ಕೆ ಪುಂಡರು ಹೇಗೆ ನುಗ್ಗಿಬಂದರು ಎಂಬುದು ನಿಗೂಢ ಸಂಗತಿಯಾಗಿದೆ".(*ಇಂಡಿಯನ್ ಎಕ್ಸ್‌ಪ್ರೆಸ್ ಮೇ ೧೩, ೨೦೧೮)*. ವಿದ್ಯಾರ್ಥಿ ಸಂಘದ ಸಭೆಯಲ್ಲಿ ಜಿನ್ನಾ ಅವರ ಫೋಟೋವನ್ನು ಹಾಕಲಾಗಿತ್ತು ಎಂಬ ಕಾರಣಕ್ಕೆ, ಪುಂಡು ಹಿಂದುತ್ವವಾದಿ ಪಡೆಯವರು ತಮ್ಮ ದಾಳಿಯನ್ನು ಸಮರ್ಥಿಸಿಕೊಂಡರು. ಜಿನ್ನಾರಿಗೆ ೧೯೩೮ರಲ್ಲಿ ವಿದ್ಯಾರ್ಥಿ ಸಂಘದ ಆಜೀವ ಸದಸ್ಯತ್ವ ನೀಡಿದ ಕಾರಣಕ್ಕೆ ಬಹಳ ವರ್ಷಗಳಿಂದ ಅವರ ಫೋಟೋವನ್ನು ಹಾಕಲಾಗಿತ್ತು. ಅದರ ಬಗ್ಗೆ ಸುಮಾರು ೮೦ ವರ್ಷಗಳ ಕಾಲ ಹಿಂದುತ್ವ ಗುಂಪುಗಳಿಗೆ ಯಾವ ತಕರಾರೂ ಇರಲಿಲ್ಲ. ಆದರೆ ಉತ್ತರ ಪ್ರದೇಶದ ಉಪಚುನಾವಣೆಗಳಲ್ಲಿ ಹಿಂದುತ್ವವಾದಿ ಗುಂಪುಗಳಿಗೆ ಯಾವಾಗ ಸೋಲುಂಟಾಯಿತೋ ಆಗ ಇದು ಮುಖ್ಯ ವಿಷಯವಾಗಿಬಿಟ್ಟಿತು. ಜಿನ್ನಾರ ಫೋಟೋ ತೆಗೆಯಲು ಗಲಭೆ ಎಬ್ಬಿಸಿದ ಗುಂಪುಗಳಿಗೆ, ಪಾಕಿಸ್ತಾನದ ಸ್ಥಾಪಕರಾದ ಜಿನ್ನಾರವರು ೧೯೪೨-೧೩ರಲ್ಲಿ *ಹಿಂದೂ ಮಹಾಸಭಾದ* ಜೊತೆಗೂಡಿ ಸಮ್ಮಿಶ್ರ ಸರ್ಕಾರವನ್ನು ರಚಿಸಿದ್ದರು ಎಂಬುದು, ಮರೆತು ಹೋದಂತೆ ಕಾಣುತ್ತದೆ.

### ಜಿನ್ನಾರ ಕುರಿತು ಕೆಲವು ಮುಖ್ಯ ಸಂಗತಿಗಳು

ಜಿನ್ನಾರವರು ವಿಭಜನೆಯ ಪಿತಾಮಹನಾಗುವದಕ್ಕಿಂತ ಮೊದಲಿನ ಇತಿಹಾಸವನ್ನು ಅರಿತರೆ, ಅವರ ಬಗ್ಗೆ ಸರಿಯಾದ ಚಿತ್ರಣ ದೊರೆಯುತ್ತದೆ. ೨೦ನೇ ಶತಮಾನದ ಆರಂಭದಲ್ಲಿ ಅವರು ಕಟ್ಟಾ ಸೆಕ್ಯುಲರಿಸ್ಟರಾಗಿ; ದಾದಾಭಾಯಿ ನವರೋಜಿ, ಗೋಖಲೆ, ಅನಿಬೆಸೆಂಟ್,ಗಾಂಧಿ, ಮೋತಿಲಾಲ್ ನೆಹರು, ಮೌಲಾನಾ ಆಜಾದ್, ಸರ್ದಾರ್ ಪಟೇಲ್ ಮೊದಲಾದ ಮಂಚೂಣಿ ಕಾಂಗ್ರೆಸ್ ನಾಯಕರಂತೆಯೇ ಬ್ರಿಟಿಶರ ವಿರುದ್ಧ ಹೋರಾಟ ನಡೆಸಿದ್ದರು. ಆ ದಿನಗಳಲ್ಲಿ ಅವರು ಹಿಂದೂ-ಮುಸ್ಲಿಮ್ ಐಕ್ಯತೆ ಹಾಗೂ ಭಾರತದ ಸ್ವಾತಂತ್ರ್ಯ-ಐಕ್ಯತೆಯ ಹರಿಕಾರರಲ್ಲಿ ಒಬ್ಬರಾಗಿದ್ದರು. ಅವರನ್ನು ಹಿಂದುತ್ವ ಗುಂಪುಗಳು ಗಾಂಧಿ, ಮೋತಿಲಾಲ ನೆಹರೂ, ಆಜಾದರ ಗುಂಪಿಗೆ ಸೇರಿಸಿ ಹೀಗಳೆಯುತ್ತಿದ್ದರು.

ಜಿನ್ನಾ ಅವರು ಬ್ರಿಟಿಶರ ವಿರುದ್ಧ ಹಿಂಸಾತ್ಮಕ ಹೋರಾಟವನ್ನು ಬೆಂಬಲಿಸಿರಲಿಲ್ಲ. ಆದರೆ ಯಾವಾಗ ಬ್ರಿಟಿಶ್ ಸರ್ಕಾರವು ಭಗತ್ ಸಿಂಗ್‌ರನ್ನು ಬಂಧಿಸಿ ಅವರನ್ನು ನ್ಯಾಯಾಂಗದ ಮೂಲಕವೇ ಕೊಲ್ಲಲು ಉದ್ದೇಶಿಸಿತೋ(ಆರೋಪಿಯು ಕೋರ್ಟಿನಲ್ಲಿ ಹಾಜರಿಲ್ಲದಿದ್ದರೂ ಅವನ ವಿರುದ್ಧ ಮೊಕದ್ದಮೆ ನಡೆಯಲು ಅವಕಾಶ ಮಾಡಿಕೊಡುವ ಮಸೂದೆಯನ್ನು ತರುವ ಮೂಲಕ), ಆಗ ಸೆಪ್ಟೆಂಬರ್ ೧೨, ೧೯೨೯ರಂದು ಜಿನ್ನಾ ಕೇಂದ್ರ ಶಾಸನಸಭೆಯಲ್ಲಿ ಬಹಳ ತೀಕ್ಷ್ಣವಾದ ಭಾಷಣ ಮಾಡಿದರು. "ಉಪವಾಸ ಸತ್ಯಾಗ್ರಹ ಮಾಡುವ ವ್ಯಕ್ತಿಗೆ ಒಂದು ಆತ್ಮವಿದೆ. ಅವನಿಗೆ ನ್ಯಾಯದ ಬಗ್ಗೆ ಕಾಳಜಿಯಿದೆ. ಆತ ಯಾವುದೋ ಪಾತಕ ಮಾಡಿರುವ ಮಾಮೂಲಿ ಕ್ರಿಮಿನಲ್ ಅಲ್ಲ. ನಾನು ಭಗತ್ ಸಿಂಗ್ ವಿರುದ್ಧ ಕೈಗೊಂಡಿರುವ ಕ್ರಮವನ್ನು ವಿರೋಧಿಸುತ್ತೇನೆ. ವಿಷಾದದ ಸಂಗತಿಯೆಂದರೆ, ಇಂದಿನ ಯುವ ಜನತೆ-ಸರಿಯೋ ತಪ್ಪೋ ಗೊತ್ತಿಲ್ಲ-ಇದರಿಂದ ಜಾಗೃತವಾಗಿದೆ. ನೀವು ಅವರನ್ನು ಎಷ್ಟೇ ದೂಷಿಸಿದರೂ, ದಾರಿ ತಪ್ಪಿದವರು ಎಂದು ಹೀಯಾಳಿಸಿದರೂ ಅವರು ಈ ವಿನಾಶಕಾರಿ ಆಡಳಿತ ವ್ಯವಸ್ಥೆಯಿಂದ ರೋಸಿ ಹೋಗಿ ಅದರ ವಿರುದ್ಧ ಸೆಟೆದು ನಿಂತಿದ್ದಾರೆ"*(ಎಜಿ.ನೂರಾನಿ, ದಿ ಟ್ರಯಲ್ ಆಫ್ ಭಗತ್ ಸಿಂಗ್)*

ಇದಕ್ಕಿಂತ ಮುಂಚೆ, ೧೯೧೬ರಲ್ಲಿ ಬಾಲಗಂಗಾಧರ ತಿಲಕ(ಹಿಂದುತ್ವವಾದಿಗಳ ಕಣ್ಮಣಿ)ರ ವಿರುದ್ಧದ ರಾಜದ್ರೋಹದ ಕೇಸಿನಲ್ಲಿ, ಜಿನ್ನಾ ತಿಲಕರ ವಕೀಲರಾಗಿದ್ದರು. ಮರಣ ದಂಡನೆಯ ಶಿಕ್ಷೆಗೆ ಗುರಿಯಾಗಬಹುದಾಗಿದ್ದ ಈ ಚರಿತ್ರಾರ್ಹ ಮೊಕದ್ದಮೆಯನ್ನು ಜಿನ್ನಾರವರು ಗೆದ್ದು ಬ್ರಿಟಿಶರಿಗೆ ಭಾರೀ ಮುಖಭಂಗವನ್ನುಂಟುಮಾಡಿದ್ದರು. ೧೯೩೫ರಲ್ಲಿ ಲಾಹೋರ್‌ನ ಮುಸ್ಲಿಮರು ಹಾಗೂ ಸಿಖ್ಖರ ನಡುವೆ ಧಾರ್ಮಿಕ ಸ್ಥಳವೊಂದರ ಕುರಿತ ವಿವಾದ ಉಂಟಾಯಿತು. ಮುಸ್ಲಿಮರು ಈ ಪ್ರಕರಣದಲ್ಲಿ ತಮ್ಮ ವಕಾಲತ್ತು ವಹಿಸಲು ಜಿನ್ನಾರನ್ನು ಕೇಳಿದಾಗ ಅವರು ಅದನ್ನು ತಿರಸ್ಕರಿಸಿ ಅದರಿಂದ ದೂರ ಉಳಿದರು.

ಗಾಂಧಿಯವರ ಸಮೂಹ ಹೋರಾಟವನ್ನು ವಿರೋಧಿಸಿ, ಅದರಲ್ಲೂ ಮುಖ್ಯವಾಗಿ ರಾಷ್ಟ್ರೀಯ ಹೋರಾಟದಲ್ಲಿ ಧಾರ್ಮಿಕ ನಾಯಕರನ್ನು ಬಳಸಿಕೊಳ್ಳುವುದನ್ನು ವಿರೋಧಿಸಿ, ೧೯೨೦-೨೧ರಲ್ಲಿ ಜಿನ್ನಾ ಗಾಂಧಿಯವರಿಂದ ದೂರವಾದರು. ಕಾಂಗ್ರೆಸ್ ಅವರನ್ನು ದೂರವಾಗಿಡಲು ಪ್ರಯತ್ನಿಸಿದಾಗ ಅದನ್ನು ವಿರೋಧಿಸುವ ಬದಲು ಜಿನ್ನಾ-ಈ ಮೊದಲು ತಾವೇ ಭೂಮಾಲೀಕ, ಶ್ರೀಮಂತ ಹಾಗೂ ಜಮೀನ್ದಾರಿ ವರ್ಗಗಳ ಪ್ರತಿನಿಧಿ ಎಂದು ಕರೆಯುತ್ತಿದ್ದ-ಮುಸ್ಲಿಂ ಲೀಗ್‌ನತ್ತ ಚವಾಲಿದರು.. ಹಾಗೆ ನೋಡಿದರೆ ಆಚಾರಣೆಗಳಲ್ಲಾಗಲೀ, ಧಾರ್ಮಿಕ ನಂಬಿಕೆಗಳ ಹಿನ್ನೆಲೆಯಲ್ಲಿ ಅವರೊಬ್ಬ ಶ್ರದ್ಧಾವಂತ ಮುಸ್ಲಿಮನಾಗಿರಲಿಲ್ಲ. ಇಂಗ್ಲಿಷ್-ಗುಜರಾತಿಗಳನ್ನು ಚೆನ್ನಾಗಿ ಬಲ್ಲ ಅವರಿಗೆ ಉರ್ದು ಓದಲು ಬರೆಯಲು ಬರುತ್ತಿರಲಿಲ್ಲ.

### ದ್ವಿ-ರಾಷ್ಟ್ರ ಪ್ರತಿಪಾದನೆ ಜಿನ್ನಾರಿಂದ ಅಲ್ಲ

ದ್ವಿರಾಷ್ಟ್ರ ಸಿದ್ಧಾಂತದ ಪರಿಕಲ್ಪನೆಯನ್ನು ಮುಸ್ಲಿಮರು ಪ್ರತಿಪಾದಿಸುವ ಮುಂಚೆಯೇ ಹಿಂದೂ ರಾಷ್ಟ್ರೀಯವಾದಿಗಳು ಪ್ರತಿಪಾದಿಸಿದ್ದರು. ಮುಸ್ಲಿಮ್ ಲೀಗ್‌ನವರು ಈ ಸಿದ್ಧಾಂತವನ್ನು ಎತ್ತಿ ಹಿಡಿದಿದ್ದು ಬಹಳ ತಡವಾಗಿ. ಮುಖ್ಯವಾಗಿ ಈ ಪರಿಕಲ್ಪನೆಯೇ ಹಿಂದುತ್ವವಾದಿ ಚಿಂತನೆಗಳ ಪಕ್ವಫಲವಾಗಿತ್ತು.

೧೯ನೇ ಶತಮಾನದ ಬಂಗಾಳದಲ್ಲಿ ಹಿಂದೂ ರಾಷ್ಟ್ರೀಯವಾದಿಗಳು ಇದಕ್ಕೆ ನಾಂದಿ ಹಾಡಿದರು. ಮುಖ್ಯವಾಗಿ, ಅರಬಿಂದೋ ಘೋಶ್‌ರ ತಾಯಿಯ

ಮುತ್ತಾತ ರಾಜ ನಾರಾಯಣ ಬಸು(೧೮೨೬–೧೮೯೯) ಮತ್ತು ಅವರ ಅನುಯಾಯಿ ನಭಾ ಗೋಪಾಲ್ ಮಿತ್ರಾ(೧೮೪೦–೯೪) ಅವರನ್ನು ದ್ವಿರಾಷ್ಟ್ರ ಸಿದ್ಧಾಂತ ಹಾಗೂ ಹಿಂದೂ ರಾಷ್ಟ್ರೀಯವಾದದ ಮಹಾ ಪೋಷಕರೆಂದು ಗುರುತಿಸಬಹುದು. ಬಸು ಅವರು ಓದುಬರಹ ಕಲಿತವರಲ್ಲಿ ರಾಷ್ಟ್ರೀಯವಾದಿ ಚಿಂತನೆಗಳನ್ನು ಉದ್ದೀಪಿಸಲು ಆರಂಭಿಸಿದ ಸಂಘವೊಂದು ಕ್ರಮೇಣ ಹಿಂದೂಗಳ ಶ್ರೇಷ್ಠತೆಯನ್ನು ಎತ್ತಿಹಿಡಿಯಲು ಅವಕಾಶ ಕಲ್ಪಿಸಿತು. ಹಿಂದೂ ಧರ್ಮದಲ್ಲಿ ಜಾತಿ ಪದ್ಧತಿಯ ಆಚರಣೆಯ ಹೊರತಾಗಿಯೂ, ಕ್ರೈಸ್ತ ಅಥವಾ ಇಸ್ಲಾಮ್ ಧರ್ಮಗಳಿಗಿಂತ ಉನ್ನತವಾದ ಸಾಮಾಜಿಕ ಆದರ್ಶಗಳಿವೆ ಎಂದು ಅವರು ಸಂಘದ ಸಭೆಗಳಲ್ಲಿ ಬಲವಾಗಿ ಪ್ರತಿಪಾದಿಸಿದರು.

ಬಸು ಅವರು ಹಿಂದೂ ಧರ್ಮ ಇತರ ಧರ್ಮಗಳಿಗಿಂತ ಶ್ರೇಷ್ಠ ಎಂದು ಪ್ರತಿಪಾದಿಸುವುದಕ್ಕಿಂತ ಹೆಚ್ಚಾಗಿ ಇಲ್ಲಿನ ಜಾತಿ ಪದ್ಧತಿಯ ಬಲವಾದ ಸಮರ್ಥಕರಾಗಿದ್ದರು. ಅವರು 'ಮಹಾ ಹಿಂದೂ ಸಮಿತಿ' ಎಂಬ ಕಲ್ಪನೆಯನ್ನು ಬಿತ್ತಿದವರಲ್ಲಿ ಮೊದಲಿಗರಷ್ಟೇ ಅಲ್ಲ, *ಹಿಂದೂ ಮಹಾ ಸಭಾದ* ಸ್ಥಾಪನೆಗೆ ಅಡಿಪಾಯವನ್ನು ಒದಗಿಸಿದ 'ಭಾರತ ಧರ್ಮ ಮಹಾಮಂಡಲ'ದ ಸಂಸ್ಥಾಪಕರೂ ಆಗಿದ್ದರು. ಅದರ ಮೂಲಕ ಹಿಂದೂಗಳು ಭಾರತದಲ್ಲಿ ಆರ್ಯ ದೇಶವೊಂದನ್ನು ಸ್ಥಾಪಿಸಲು ಸಾಧ್ಯ ಎಂದು ನಂಬಿದ್ದರು. ಅವರು "ಉನ್ನತ ಪಂಕ್ತಿಯಲ್ಲಿರುವ ಬಲಿಷ್ಠ ಭಾರತವು ಗಾಢ ನಿದ್ದೆಯಿಂದ ಎಚ್ಚೆತ್ತು ತನ್ನ ದಿವ್ಯ ಶಕ್ತಿಯಿಂದ ಪ್ರಗತಿ ಪಥದ ಕಡೆ ಮುನ್ನುಗ್ಗುತ್ತದೆ. ಹೀಗೆ ಪುನರುಜ್ಜೀವನಗೊಂಡ ಭಾರತವು ತನ್ನ ಜ್ಞಾನ, ಆಧ್ಯಾತ್ಮಿಕತೆ ಹಾಗು ಸಂಸ್ಕೃತಿಗಳ ಸಮಾಗಮದಿಂದ ಇಡೀ ಭೂಮಂಡಲದಲ್ಲಿ ಜಾಜ್ವಲ್ಯಮಾನವಾಗಿ ಕಂಗೊಳಿಸುತ್ತದೆ" ಎಂದು ಅವರು ನಂಬಿದ್ದರು *(ಆರ್ ಸಿ ಮುಜುಮ್‌ದಾರ್, ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಇಂಡಿಯಾ ಸಂ ೧, ಕಲ್ಕತ್ತಾ ೧೯೬೧ ಪು೨೯೫–೨೯೬)*

ನಭಾ ಗೋಪಾಲ್ ಮಿತ್ರಾ ಅವರು ವಾರ್ಷಿಕ ಹಿಂದೂ ಮೇಳಗಳನ್ನು ಆರಂಭಿಸಿದರು. ಬಂಗಾಳಿ ವರ್ಷದ ಕೊನೆಯ ದಿನದಂದು ಆಚರಿಸಲಾಗುತ್ತಿದ್ದ ಈ ಮೇಳದಲ್ಲಿ ಬಂಗಾಳಿ ಜನ ಜೀವನ–ಆಚರಣೆಗಳಲ್ಲಿರುವ ಹಿಂದೂ ಅಂಶಗಳನ್ನು ಎತ್ತಿ ಹಿಡಿಯಲಾಗುತ್ತಿತ್ತು. ಇದು ೧೮೬೭ರಿಂದ ೧೮೮೦ರವರೆಗೆ ಅನೂಚಾನವಾಗಿ ನಡೆದು ಬಂತು. ಮಿತ್ರಾ ಅವರು ಹಿಂದೂಗಳಲ್ಲಿ ರಾಷ್ಟ್ರೀಯತಾವಾದಿ ಚಿಂತನೆಗಳನ್ನು ಗಟ್ಟಿಗೊಳಿಸಲು ಒಂದು ರಾಷ್ಟ್ರೀಯ ಸಂಘ ಹಾಗೂ ಒಂದು ರಾಷ್ಟ್ರೀಯ ದಿನಪತ್ರಿಕೆಯನ್ನು ಆರಂಭಿಸಿದರು. ತಮ್ಮ ಪತ್ರಿಕೆಯಲ್ಲಿ ಹಿಂದೂಗಳು ಸಹಜವಾಗಿ ರಾಷ್ಟ್ರವೊಂದನ್ನು ರೂಪಿಸಬಲ್ಲರು ಎಂದು ಪ್ರತಿಪಾದಿಸಿದರು. ಅವರ ಪ್ರಕಾರ "ಈ ದೇಶದಲ್ಲಿ ರಾಷ್ಟ್ರೀಯ ಐಕ್ಯತೆ ಸಾಧ್ಯವಾಗುವುದು ಹಿಂದೂ ಧರ್ಮದ ಆಧಾರದ ಮೇಲೆಯೇ. ಹಿಂದೂ ರಾಷ್ಟ್ರೀಯತೆಯು–ಯಾರು ಯಾವುದೇ ಪ್ರದೇಶ, ಭಾಷೆಗೆ ಸೇರಿರಲಿ–ಎಲ್ಲರನ್ನೂ ತನ್ನ ತೆಕ್ಕೆಗೆ ಒಳಗೊಳ್ಳುವ ಶಕ್ತಿಯನ್ನು ಪಡೆದಿದೆ" *(ಆರ್ ಸಿ ಮುಜುಮ್‌ದಾರ್, ತ್ರೀ ಫೇಸಸ್ ಆಫ್ ಸ್ಟ್ರಗಲ್ ಫಾರ್ ಫ್ರೀಡಂ, ಭಾರತೀಯ ವಿದ್ಯಾಭವನ, ಮುಂಬಯಿ ೧೯೬೧ ಪು.೮)*

ಹಿಂದು ರಾಷ್ಟ್ರೀಯವಾದ ಬಂಗಾಳದಲ್ಲಿ ಹೇಗೆ ಹುಟ್ಟಿತು ಎಂಬುದನ್ನು ಆಳವಾಗಿ ಅಧ್ಯಯನ ಮಾಡಿರುವ ಆರ್‌ಸಿ ಮುಜುಮ್‌ದಾರ್ ಅವರ ಪ್ರಕಾರ "ಜಿನ್ನಾ ಅವರು ದ್ವಿ ರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸುವ ೫೦ ವರ್ಷಗಳ ಮುಂಚೆಯೇ ಅದಕ್ಕೆ ಮುನ್ನುಡಿಯನ್ನು ನಭಾ ಗೋಪಾಲರು ಬರೆದಿದ್ದರು. ಅಲ್ಲಿಂದ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ, ರಾಷ್ಟ್ರೀಯತೆಯ ಚರ್ಚೆಯಲ್ಲಿ ಹಿಂದುತ್ವದ ಅಂಶಗಳು ಅವಿಭಾಜ್ಯ ಅಂಗವಾಗಿಬಿಟ್ಟವು" *( ತ್ರೀ ಫೇಸಸ್ ಆಫ್ ಸ್ಟ್ರಗಲ್ ಫಾರ್ ಫ್ರೀಡಂ, ಪು.೮)*

## ಆರ್ಯ ಸಮಾಜದ ಪಾತ್ರ

ಆರ್ಯಸಮಾಜವು ಉತ್ತರ ಭಾರತದಲ್ಲಿ ಹಿಂದೂ ಮುಸ್ಲಿಮ್ ಸಮುದಾಯಗಳು ಎರಡು ಭಿನ್ನ ರಾಷ್ಟ್ರಗಳು ಎಂದು ತೀವ್ರವಾಗಿ ಪ್ರತಿಪಾದಿಸಿತು. ಆರ್ಯ ಸಮಾಜದ ಹಾಗೆಯೇ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾದ ಪ್ರಮುಖ ನಾಯಕರೆಂದು ಗುರುತಿಸಲ್ಪಟ್ಟ ಭಾಯಿ ಪರಮಾನಂದ್(೧೮೭೬–೧೯೪೭) ಅಪಾರ ಪ್ರಮಾಣದ ಮುಸ್ಲಿಮ್ ವಿರೋಧಿ ಸಾಹಿತ್ಯವನ್ನು ಸೃಷ್ಟಿಸಿ ಅದರ ಮೂಲಕ ಭಾರತವು ಹಿಂದೂಗಳ ದೇಶ, ಹಾಗಾಗಿ ಮುಸ್ಲಿಮರು ಇಲ್ಲಿಂದ ಸ್ಥಳಾಂತರಗೊಳ್ಳಬೇಕು ಎಂದು ಪ್ರತಿಪಾದಿಸಿದರು.

ವಿ.ಡಿ. ಸಾವರ್ಕರ್ (೧೮೮೩–೧೯೬೬) ಹಾಗೂ ಎಂ ಎಸ್ ಗೋಲ್ವಾಲ್ಕರ್ (೧೯೦೬–೭೩) ಅವರುಗಳು ಹಿಂದೂ ರಾಷ್ಟ್ರದಲ್ಲಿ ಅಲ್ಪಸಂಖ್ಯಾತರಿಗೆ ಸ್ಥಾನವಿಲ್ಲ ಎಂದು ಮಾತಾಡುವ ಮೊದಲೇ, ೨೦ನೇ ಶತಮಾನದ ಆರಂಭದಲ್ಲಿ ಭಾಯಿ ಪರಮಾನಂದರು ಮುಸ್ಲಿಮರು ಅರೇಬಿಯಾ ದೇಶದ ಧರ್ಮದ ಪರಿಪಾಲಕರಾಗಿರುವ ಕಾರಣದಿಂದ ಹಿಂದೂಗಳು ಹಾಗೂ ಮುಸ್ಲಿಮರು ಸಂಪೂರ್ಣವಾಗಿ ಬೇರೆ ಬೇರೆ ಎಂದು ಘೋಷಿಸಿದ್ದರು. ಉರ್ದು ಭಾಷೆಯಲ್ಲಿ ಬರೆದ ಜನಪ್ರಿಯ ಸಾಹಿತ್ಯದ ಮೂಲಕ ಪರಮಾನಂದರು, ಹಿಂದೂಗಳು ಮಾತ್ರ ಇಲ್ಲಿನ ಮಣ್ಣಿನ ಮಕ್ಕಳು, ಮುಸ್ಲಿಮರು ಹೊರಗಿನವರು ಎಂದು ಸಾರಿ ಹೇಳಿದರು. ೧೯೦೮–೦೯ರಲ್ಲಿಯೇ ಅವರು ಹಿಂದೂ ಮುಸ್ಲಿಮ್ ಜನವಸತಿಗಳನ್ನು ಎರಡು ಪ್ರತ್ಯೇಕ ಸ್ಥಳಗಳಿಗೆ ಸ್ಥಳಾಂತರಿಸಬೇಕು ಎಂದು ಕರೆ ನೀಡಿದ್ದರು. ಈ ಕುರಿತು ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ಬರೆದಿದ್ದಾರೆ. " ಸಿಂಧ್ ಪ್ರಾಂತ್ಯದ ಆಚೆಗಿರುವ ಆಫ್ಘಾನಿಸ್ತಾನ ಹಾಗೂ ವಾಯುವ್ಯ ಗಡಿ ಪ್ರಾಂತ್ಯಗಳನ್ನು ಒಗ್ಗೂಡಿಸಿ ಮಹಾ ಮುಸ್ಲಿಮ್ ಸಾಮ್ರಾಜ್ಯವನ್ನು ಸೃಷ್ಟಿಸಬೇಕು. ಅಲ್ಲಿರುವ ಹಿಂದೂಗಳು ಸ್ಥಳಾಂತರಗೊಂಡು, ಅದೇ ರೀತಿ ದೇಶದಲ್ಲಿರುವ ಮುಸ್ಲಿಮರೆಲ್ಲ ಅಲ್ಲಿಗೆ ಹೋಗಿ ನೆಲೆಸಬೇಕು" *('ದಿ ಹಿಂದೂ ನ್ಯಾಶನಲ್ ಮೂವ್‌ಮೆಂಟ್' ಎಂಬ ಭಾಯಿ ಪರಮಾನಂದರ ಕರಪತ್ರ– ಬಿ ಆರ್ ಅಂಬೇಡ್ಕರ್‌ರ 'ಪಾಕಿಸ್ತಾನ್ ಆರ್ ದಿ ಪಾರ್ಟಿಶನ್ ಆಫ್ ಇಂಡಿಯಾ' ೧೯೯೦ ಪು ೩೫–೩೬ರಲ್ಲಿ ಉದ್ಧೃತ).*

ಕಾಂಗ್ರೆಸ್, ಹಿಂದೂ ಮಹಾಸಭಾ ಮತ್ತು ಆರ್ಯ ಸಮಾಜದ ಹಿರಿಯ ನಾಯಕರಾದ ಲಾಲಾ ಲಜಪತ್ ರಾಯ್(೧೮೬೫–೧೯೨೮) ಅವರು ಮತ್ತೊಬ್ಬ ಪ್ರಮುಖ ದ್ವಿ–ರಾಷ್ಟ್ರ ಸಿದ್ಧಾಂತದ ಪ್ರತಿಪಾದಕರಾಗಿದ್ದರು. ಎಜಿ ನೂರಾನಿಯವರ ಪ್ರಕಾರ "ಜಿನ್ನಾರವರು ೧೯೩೯ರಲ್ಲಿ ದ್ವಿ ರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸಿ ೧೯೪೦ರಲ್ಲಿ ಭಾರತದ ಆತ್ಮಭೇದಕ್ಕೆ ಕಾರಣವಾದ ದೇಶವಿಭಜನೆ ನಡೆಯುವ ಮೊದಲೇ ಮಹಾಸಭಾದ ನಾಯಕರಾದ ಲಜಪತ್ ರಾಯ್ ಹಾಗೂ ಸಾವರ್ಕರ್ ಅವರು ಅದಕ್ಕೆ ಬೇಕಾದ ತಾತ್ವಿಕತೆಯನ್ನು ಸೃಷ್ಟಿಸಿದ್ದರು" *( 'ಪರಿವಾರ್ ಅಂಡ್ ಪಾರ್ಟಿಶನ್' ಫ್ರಂಟ್ ಲೈನ್, ಆಗಸ್ಟ್ ೨೨ ೨೦೧೪).*

೧೮೯೯ರಲ್ಲಿ ಲಜಪತ್ ರಾಯ್ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅನ್ನು ಕುರಿತು ಬರೆಯುತ್ತ "ಹಿಂದೂಗಳು ಪ್ರತ್ಯೇಕವಾದ ನಾಗರಿಕತೆಯನ್ನು ಪ್ರತಿನಿಧಿಸುವುದರಿಂದ ಅವರು ತಮ್ಮದೇ ಆದ ರಾಷ್ಟ್ರವನ್ನು ಹೊಂದಬೇಕು" ಎಂದಿದ್ದರು *(ನೂರಾನಿ 'ಪರಿವಾರ್ ಅಂಡ್ ಪಾರ್ಟಿಶನ್' ಲೇಖನದಲ್ಲಿ).* ೧೯೨೪ರ ವೇಳೆಗೆ ಇನ್ನೂ ಸ್ಪಷ್ಟವಾಗಿ ಅದನ್ನು ಹೀಗೆ ವಿವರಿಸಿದರು. "ನನ್ನ ಯೋಜನೆಯ ಪ್ರಕಾರ ಮುಸ್ಲಿಮರು ನಾಲ್ಕು ಪ್ರತ್ಯೇಕ ರಾಜ್ಯಗಳನ್ನು ಪಡೆಯಬಹುದು. ೧. ವಾಯುವ್ಯ ಗಡಿ ಪ್ರಾಂತ್ಯಗಳಲ್ಲಿನನ ಪಠಾಣ್ ಪ್ರಾಂತ್ಯ ೨. ಪಶ್ಚಿಮ ಪಂಜಾಬ್ ೩. ಸಿಂಧ್ ಪ್ರಾಂತ್ಯ ೪. ಪೂರ್ವ ಬಂಗಾಳ. ಭಾರತದ ಇನ್ನಾವುದೇ ಪ್ರದೇಶದಲ್ಲಿ ಒಂದು ಪ್ರಾಂತ್ಯವನ್ನು ಸ್ಥಾಪಿಸುವಷ್ಟು ಸಂಖ್ಯೆಯಲ್ಲಿ ಮುಸ್ಲಿಮ್ ಜನಸಂಖ್ಯೆ ಇದ್ದರೆ ಅಲ್ಲಿ ಇದೇ ಮಾದರಿಯನ್ನು ಅನುಸರಿಸಬೇಕು. ಆದರೆ ಆ ಪ್ರದೇಶವನ್ನು ಬಹಳ ಸ್ಪಷ್ಟವಾಗಿ ಭಾರತಕ್ಕೆ ಸೇರದ ಪ್ರಾಂತ್ಯವೆಂದು ಸೂಚಿಸಬೇಕು. ಹೀಗೆ ಬಹಳ ನಿರ್ದಿಷ್ಟವಾಗಿ ಭಾರತವನ್ನು ಮುಸ್ಲಿಮರಿಂದ ಪ್ರತ್ಯೇಕಿಸಬೇಕು" *('ಹಿಂದೂ–ಮುಸ್ಲಿಮ್ ಪ್ರಾಬ್ಲಮ್ ೧೧', ದಿ ಟ್ರಿಬ್ಯೂನ್ ೧೪ ಡಿಸೆಂಬರ್ ೧೯೨೪ ಪು.೮)*

ಲಜಪತ್ ರಾಯ್ ಅವರು ಪಂಜಾಬ್‌ನ ವಿಭಜನೆಯನ್ನು ಸಹ ಹೀಗೆ ವಿವರಿಸಿದ್ದರು : "ಇಲ್ಲಿನ ಸಮಸ್ಯೆಗೆ ಪರಿಹಾರವೇನೆಂದರೆ, ಹಿಂದೂಗಳು ಹಾಗೂ ಸಿಖ್ಖರ ಭಾವನೆಗಳಿಗೆ ಧಕ್ಕೆ ಉಂಟು ಮಾಡದಂತೆ ಮುಸ್ಲಿಮ್ ಬಾಹುಳ್ಯದ ಪ್ರದೇಶವನ್ನು ಹೊಂದಬೇಕು. ನನ್ನ ಸಲಹೆಯೇನೆಂದರೆ, ಪಂಜಾಬನ್ನು ಎರಡು ಪ್ರಾಂತ್ಯಗಳಾಗಿ ವಿಭಜಿಸಬೇಕು. ಮುಸ್ಲಿಮ್ ಬಾಹುಳ್ಯವಿರುವ ಪಶ್ಚಿಮ ಪಂಜಾಬಿನಲ್ಲಿ ಮುಸ್ಲಿಮ್ ಆಡಳಿತವಿರುವ ಪ್ರಾಂತ್ಯವೊಂದು ಸೃಷ್ಟಿಯಾದರೆ, ಹಿಂದೂ–ಸಿಖ್ ಬಾಹುಳ್ಯವಿರುವ ಪೂರ್ವ ಪಂಜಾಬಿನಲ್ಲಿ ಮುಸ್ಲಿಮೇತರ ಆಡಳಿತವಿರುವ ಪ್ರಾಂತ್ಯ ರಚನೆಯಾಗಬೇಕು"*(ನೂರಾನಿ " ಪರಿವಾರ್ ಅಂಡ್ ಪಾರ್ಟಿಶನ್' ಲೇಖನದಲ್ಲಿ)*

ದ್ವಿ ರಾಷ್ಟ್ರ ಸಿದ್ಧಾಂತವನ್ನು ಎತ್ತಿ ಹಿಡಿದ ಮುಸ್ಲಿಮ್ ನಾಯಕರು ಲಜಪತ್ ರಾಯ್ ಮೊದಲಾದ ಹಿಂದೂ ನಾಯಕರು ಪ್ರತಿಪಾದಿಸಿದ ವಿಚಾರ ಧಾರೆಗಳ ನಿಕಟ ಪರಿಚಯ ಹೊಂದಿದ್ದರು. ದುರದೃಷ್ಟದ ಸಂಗತಿಯೇನೆಂದರೆ, ಇದನ್ನು ಅವರು ರಾಷ್ಟ್ರವಿರೋಧಿ, ಮುಸ್ಲಿಮ್ ವಿರೋಧಿ ಸಿದ್ಧಾಂತವೆಂದು ತಿರಸ್ಕರಿಸದೆ ಎಲ್ಲವನ್ನೂ ಕಾಪಿ ಮಾಡಿ ದುರಂತಗಳ ಸರಮಾಲೆಯನ್ನು ಆರಂಭಿಸಿದರು.

**(ಲೇಖಕ ಪ್ರೊ. ಶಂಸುಲ್ ಇಸ್ಲಾಂ ದೆಹಲಿ ವಿಶ್ವವಿದ್ಯಾಲಯದಲ್ಲಿ ರಾಜಕೀಯಶಾಸ್ತ್ರದ ಪ್ರಾಧ್ಯಾಪಕರು, ಹಿರಿಯ ರಾಜಕೀಯ ವಿಶ್ಲೇಷಕರು ಮತ್ತು ರಂಗಕರ್ಮಿ)**



(ಲೇಖನ ಕೃಪೆ: **ಜನತಾ,** ಮೇ ೨೬, ೨೦೧೮
ಕನ್ನಡಕ್ಕೆ : **ಡಾ. ಎಸ್. ಸಿರಾಜ್ ಅಹಮದ್**)

ಪ್ರಚಲಿತ–೧

# ರೈತರ ಸಂಕಷ್ಟ ಮತ್ತು ಸಾಲಮನ್ನಾ ಕೂಗು : ಒಂದು ವಿವೇಚನೆ



ಒಂದಾದಮೇಲೊಂದರಂತೆ ನಡೆಯುತ್ತಿರುವ ರೈತರ ಆತ್ಮಹತ್ತೆಗಳನ್ನು ನೋಡಿದರೆ ರೈತರು ಸಂಕಷ್ಟದಲಿದ್ದಾರೆ ಎಂಬುದು ಸ್ಪಷ್ಟ. ಆದರೆ ಇದಕ್ಕಿಂತ ಹೆಚ್ಚು ನಿಖರವಾದ ಸತ್ಯವೆಂದರೆ ನಮ್ಮ ಗ್ರಾಮೀಣ ಆರ್ಥಿಕತೆ ಸಂಕಷ್ಟದಲ್ಲಿದೆ ಎಂಬುದು. ಇದಕ್ಕೆ ಮತ್ತೆ ಕಾರಣ ನಮ್ಮ ಇತ್ತೀಚಿನ ಜಾಗತೀಕೃತ ಆರ್ಥಿಕತೆಯಲ್ಲಿ ಗ್ರಾಮೀಣ ಆರ್ಥಿಕತೆಗೆ ಗೌರವ ಸ್ಥಾನ ಇಲ್ಲದಿರುವುದು. ಆರ್ಥಿಕತೆ ಹೆಚ್ಚೆಚ್ಚು ನಗರ ಕೇಂದ್ರಿತವಾಗುತ್ತಿರುವುದು. ಇತ್ತೀಚೆಗೆ ಸರ್ಕಾರದ ಯೋಜನೆಯಂತೆಯೇ ಕೃಷಿ ಅವಲಂಬಿತ ಕುಟುಂಬಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿ ನಮ್ಮ ಹಳ್ಳಿಗಳು 'ಹಳ್ಳಿತನ'ವನ್ನೇ ಕಳೆದುಕೊಂಡು ನಮ್ಮ ಕೆಟ್ಟ ನಗರಗಳ ಕೆಟ್ಟ ಅಣಕಗಳಂತೆ ಕಾಣತೊಡಗಿರುವುದಕ್ಕೆ ಇದೇ ಕಾರಣ. ಹಳ್ಳಿಗರ, ಕೃಷಿ ಆರ್ಥಿಕತೆಯ ಭಾಗೀದಾರರಿಗೆ ಅರಿವೇ ಇಲ್ಲದಂತೆ ಆದ ದೇಶದ 'ಅಭಿವೃದ್ಧಿ' ಪಥದ ದಿಕ್ಕಿನಲ್ಲಾದ ಕ್ಷಿಪ್ರ ಬದಲಾವಣೆಯ ವೇಗಕ್ಕೆ ಹೊಂದಿಕೊಳ್ಳಲಾಗದ ಗ್ರಾಮೀಣ ಬದುಕು ಮೂರಾ ಬಟ್ಟೆಯಾದುದದರ ಪರಿಣಾಮವೇ ರೈತರ ಆತ್ಮಹತ್ಯೆ ಎನ್ನಬಹುದು. ಆದರೆ ಸಾರಾಸಗಟಾದ ಸಾಲಮನ್ನಾ ಇದಕ್ಕೆ ಪರಿಹಾರವೇ? ನಗರ ಕೇಂದ್ರಿತ ಆರ್ಥಿಕತೆಗೆ ಬದ್ಧವಾಗಿರುವ ಸರ್ಕಾರಗಳು ಇತ್ತೀಚಿನ ವರ್ಷಗಳಲ್ಲಿ ರೈತರು ಸಾಲಭಾರದ ಕೂಗೆಬ್ಬಿಸಿದಾಗಲೆಲ್ಲ ಒಂದಲ್ಲ ಒಂದು ಪ್ರಮಾಣದಲ್ಲಿ ಸಾಲಮನ್ನಾ ಪ್ರಕಟಿಸುತ್ತಲೇ ಇವೆ. ಏಕೆಂದರೆ ಈ ಬಿಕ್ಕಟ್ಟನ್ನು ಪರಿಹರಿಸುವ ಬೇರೆ ದಾರಿ ಸದ್ಯಕ್ಕೆ ಅದಕ್ಕಿಲ್ಲದಾಗಿದೆ. ಆದರೆ ಈ ಸಾಲ ಮನ್ನಾ ಪರಿಹಾರ ಪ್ರಕ್ರಿಯೆಯ ಒಳಹೊಕ್ಕು ನೋಡಿದರೆ ಗೊತ್ತಾಗುವ ಸತ್ಯವೆಂದರೆ ಇದರ ಹೆಚ್ಚಿನ ಲಾಭ ಪಡೆಯುವವರು ನಗರ ಕೇಂದ್ರಿತ ಆರ್ಥಿಕತೆಯ ಲಾಭ ಪಡೆದ 'ರೈತ'ರೇ ಆಗಿರುತ್ತಾರೆ!

ಇಂದು 'ರೈತ' ಅನ್ನುವ ಶಬ್ದದ ಅರ್ಥವೇ ಬದಲಾಗಿದೆ. ನಾವಿನ್ನೂ ರೈತ ಅಂದರೆ ಚಳಿ ಮಳೆ ಬಿಸಿಲೆನ್ನದೆ ತನ್ನ ಭೂಮಿಯಲ್ಲಿ ಉಳುತ್ತಿರುವ ಬಡ ಜೀವಿ ಎಂದೇ ಅರ್ಥೈಸಿಕೊಂಡು ಭಾವನಾತ್ಮಕವಾಗಿ ಮಾತನಾಡುತ್ತೇವೆ. ತಮ್ಮದೇ ವಾಣಿಜ್ಯೋದ್ದೇಶಗಳಿಗಾಗಿ ರೋಚಕತೆಯ ದಾಸಾನುದಾಸರಾಗಿರುವ'ನಮ್ಮ ಮಾಧ್ಯಮಗಳೂ ಅವನನ್ನು ಅನ್ನದಾತ ಎಂದು ಕರೆದು ಮಧ್ಯಮ ವರ್ಗದ ಅಪರಾಧಿ ಭಾವನೆಯನ್ನು ಪುಷ್ಠೀಕರಿಸುತ್ತಿವೆ, ಆದರೆ ಇಂದು ರೈತ ಸಮುದಾಯವೆಂಬುದು ಒಂದು ಸಮ್ಮಿಶ್ರ ಸಮುದಾಯವಾಗಿದ್ದು, ಹೊಸ ಮಾರುಕಟ್ಟೆ ಆರ್ಥಿಕತೆಯಿಂದ ಹೆಚ್ಚುವರಿ ಆದಾಯ ಪಡೆದುಕೊಂಡ ವರ್ಗವು ಪತ್ನಿ ಅಥವಾ ಆಪ್ತ ನೆಂಟರಿಷ್ಟರ ಹೆಸರುಗಳಲ್ಲಿ ಭೂಮಿಯ ಮೇಲೆ ಹಣ ಹೂಡಿ ರೈತರೆನಿಸಿಕೊಂಡಿದ್ದಾರೆ. ಇವರಲ್ಲಿ ಬಹುಪಾಲು ಬೆಳೆಯುವುದು ಬೆಲೆ ಸ್ಥಿರತೆಯುಳ್ಳ. ವಾಣಿಜ್ಯ ಬೆಳೆಗಳನ್ನು. ಇವರ ಬೆಳೆ ಸಾಲ ಮಾಡಿದ್ದಾರೆ. ಆದರೆ ಕೃಷಿಯೇತರ ವೈವಿಧ್ಯಮಯ 'ಕಲ್ಯಾಣ' ಕಾರ್ಯಕ್ರಮಗಳಿಗೆ! ಇವರಿಗೂ ಸಾಲ ಮನ್ನಾ ಮಾಡಬೇಕೆ? ಸಾಲಮನ್ನಾ ಗಲಾಟೆಯಲ್ಲಿ ಮಾಡದಿರಲು ಹೇಗೆ ಸಾಧ್ಯ?

ನಮ್ಮ ರೈತಶಂಘವೋ ಅದು ದಾರಿ ತಪ್ಪಿ ಬಹಳ ದಿನಗಳೇ ಆಗಿವೆ. ಜಾಗತೀಕರಣ, ಮುಕ್ತ ಮಾರುಕಟ್ಟೆ ಆರ್ಥಿಕತೆಗಳ ವಿರುದ್ಧ ಮಾತಾಡುತ್ತಾ ಕುತೂಹಲ ಹುಟ್ಟಿಸಿ ಜನರ ಗಂಭೀರ ಗಮನ ಸೆಳೆದಿದ್ದ ಈ ಸಂಘಟನೆ ಕ್ರಮೇಣ ಪ್ರಬುದ್ಧ ನಾಯಕತ್ವವಿಲ್ಲದೆ ಒಡೆದು ಅನಾಥವಾಗಿ 'ವೈಜ್ಞಾನಿಕ ಬೆಲೆ, ಸಾಲಮನ್ನಾ ಇತ್ಯಾದಿ ತತ್ಕಾಲೀನ ಜನಪ್ರಿಯ ಬೇಡಿಕೆಗಳಿಗೆ ಜೋತುಬಿದ್ದು ಸರ್ಕಾರ ಕೃಷಿ ಕ್ಷೇತ್ರದ ಬಗ್ಗೆ ಮೂಲಭೂತ ಚಿಂತನೆ ಮಾಡದಂತೆ ಪ್ರೋತ್ಸಾಹಿಸುತ್ತಿದೆ ಎಂದೇ ಹೇಳಬೇಕು. ಇಂತಹ ರಾಜಕೀಯ ವಾತಾವರಣವೇ ವಿವಿಧ ರಾಜಕೀಯ ಪಕ್ಷಗಳು, ಅದೂ ಜೆಡಿಎಸ್‌ನಂತಹ ದುರ್ಬಲ ಪಕ್ಷ ಚುನಾವಣಾ ಪೂರ್ವದಲ್ಲಿ ಮತದಾರರನ್ನು ಸೆಳೆಯಲು ನಿರ್ಯೋಚನೆಯಿಂದ ಸಂಪೂರ್ಣ ಸಾಲ ಮನ್ನಾದ ವಾಗ್ದಾನ ಮಾಡಿದ್ದು. ಈಗ 'ಪುಣ್ಯಾತ್ಮ'ರೊಬ್ಬರ ಕೃಪಾ ಕಟಾಕ್ಷದಿಂದಾಗಿ ಹುಡುಕಿಕೊಂಡು ಬಂದಿರುವ ಅಧಿಕಾರದ ಜವಬ್ದಾರಿಯ ಸಂದರ್ಭದಲ್ಲಿ ಅದನ್ನು ಈಡೇರಿಸಲಾಗದ ಸಂಕಷ್ಟಕ್ಕೆ ಸಿಲುಕಿಕೊಂಡಿರುವುದು. ಇದು ಮುಖ್ಯಮಂತ್ರಿಗಳ ವೈಯಕ್ತಿಕ ಸಂಕಷ್ಟವಾಗಿರದೆ ಇಡೀ ರಾಜ್ಯದ ದೀರ್ಘಕಾಲೀನ ಆಡಳಿತಕ್ಕೆ ಸಂಬಂಧಪಟ್ಟ ಸಂಕಷ್ಟವಾಗಿರುವುದರಿಂದ ಈ ಬಗ್ಗೆ ವ್ಯಾಪಕ ಚರ್ಚೆ ನಡೆದಿದ್ದು, ಅದರ ಮುಂದುವರೆದ ಭಾಗವಾಗಿ 'ಹೊಸ ಮನುಷ್ಯ' 'ಸಾಲ ಮನ್ನಾ'ದ ಕೂಗಿಗೆ ಕಾರಣವಾಗಿರುವ ಸಂಕಷ್ಟ ಪರಿಸ್ಥಿತಿಯನ್ನು ಸದ್ಯದ ಮಟ್ಟಿಗಾದರೂ ನಿವಾರಿಸಬಲ್ಲ ಯೋಜನೆಯನ್ನು ಸೂಚಿಸುವ ಈ ಪುಟ್ಟ ಬರಹವನ್ನು ಪ್ರಕಟಿಸುತ್ತಿದೆ. ಇದು 'ಸಾಲಮನ್ನಾ;ಕ್ಕೆ ಪರ್ಯಾಯ ಕಾರ್ಯಕ್ರಮವಲ್ಲ. ಏಕೆಂದರೆ ಇದರ ಹಿಂದಿನ ಆರ್ಥಿಕ ಚಿಂತನೆ 'ಸಾಲಮನ್ನಾ' ರೈತರ ಆಳದ ಸಂಕಷ್ಟಕ್ಕೆ ಒಂದು ಸೂಕ್ತ ಪರಿಹಾರ ಎಂದು ಭಾವಿಸುವುದಿಲ್ಲ. ಹಾಗಾಗಿ ರೈತ ಸಂಘಟನೆಗಳ ನಿರೀಕ್ಷೆಯನ್ನು ಇದು ಮುಟ್ಟಲಾರದು ಆದರೆ ಸಂಕಷ್ಟದಲ್ಲಿರುವ ಸರ್ಕಾರದ ಗಮನಕ್ಕಂತೂ ಅರ್ಹವಾಗಿದೆ. ಆದರೆ ಈ ಮಧ್ಯೆ ರಾಜ್ಯ ಸರ್ಕಾರ ವಿವಿಧ ಇಲಾಖೆಗಳ ಅನುದಾನದಲ್ಲಿ ಶೇಕಡಾ ಇಂತಿಷ್ಟೆಂದು ಕಡಿತ ಮಾಡಿ ಸಾಲಮನ್ನಾಕ್ಕೆ ಸಂಪನ್ಮೂಲ ಕ್ರೋಢೀಕರಣ ಮಾಡಲು ನಿಶ್ಚಯಿಸಿದೆ ಎಂಬ ಸುದ್ದಿ ಕೇಳಿಬಂದಿದೆ. ಇದು ನಿಜವಾಗಿದ್ದಲ್ಲಿ ಈ ಪ್ರಯತ್ನ ಜನಸಮೂಹದ ಒಂದು ಭಾಗದ ಹಾಹಾಕಾರವನ್ನು ಪರಿಹರಿಸಲು ಹೋಗಿ ಇತರೆಲ್ಲ ಭಾಗಗಳ ಹಾಹಾಕಾರವನ್ನು ಎದುರಿಸಬೇಕಾದ ಬಹುಮುಖ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ಪತ್ರಿಕೆ ಸರ್ಕಾರಕ್ಕೆ ನೀಡಬಯಸುತ್ತದೆ.–ಸಂ.

## ಸಾಲಮನ್ನಾ ಕೂಡದು! ಆದರೆ ಸದ್ಯಕ್ಕೆ ಹೀಗೆ ಮಾಡಬಹುದು–

–ಪ್ರೊ. ಎಂ.ಎಸ್. ಶ್ರೀರಾಮ್

ಈಗಾಗಲೇ ಸಾಲಮನ್ನಾ ಯಾಕೆ ಕೂಡದು ಎನ್ನುವುದರ ಬಗ್ಗೆ ನಾನು 'ಪ್ರಜಾವಾಣಿ'ಯಲ್ಲಿ ಬರೆದಿದ್ದೇನೆ. ಈ ಬರಹಗಳುಸಾಲಮನ್ನಾ ರಾಜ್ಯದ ಆರ್ಥಿಕತೆಗೆಮಾಡುವ ಧಕ್ಕೆ ಮತ್ತುಇದರಿಂದಾಗಿ ರೈತರಿಗೆ ಸಾಲ ನೀಡುವ ಸಾಂಸ್ಥಿಕ ಮೂಲಗಳಿಗೆ ಆಗುವ ತೊಂದರೆಗಳಿಗೆ ಸಂಬಂಧಿಸಿದವುಗಳಾಗಿದ್ದರೆ, ಈಗ ಸದ್ಯದ ರೈತ ಸಂಕಷ್ಟಕ್ಕೊಂದು ಪರಿಹಾರದ ಸಾಧ್ಯತೆಯ ಬಗ್ಗೆ ಬರೆಯಬಯಸುವೆ.

ಸಾಲಮನ್ನಾ ಜಾರಿಗೆ ಬಂದರೆ ಅದರ ಫಲಾನುಭವಿಗಳು ಯಾರಾಗಿರುತ್ತಾರೆ? ಸಾಂಸ್ಥಿಕ ಮೂಲಗಳಿಂದ, ಅಂದರೆ ಬ್ಯಾಂಕು ಮತ್ತು ಸಹಕಾರ ಸಂಘಗಳಿಂದ ಸಾಲ ಪಡೆಯಲು ಸಾಧ್ಯವಾದ, ಸಾಧ್ಯವಾಗಿದ್ದೂ ಯಾವುದೇ ಕಾರಣಗಳಿಂದ ಕಟ್ಟಲು ಸಾಧ್ಯವಾಗದ ರೈತರಿಗಷ್ಟೇ ಸಾಲಮನ್ನಾ ಭಾಗ್ಯವು ಪ್ರಾಪ್ತವಾಗುತ್ತದೆ. ೨೦೧೭ರ ಮಾರ್ಚ್ ಅಂತ್ಯಕ್ಕೆ ಕರ್ನಾಟಕದಿಂದ ಬ್ಯಾಂಕಿಂಗ್ ವ್ಯವಸ್ಥೆಗೆ ರೈತರ ಕೃಷಿ ಸಾಲದ ಬಾಕಿ ಸುಮಾರು ೮೬ ಸಾವಿರ ಕೋಟಿ ರೂ. ಗಳಷ್ಟಿತ್ತು. ಅದರಲ್ಲಿ ಎರಡು ಲಕ್ಷ ರೂ.ಗಳಿಗೂ ಕಡಿಮೆಯ ಮೊಬಲಗಿನ ಸಾಲಗಳ ಒಟ್ಟು ಮೊತ್ತ ಸುಮಾರು ೩೦ ಸಾವಿರ ಕೋಟಿಗಳಷ್ಟಿತ್ತು. ಮಿಕ್ಕದ್ದೆಲ್ಲ ದೊಡ್ಡ ಮೊತ್ತದ ಸಾಲಗಳು. ಅಂದರೆ ಒಟ್ಟು ಸಾಲಗಳ ಮೊತ್ತದಲ್ಲಿ ಶೇಕಡಾ ಸುಮಾರು ೩೫ರಷ್ಟು ೨ ಲಕ್ಷ ರೂ.ಗಳಿಗಿಂತ ಕಡಿಮೆ ಮೊತ್ತದಲ್ಲಿ ಪಡೆದ ಸಾಲಗಳ ಖಾತೆಗಳಿವೆ ಎಂದಾಯಿತು. ಇದರರ್ಥ, ಸಂಪೂರ್ಣ ಸಾಲಮನ್ನಾದಿಂದ ಹೆಚ್ಚಿನ ಲಾಭವಾಗುವುದು ದೊಡ್ಡ ರೈತರಿಗೇ. ಸಣ್ಣ ರೈತರು ಬ್ಯಾಂಕಿಂಗ್ ವ್ಯವಸ್ಥೆಯಿಂದ ಹೊರಗುಳಿದಿರುವ ಸಾಧ್ಯತೆಯೇ ಇರುವುದರಿಂದ ಅವರಿಗೆ ಇದರಿಂದ ಹೆಚ್ಚಿನ ಫಾಯಿದೆಯಿಲ್ಲ.

ಸ್ವಲ್ಪ ಯೋಚಿಸಿ ನೋಡಿ. ಇಂದಿನ ದಿನ ಬ್ಯಾಂಕಿನಿಂದ ಸಾಲ ಪಡೆಯಬಲ್ಲ ಸಾಧ್ಯತೆ ಯಾರಿಗಿರುತ್ತದೆ? ಬ್ಯಾಂಕಿನ ಪದ್ಧತಿಗಳು ಗೊತ್ತಿರುವ ಪ್ರಭಾವಶಾಲೀ ದೊಡ್ಡ ರೈತರೇ ಅಲ್ಲಿ ಹೆಚ್ಚಿನ ಸಾಲವನ್ನು ಪಡೆದಿರುತ್ತಾರೆ. ಸಣ್ಣ ರೈತರು ಏನಿದ್ದರೂ ಸಹಕಾರಿ ವ್ಯವಸ್ಥೆ ಮತ್ತು ಬಡ್ಡಿ ವ್ಯಾಪಾರಿಗಳ ಕೈಯಲ್ಲಿಯೇ ಇದ್ದು ಬಿಡುತ್ತಾರೆ. ಹೀಗಾಗಿಯೇ, ಇದು ಧ್ವನಿ ಎತ್ತಬಲ್ಲ ಪ್ರಭಾವಶಾಲಿ ದೊಡ್ಡ ರೈತರ ಪರವಾದ ಒಂದು ಕರ್ಯಕ್ರಮ ಎನ್ನಬಹುದು. ಇದರಿಂದ ನಿಜಕ್ಕೂ ಯಾರಿಗೆ ಉಪಯೋಗವಾಗಬೇಕೋ, ಅವರಿಗೆ ಆಗದಿರಬಹುದು.

ಹೀಗಾಗಿಯೇ ನಾನು ಹಿಂದೆ ಪ್ರತಿಪಾದಿಸಿದಂತೆ ಸಾಲಮನ್ನಾಕ್ಕೆ ಬದಲು ನೇರ ನಗದು ಪಾವತಿಯೇ ಲೇಸು ಎನ್ನುವ ಮಾತನ್ನು ಪುನರುಚ್ಚರಿಸ ಬಯಸುತ್ತೇನೆ. ಅಂದರೆ, ಸರಕಾರದ ಆರ್ಥಿಕತೆಗೆ ದೊಡ್ಡ ಧಕ್ಕೆಯಾಗದಂತಹ ಮತ್ತು ರೈತರಿಗೆ ಉಪಯೋಗಕಾರಿಯಾದ ಕಾರ್ಯಕ್ರಮ ಎಂದರೆ ನೇರನಗದು ಪಾವತಿ.

೨೦೧೧ರ ಜನಗಣತಿಯ ಆಧಾರದ ಮೇಲೆ ಕರ್ನಾಟಕದ ಪ್ರತಿ ರೈತ ಕುಟುಂಬಕ್ಕೂ ಹತ್ತು ಸಾವಿರದಿಂದ ಹನ್ನೆರಡು ಸಾವಿರ ರೂ.ಗಳವರೆಗೆ ಪರಿಹಾರವಾಗಿ ನೇರ ನಗದು ಪಾವತಿ ಮಾಡಿದಲ್ಲಿ ಸರಕಾರಕ್ಕೆ ಆಗುವ ಖರ್ಚು ಸುಮಾರು ೭ರಿಂದ ೮ ಸಾವಿರ ಕೋಟಿ ರೂ.ಗಳು. ಇಷ್ಟು ಸಂಪನ್ಮೂಲವನ್ನು ಕರ್ನಾಟಕ ಸರಕಾರ ಮಾರುಕಟ್ಟೆಯಿಂದ ಸಾಲವಾಗಿ ಪಡೆಯಬಹುದು. ಆ ಮೊತ್ತ ಹಣಕಾಸು ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣೆಯ ಕಾನೂನಿನನ್ವಯ

(೧೯ನೇ ಪುಟಕ್ಕೆ

ಪರಚಅತ-೨

# ಪ್ರಣಬ್ ಮುಖರ್ಜಿಯವರ ನಾಗಪುರ ಭೇಟಿ : ಸಾಧಕ–ಬಾಧಕಗಳು

**–ಡಾ. ನಿತ್ಯಾನಂದ ಬಿ. ಶೆಟ್ಟಿ**



**ಮಾಜಿ ರಾಷ್ಟ್ರಪತಿಗಳೂ ಮತ್ತು ಕಾಂಗ್ರೆಸ್‌ನ ಮಾಜಿ ಹಿರಿಯ ನಾಯಕರೂ ಆದ ಪ್ರಣಬ್‌ಕುಮಾರ್ ಮುಖರ್ಜಿ ಕಳೆದ ಜೂನ್ ಏಳರಂದು ಹಲವು ವಲಯಗಳ ವಿರೋಧ ಮತ್ತು ಟೀಕೆಗಳ ನಡುವೆಯೇ ನಾಗಪುರದಲಿ ನಡೆದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂಸೇವಕರ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹೊಸಿ ಬಂದಿದ್ದಾರೆ. ಭಾರತದ ರಾಷ್ಟ್ರೀಯತೆ ಕುರಿತಂತೆ ಬಿಸಿಬಿಸಿ ಚರ್ಚೆಗಳು ನಡೆಯುತ್ತಿರುವ ಮತ್ತು ಈ ಚರ್ಚೆಗಳಲ್ಲಿ ಒಂದು ಕಡೆಯವರು ಆರೆಸ್ಸೆಸ್ಸನ್ನು ಖಳನಾಯಕನಂತೆ ಬಿಂಬಿಸುತ್ತಿರುವ ಈ ಹೊತ್ತಿನಲ್ಲಿ ಈ ಭೇಟಿ ಒಂದು ವಿವಾದವನ್ನು ಹುಟ್ಟು ಹಾಕಿರುವುದು ಸಹಜವೇ. ಆದರೆ ಪ್ರಣಬ್ ಅವರು ಅಲ್ಲಿಗೆ ಹೋಗಿ ಏನು ಮಾತಾಡಿದರು ಎಂಬುದು ಗೊತ್ತಾದ ಮೇಲೆ ಟೀಕಾಕಾರರಲ್ಲಿ ಬಹಳ ಜನ ತೆಪ್ಪಗಾಗಿದ್ದಾರೆ. ಆದರೆ ಪ್ರಣಬ್ ಅವರ ಭೇಟಿ ಇಂದು ರಾಷ್ಟ್ರೀಯತೆಯ ಬಗ್ಗೆ ನಡೆದಿರುವ ಚರ್ಚೆಗಳಿಗೆ ಒಂದು ಸಮತೋಲನ ನೀಡುವ, ಎರಡೂ ಪಕ್ಷಗಳನ್ನು ಮೆದುಗೊಳಿಸಿ ಸಂವಾದ ಸಂಸ್ಕೃತಿಯೇ ಮರೆಯಾಗಿ ದ್ವೇಷವೇ ಮೆರೆಯುತ್ತಾ ಎರಡು ಅತಿಗಳಿಗೆ ಹೋದಂತೆ ಕಾಣುತ್ತಿರುವ ಇಂದಿನ ರಾಜಕೀಯ ಸಂಕಥನವನ್ನು ಒಂದು ಒಮ್ಮತದತ್ತ ಒಯ್ಯುವ ಪ್ರಯತ್ನವಾಗಿಯೂ ನಮ್ಮ ಗಮನ ಸೆಳೆಯಬೇಕು. ಸ್ವಾತಂತ್ರ್ಯ ಹೋರಾಟದಲ್ಲಿ ಮೂಡಿದ ರಾಷ್ಟ್ರೀಯತೆಯ ಕಲ್ಪನೆಯ ಬಿರುಕುಗಳು(fault lines) ಈಗ ಆ ಹುರುಪು ಕಡಿಮೆಯಾಗುತ್ತಿದ್ದಂತೆ ಎದ್ದು ಕಾಣತೊಡಗಿವೆ. ಹಾಗಾಗಿಯೇ ಆ ರಾಷ್ಟ್ರೀಯತೆಯ ಕಲ್ಪನೆಯನ್ನು ಒಪ್ಪದ ಪರ್ಯಾಯ ರಾಷ್ಟ್ರೀಯತೆಯ ಕಲ್ಪನೆಗೆ ಇಂದು ಗಣನೀಯ ಮಾನ್ಯತೆ ದೊರಕತೊಡಗಿದೆ. ಇದು ಯಾವುದೇ ಪಕ್ಷದ ಕಡೆಯ ವಾದ ಹಠವಾದಿಯಾದರೂ ಅದು, ರಾಷ್ಟ್ರದ, ಜನತೆಯ ಹಿತಕ್ಕೆ ಮಾರಕವಾಗಬಹುದಾದ ಸಂದರ್ಭ. ಬಹುಶಃ ಈ ಅರಿನಿಂದಲೇ ಆರೆಸ್ಸೆಸ್‌ನ ಗೆಳೆಯರೇನೂ ಅಲ್ಲದ ಪ್ರಣಬ್ ಆರೆಸ್ಸೆಸ್‌ನ ಆಹ್ವಾನವನ್ನು ರಾಷ್ಟ್ರೀಯತೆಯ ಬಗ್ಗೆ ಒಂದು ರಾಜಕೀಯ ಒಮ್ಮತವನ್ನು ಮೂಡಿಸುವ ದಾರಿಯನ್ನು ತೆರೆಯುವ ಒಂದು ಸದವಕಾಶವೆಂದು ಬಗೆದೇ ನಾಗಪುರಕ್ಕೆ ಹೋಗಿರಬಹುದೆಂದು ಯಾರಾದರೂ ಭಾವಿಸದರೆ ಅದು ತಪ್ಪೇನಲ್ಲ. ಹಾಗಾಗಿ ಇದು ಈ ದಾರಿಯ ಮುಂದಿನ ಹೆಜ್ಜೆಗಳನ್ನು ಕುತೂಹಲದಿಂದ ಕಾದು ನೋಡಿಯೇ ನಿರ್ಣಾಯಕ ಮಾತುಗಳನ್ನಾಡಲು ಸಾಧ್ಯ. ಈ ಲೇಖನ ಈ ಸೂಕ್ಷ್ಮ ಸಂದರ್ಭವನ್ನು ಚರ್ಚಿಸುತ್ತದೆ–ಸಂ.**

**ಅ**ದು ಒಂದು ರೀತಿಯಲ್ಲಿ ಆರ್‌ಎಸ್‌ಎಸ್ ಎಂಬ ವಿಶ್ವವಿದ್ಯಾನಿಲಯದ ಪದವೀಧರ ವಿದ್ಯಾರ್ಥಿಗಳ ಘಟಿಕೋತ್ಸವ ಸಮಾರಂಭ. ಆ ಘಟಿಕೋತ್ಸವ ಭಾಷಣ ಮಾಡಿದ್ದು ಹಿಂದಿನ ರಾಷ್ಟ್ರಪತಿ ಕಲಾಂ ಆಗಿರುತ್ತಿದ್ದರೆ ಅಥವಾ ಈಗಿನ ರಾಷ್ಟ್ರಪತಿ ಕೋವಿಂದ್ ಆಗಿರುತ್ತಿದ್ದರೆ ಈ ಚರ್ಚೆಗೆ ಇಷ್ಟು ಕಾವು ಇರುತ್ತಿರಲಿಲ್ಲ. ಆದರೆ ಈ ಭಾಷಣ ಮಾಡಿದವರು ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾಗಿದ್ದವರು. ಪ್ರಧಾನಿ ಪದವಿಯನ್ನು ಪಡೆಯುವಲ್ಲಿ ಮತ್ತೆ ಮತ್ತೆ ಎಡವಿ ಬಿದ್ದ ಮತ್ತು ತಾವು ಅರ್ಥಮಂತ್ರಿಯಾಗಿದ್ದಾಗ ತಮ್ಮ ಅಡಿಯಲ್ಲಿ ಅಧಿಕಾರಿಯಾಗಿದ್ದ ಮನಮೋಹನ ಸಿಂಗ್‌ರ ಪ್ರಧಾನಮಂತ್ರಿತ್ವದ ಅಡಿಯಲ್ಲಿ ಮಂತ್ರಿಯಾಗಿ ಕೆಲಸ ಮಾಡುವ ಮುಜುಗರಕ್ಕೊಳಗಾಗಬೇಕಾಯಿತೋ ಆ ಪ್ರಣವ್ ಮುಖರ್ಜಿಯವರು. ಯಾವ ಕಾಂಗ್ರೆಸ್ ತನಗೆ ಪ್ರಧಾನಿ ಹುದ್ದೆಯನ್ನು ನಿರಾಕರಿಸಿತೋ ಅದೇ ಕಾಂಗ್ರೆಸ್ ಬಹುಶಃ ಆ ಕಾರಣದಿಂದಲೇ ತನ್ನನ್ನು ರಾಷ್ಟ್ರಪತಿಯಾಗಿಸಿದ ಬೆರಗನ್ನು ಕಂಡವರು.

ಇದೇನೇ ಇರಲಿ. ರಾಜಕೀಯವಾಗಿ ಮತ್ತು ಬೌದ್ಧಿಕವಾಗಿ ಗೌರವಾನ್ವಿತ ಹಿನ್ನೆಲೆಯ ಪ್ರಣವ್ ಅದಕ್ಕನುಗುಣವಾಗಿಯೇ ಸಂಘದ ಆಹ್ವಾನವನ್ನು ಮನ್ನಿಸಿ ಹಲವರ ವಿರೋಧಗಳ ನಡುವೆಯೂ ತಾವು ಹೇಳಬೇಕಾಗಿರುವುದೆಲ್ಲವನ್ನೂ ಅಲ್ಲಿ ಹೇಳಿ ಬಂದಿದ್ದಾರೆ. ಅವರು ಹೇಳಿರುವುದರಲ್ಲಿ ಹೊಸತೇನೂ ಇಲ್ಲ ಅಥವಾ ಸ್ವಾತಂತ್ರ್ಯಪೂರ್ವದ ಮತ್ತು ನೆಹರೂ ಕಾಲದ ಕಾಂಗ್ರೆಸ್‌ನ ಚಿಂತನೆಯನ್ನೇ ಪ್ರಣವ್ ಅಲ್ಲಿ ಹೇಳಿದ್ದಾರೆ. ಆ ಮಾತುಗಳನ್ನು ಹೀಗೆ ಸಾರಾಂಶೀಕರಿಸಬಹುದು:

–ಭಾರತದ ರಾಷ್ಟ್ರೀಯತೆ ವಿಶ್ವಾತ್ಮಕತೆಯಿಂದ ಹೊರಹೊಮ್ಮಿದೆ. 'ವಸುಧ ಏವ ಕುಟುಂಬಕಂ' ಅನ್ನುವುದು ಭಾರತೀಯರಾದ ನಮ್ಮ ನೀತಿ. ಅದರಿಂದಾಗಿ ನಮ್ಮ ಗೌರವ ಹೆಚ್ಚಿದೆ. –ನಮ್ಮ ರಾಷ್ಟ್ರೀಯ ಅಸ್ಮಿತೆ ವಿಶಿಷ್ಟವಾಗಿದೆ. ಯಾಕೆಂದರೆ ಆ ಅಸ್ಮಿತೆ ಭಿನ್ನ–ಭಿನ್ನ ಸಮುದಾಯಗಳ ಸಮ್ಮಿಲನದಿಂದ ಮತ್ತು ಸಹಬಾಳ್ವೆಗಳಿಂದ ಮೂಡಿಬಂದಿರುವಂತಹುದು.

ಭಾರತೀಯ ರಾಷ್ಟ್ರೀಯತೆಯೆಂದರೆ ನಮ್ಮ ಸಂವಿಧಾನದ ಕುರಿತು ಅಚಲ ನಿಷ್ಠೆಯಲ್ಲದೆ ಬೇರೇನೂ ಅಲ್ಲ.

–ಸಹಿಷ್ಣುತೆ ನಮ್ಮ ಶಕ್ತಿ. ದೌರ್ಬಲ್ಯವಲ್ಲ. ಬಹುತ್ವ ನಮ್ಮ ಸಂಭ್ರಮ. ಭಯಕಾರಕವಲ್ಲ. ನಮ್ಮ ರಾಷ್ಟೀಯತೆಯನ್ನು ಆಚಾರ ತತ್ತ್ವ, ಆಹಾರ ತತ್ತ್ವ ಮತ್ತು ಪ್ರಾದೇಶಿಕ ತತ್ತ್ವಗಳಿಂದ ವ್ಯಾಖ್ಯಾನಿಸಲು ಹೊರಟಲ್ಲಿ ಅವು ನಮ್ಮ ರಾಷ್ಟ್ರದ ಚಹರೆಯನ್ನು ಧ್ವಂಸಗೊಳಿಸಲಿವೆ.

–ಗಾಂಧಿ ಮತ್ತು ನೆಹರೂ ನಮ್ಮ ದೇಶದ ರಾಷ್ಟ್ರೀಯತೆಯ ಸ್ವರೂಪವನ್ನು ಸರಿಯಾಗಿ ವಿವರಿಸಿದ್ದಾರೆ. ನಮ್ಮ ರಾಷ್ಟ್ರೀಯತೆ ಯಾವುದೇ ಸಮುದಾಯ, ಭಾಷೆ, ಧರ್ಮದ ಜನರಿಗೆ ವಿರುದ್ಧವಾಗಿಲ್ಲ. ಅದು ೧.೩ ಶತಕೋಟಿ ಜನರ ವಿಶ್ವಾತ್ಮಕತೆಯ ಪ್ರತೀಕವಾಗಿದೆ. ೧೨೨ ಭಾಷೆಗಳ ಮತ್ತು ೧೬೦೦ ಭಾಷಾ ವೈವಿಧ್ಯತೆಗಳ, ೭ ಪ್ರಮುಖ ಧರ್ಮಗಳ ಮತ್ತು ೦೩ ಪ್ರಮುಖ ಜನಾಂಗಗಳ ಮಹಾ ಒಕ್ಕೂಟವಾಗಿದೆ.

–ಪ್ರಜಾಪ್ರಭುತ್ವದಲ್ಲಿ ಸರಿಯಾದ ಮಾಹಿತಿ ಮತ್ತು ಚಿಂತನಾಪೂರ್ಣ ಸಂವಾದ ಅಗತ್ಯ. ನಮ್ಮ ಹಿತಾಸಕ್ತಿಗಳು ವಿರುದ್ಧವಾಗಿದ್ದರೂ ಸಂವಾದ ನಡೆಸುವುದರಿಂದ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಬಹುದು.

–ಭಾರತದಲ್ಲಿ ಧಾರ್ಮಿಕ ಮತ್ತು ಇತರೆ ಕಾರಣಗಳಿಗಾಗಿ ನಡೆಯುತ್ತಿರುವ ಹಿಂಸೆ ಭಯಾನಕವೂ ದುಃಖ ತರುವಂತಹುದೂ ಆಗಿದೆ. ಆದರೆ ನಮ್ಮ ದೇಶದ ಜನರು ಶಾಂತಿಯನ್ನು ಬಯಸುತ್ತಾರೆ.

ನಮ್ಮ ದೇಶ ಅಂದರೆ ನಮ್ಮ ಜನರು. ನಮ್ಮ ದೇಶದಲ್ಲಿ ನಡೆಯುವ ಎಲ್ಲ ವಿದ್ಯಮಾನಗಳು ಜನರನ್ನೇ ಗಮನದಲ್ಲಿರಿಸಿಕೊಂಡು ನಡೆಯುತ್ತದೆ. ಹಾಗಾಗಿ ಜನರನ್ನು ಒಡೆಯುವ ಕೆಲಸವನ್ನು ಯಾರೂ ಮಾಡಬಾರದು.

ಪ್ರಣವ್‌ರ ಈ ಭೇಟಿಯನ್ನು ಬಹಳ ಜನ ರಾಜಕೀಯ ವಿಶ್ಲೇಷಕರು ಅನೇಕ ರೀತಿಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಒಬ್ಬರು ಈ ಭೇಟಿಯಿಂದ ಕುಸಿಯುತ್ತಿರುವ ಬಿಜೆಪಿಯ ಟಿಆರ್‌ಪಿ ಹೆಚ್ಚಾಗಬಹುದು ಎಂದು ಅಭಿಪ್ರಾಯಪಟ್ಟರೆ, ಇನ್ನೊಬ್ಬರು ಪ್ರಣವ್‌ರನ್ನು ತನ್ನ ಚಾವಡಿಗೆ ಆಹ್ವಾನಿಸಿರುವ ಸಂಘಪರಿವಾರದ ಈ ಕ್ರಮ ಕಾಂಗ್ರೆಸ್ ಮುಕ್ತ ಮಾಡುವ ಅದರ ಅಭಿಯಾನದ ಇನ್ನೊಂದು ಮಜಲು ಎಂದು ಅಭಿಪ್ರಾಯಪಟ್ಟಿದ್ದಾರೆ. ಮತ್ತೊಬ್ಬರು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ಬಾರದಿದ್ದ ಪಕ್ಷದಲ್ಲಿ ರಾಷ್ಟ್ರೀಯ ಸರಕಾರ ರಚಿಸಿ ಅದರ ಮುಖ್ಯಸ್ಥರನ್ನಾಗಿ ಪ್ರಣವ್‌ರನ್ನು ಮಾಡುವುದೇ ಸಂಘ ಪರಿವಾರದ ಉದ್ದೇಶವಾಗಿದ್ದಿರಬಹುದು ಎಂದು ತರ್ಕಿಸಿದ್ದಾರೆ. ಸ್ವತಃ ಪ್ರಣವ್ ಅವರ ಮಗಳೇ ಅಪ್ಪನಿಗೆ 'ನೀವು ಅಲ್ಲಿಗೆ ಕೊಡುವ ಭೇಟಿ ಮತ್ತು ಆಡುವ ಮಾತುಗಳಲ್ಲಿ ಮಾತು ಅಳಿಸಿಹೋಗಿ ನೀವು ಭೇಟಿ ಇತ್ತ ಚಿತ್ರ ಮಾತ್ರ ಶಾಶ್ವತವಾಗುಳಿಯಬಹುದು' ಎಂದೂ ಹೇಳಿದ್ದರು. ಇನ್ನು ಸಾಮಾಜಿಕ ಜಾಲತಾಣಗಳಲ್ಲಂತೂ ಪ್ರಣವ್ ಮುಖರ್ಜಿಯವರ ತೇಜೋವಧೆ ಮಾಡಿ ಅವರನ್ನು ಮತ್ತು ಇತ್ತೀಚೆಗಷ್ಟೇ ಕಾಂಗ್ರೆಸ್‌ನಿಂದ ಬಿಜೆಪಿಗೆ ಪಕ್ಷಾಂತರ ಮಾಡಿದ ಎಸ್ ಎಂ ಕೃಷ್ಣರನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗಲಾಗಿದೆ.

**(೧೬ನೇ ಪುಟಕ್ಕೆ**




**ಮಾ**ದರ ರೊಂಡಿಹನುಮಣ್ಣ ಸತ್ತು ಹೋದ ಸುದ್ದಿ ನಸುಕಿಗೇ ಬಂತು. ಕರಿಯಣ್ಣನ ಮಗ ಸುರೇಶ ನಾನಿನ್ನು ಹಾಸಿಗೆಯಲ್ಲಿ ಸವಿ ನಿದ್ದೆಯಲ್ಲಿರುವಾಗಲೇ ಕಿವಿಗೆ ಸುದ್ದಿಯನ್ನು ಹಾಕಿದ. ಅವನಿಗೆ ಗೊತ್ತಿತ್ತು, ಹನುಮಣ್ಣನೊಂದಿಗಿನ ನನ್ನ ಸಂಬಂಧ. ನಮ್ಮ ಹೊಲವನ್ನು ಉಳುತ್ತಿದ್ದ ಕರಿಯಣ್ಣನನ್ನು ನೋಡಲು ಕೇರಿಗೆ ಹೋದಾಗಲೆಲ್ಲ ನಾನು ಹನುಮಣ್ಣನೊಂದಿಗೆ ಅದೂ ಇದೂ ಮಾತನಾಡುತ್ತಿದ್ದೆ. ಲಾ ಪಾಯಿಂಟ್ ಹೊಡೆಯುವುದರಲ್ಲಿ ಅವನು ನಿಪುಣನಾಗಿದ್ದ. ಹೆಂಗೆಂಗೋ ರಾಜ್ಯದ ವಿದ್ಯಮಾನಗಳು ಅವನ ಕಿವಿಗೆ ತಲುಪುತ್ತಿದ್ದವು. ಇಂದಿರಮ್ಮನ ವಿಚಾರ, ಅವಳು ಸತ್ತವಿಚಾರ, 'ಅವಳಿಗೆ ಗುಂಡು ಹೊಡೆದು ತುಂಬಾ ಅನ್ಯಾಯ ಮಾಡಿದರು' ಎಂದು ಅವನು ಲೊಚಗುಟ್ಟಿದ ಪರಿ, ಇವೆಲ್ಲವನ್ನೂ ನಾನು ಕಣ್ಣು ತುಂಬಿಸಿಕೊಳ್ಳುತ್ತಿದ್ದೆ. ಲೋಕದ ವಿಚಾರಗಳ ವಿಶ್ಲೇಷಣೆಯ ನಮ್ಮ ನೆಲೆಗಳಿಗೂ ಅವರ ನೆಲೆಗಳಿಗೂ ಎಷ್ಟೊಂದು ಫರಕ್ ಇದೆಯಲ್ಲಾ ಎಂದು ಆಗಲ್ಲಾ ನನಗೆ ಅನ್ನಿಸಿದ್ದುಂಟು. ಇದೆಲ್ಲಾ ಮಾತು ನಡೆಯುವಾಗ ಈ ಸುರೇಶ ನಮ್ಮ ಜೊತೆಗೇ ಬಾಯಿ ತೆರೆದುಕೊಂಡೇ ಇರುತ್ತಿದ್ದ. ಇಷ್ಟು ಮಾತುಕಥೆ ಹಟ್ಟಿಯ ನಡುವೆ ಇದ್ದ ಚೌಡವ್ವನ ಗುಡಿಯ ಕಟ್ಟೆಯ ಮೇಲೆ ನಡೆಯುತ್ತಿತ್ತು.

ನಮ್ಮ ಮನೆಯ ಹಿಂದಿನ ಬಾಗಿಲಲ್ಲಿ ನಿಂತರೆ ಹುಣಸೇಮರಗಳ ಹಿಂಡು, ತಿಪ್ಪೆಗಳು, ಅದನ್ನು ದಾಟಿ ನೀರು ಹರಿಯುವ ಒಂದು ಸರ ಇತ್ತು. ಅದನ್ನು ಇಳಿದು ಹತ್ತಿದರೆ ಮಾದರಹಟ್ಟಿ. ಊರಿನ ಗಣ್ಯ ಮಾನ್ಯರೆನಿಸದವರು ಈ ಸರವೆಂಬ ಹಳ್ಳದಲ್ಲೇ ಬೆಳಗಿನ ಕೆಲಸಗಳನ್ನು ಮುಗಿಸುತ್ತಿದ್ದರು. ಅದರ ಬುಡಕ್ಕೆ ಕೇರಿ. ಸಣ್ಣ ಸಣ್ಣ ಗುಡಿಸಲುಗಳು. ಬಾಗಿಕೊಂಡೇ ಒಳಕ್ಕೆ ಹೋಗಬೇಕಿತ್ತು. ಕೇರಿಯ ಎಲ್ಲರಿಗೂ ಈ ಬಾಗುವ ಸಮಸ್ಯೆ ಇದ್ದರೆ ಈ ಹನುವಣ್ಣನಿಗಿರಲಿಲ್ಲ. ಅವನು ಕುಳ್ಳನೆಯ ಮನುಷ್ಯ. ಆದರೆ ಖಡಕ್. ಕೇರಿಯವರು ಅವನ ಮಾತಿಗೆ ಸೈ ಎನ್ನುತ್ತಿದ್ದರು. ಊರ ಲಿಂಗಾಯತರೂ 'ಹನುಮಣ್ಣ ತೂಕದ ಮನುಷ್ಯ' ಎಂದೇ ಅನ್ನುತ್ತಿದ್ದರು.

ಮಾದರಿಗೂ ಊರಲ್ಲಿರೋ ಬಡ ಲಿಂಗಾಯತರಿಗೂ ಜಾತಿಯೊಂದನ್ನು ಬಿಟ್ಟರೆ ಉಳಿದ ವಿಚಾರಗಳಲ್ಲಿ ಭಾರೀ ಅಂತರವೇನೂ ಇರಲಿಲ್ಲ. ಎಲ್ಲರೂ ಬಡವರೇ. ಕೂಲಿನಾಲಿ ಜೀವನ. ಅವರೂ ಇವರೂ ಒಂದೇ ಹೊಲದಲ್ಲಿ ಅಕ್ಕಪಕ್ಕದಲ್ಲೇ ನಿಂತುಕೊಂಡು ಉಳುವುದಾಗಲಿ, ಕಳೆ ಕೀಳುವುದಾಗಲಿ ಮಾಡುತ್ತಿದ್ದರು. ಮಾದರ ಗುರುಸಿದ್ದವ್ವನಿಂದ ಅಡಿಕೆ ಸುಣ್ಣವನ್ನು ಲಿಂಗಾಯತರ ಸುಮಿತ್ರವ್ವಳು, ಅವಳಿಂದ ಇವಳು ಎಲೆಯನ್ನು ಇಸಿದುಕೊಂಡು ಮೆಲ್ಲುತ್ತಿದ್ದರು. ಕೆಲವೊಮ್ಮೆ ಮೈಯಲ್ಲಿ ನರಗಿರ ಹೊಳ್ಳಿದರೆ ಇದೇ ಗುರುಸಿದ್ದವ್ವನೇ ನರಹಿಡಿದು ತಿಕ್ಕುತ್ತಿದ್ದಳು. ಇವರು ಸತ್ತ ದನಗಳ ಮಾಂಸ ತಿನ್ನುತ್ತಾರೆಂಬ ಒಂದು ತಿರಸ್ಕಾರ ಭಾವ ಬಿಟ್ಟರೆ ಉಳಿದಂತೆ ಇವರು ಪರಸ್ಪರ ಬೀಗರೇ. ಅವರು ಇವರನ್ನು 'ಚಿಗವ್ವಾ' 'ಮಾವಾ' 'ದೊಡ್ಡಪ್ಪಾ' ಅಂತಲೇ ಕರೆಯುತ್ತಿದ್ದರು. ಮನೆಗಳಲ್ಲಿ ಮದುವೆ ಗಿದುವೆ ಶುಭ ಕಾರ್ಯಗಳು ನಡೆದರೆ ಅಲ್ಲಿ ಇವರದ್ದೇ ಸಂಭ್ರಮ.

ನಮ್ಮಪ್ಪ ಸತ್ತು ನಮ್ಮವ್ವ ನಮ್ಮನ್ನೆಲ್ಲ ಉಡಿಗೆ ಹಾಕಿಕೊಂಡು ಓದಿಸುವ ಹಠ ತೊಟ್ಟಳು. ನಾವಾದರೋ ಆ ಮಠ ಈ ಮಠಗಳ ಹಾಸ್ಟೆಲ್‌ನಲಿದ್ದುಕೊಂಡು ಓದಿಕೊಂಡು ಊರವರ ಕಣ್ಣಲ್ಲಿ 'ಅಬ್ಬಾ' ಎನ್ನುವಂತೆ ಬೆಳೆದೆವು. ಆ ಕಾಲಕ್ಕೆ ಆ ಊರಿಗೆ ನಾವೇ ಮೊದಲ ಪದವೀಧರರು. ಅವ್ವ ಹೊಟ್ಟೆ ಬಟ್ಟೆ ಕಟ್ಟಿ ನಮ್ಮನ್ನು ಓದಿಸಿದ್ದು ಊರವರ ಕಣ್ಣಲ್ಲಿದ್ದಂತೆ ಕೇರಿಯವರ ಕಣ್ಣಲ್ಲೂ ಇತ್ತು. ದುಡ್ಡಿದ್ದು ಓದಲಾಗದ ಊರಿನ ಗಣ್ಯಮಾನ್ಯರು ನಮಗಿನ್ನೂ ಉದ್ಯೋಗ ಸಿಗದ ಸ್ಥಿತಿಗೆ ಮರುಗಿದವರಂತೆ "ಓದಿದ್ರೇನ್ರಿ........ ಕೂಲಿ ಮಾಡೋದು ತಪ್ತಾ?" ಎನ್ನುತ್ತಿದ್ದರೆ, ಕೇರಿಯವರು "ಏನ್ ಸಿದ್ದಕ್ಕಾ ನಿಮ್ಮ ಹುಡ್ರಿಗೆ ಕೆಲ್ಸ ಸಿಕ್ಕಿದ್ರೆ ಪಾಡಿತ್ತು....." ಎನ್ನುತ್ತಿದ್ದರು. ಲಾ ಪಾಯಿಂಟ್ ಹನುಮಣ್ಣ "ನಮ್ಮ ಕೇರಿ ಹುಡ್ರಾಗಿದ್ರೆ ಇಷ್ಟೊತ್ತಿಗೆ ಕೆಲ್ಸ ಸಿಕ್ಕು ಬಿಡೋದು..." ಎನ್ನುವವನು. "ಹೆಂಗೆ?" ಅಂತಂದ್ರೆ "ರಿಜರ್ವೇಸನ್" ಎಂದು ಬಿಡುತ್ತಿದ್ದ. ಇದು ನಮ್ಮವ್ವನ ಕಿವಿಗೂ ಬಿದ್ದು "ಅಂಗಂದ್ರೇನು?" ಅಂತ ನಮ್ಮನ್ನು ಕೇಳಿ, ನಾವು ವಿವರಿಸಿದಾಗ "ಅವರಂಗೆ ನಾವು ಬಡವ್ರಲ್ವೇ?" ಎಂದದ್ದುಂಟು. ಸಾಮಾಜಿಕ ಅಸಮಾನತೆಯ ವಿಚಾರವನ್ನು ಅವಳಿಗೆ ಹೇಳಿ ಅರ್ಥ ಮಾಡಿಸಲಾಗದೆನಾವು ಸೋತು ಹೋದೆವು.

ಹೀಗಿದ್ದ ಒಂದು ದಿನ ಹನುಮಣ್ಣನಿಗೆ ಏನನ್ನಿಸಿತೋ ಏನೋ ನಮ್ಮ ಮನೆ ಹತ್ತಿರಕ್ಕೆ ಬಂದು " ಸಿದ್ದಕ್ಕಾ ನಡಿ ನಿನ್ನ ಮಕ್ಳನ್ನ ನನ್ನ ಮಕ್ಕಳಂತ ಕೋರ್ಟ್‌ನಲ್ಲಿ ಹೇಳ್ತೀನಿ ನಡಿ" ಎಂದ. ನಮ್ಮವ್ವನಿಗೆ ಅವನ ಮಾತಿನ ತಲೆ ಬುಡ ತಿಳೀದೇ ಅವನನ್ನೇ ನೋಡಿದಳು. "ಹಂಗೆ ಮಾಡಿದ್ರೆ ನಿನ್ನ ಮಕ್ಳಿಗೆ ಕೆಲ್ಸ ಸಿಕ್ತತೆ" ಎಂದು ಹುಂಬಹುಂಬಾಗಿ ವಿವರಿಸಲು ಯತ್ನಿಸಿದ.. "ಅಯ್ಯೋ ಬಿಡು ಹನುಮಣ್ಣ...ಹಂಗೆ ಮಾಡೋದಾಗಿದ್ರೆ ಎಲ್ರೂ ಮಾಡ್ತಿದ್ರು" ಎಂದು ಅವನನ್ನು ಸಾಗಿಹಾಕಿದು ನಮ್ಮವ್ವ.ದಳು. ನಮಗೆ ಹನುಮಣ್ಣನ ಮಾತಿನ ಹಿಂದಿನ ಕಳಕಳಿ ಅರ್ಥವಾಗಿ ಅವನ ಬಗ್ಗೆ ಹೆಮ್ಮೆ ಅಭಿಮಾನ ಮೂಡಿತು. ಆದರೆ ಊರವರು ಹನುಮಣ್ಣನ ಮುಗ್ಧತೆಯನ್ನು ಅರ್ಥ ಮಾಡಿಕೊಳ್ಳದೆ ಇದಕ್ಕೆ ಅಪಾರ್ಥ ಕಲ್ಪಿಸಿಕ್ಕೈ ಚಪ್ಪಾಳೆ ತಟ್ಟಿ ನಮ್ಮನ್ನ ಗೇಲಿ ಮಾಡಿದರು. "ನೋಡ್ದೇನ್ಲಾ..... ಆ ಮಾದಿಗನ ದಿಗರಾ?" ಎಂದು ಕೊಂಡರು. ನಾವು ಅಯ್ಯೋ ಪಾಪ ಎನ್ನದೆ ನಮ್ಮ ಬಳಿ ಬೇರೆ ದಾರಿ ಏನಿತ್ತು?

*** ***

ಆ ಸರದಲ್ಲಿ ಕಾಲದ ನೀರು ಭಾರಿ ಹರಿದು ಹೋಯಿತು. ಊರ ಅಂಜನೇಯನ ಗುಡಿಯ ಮೇಲೆ ಭಗವದ್ಧ್ವಜ ಬಂದು ಹಗಲೂ ರಾತ್ರಿ ಪಟಪಟಾಂತ ಅನ್ನುತ್ತಿತ್ತು. ಕೇರಿಯ ತುದಿ ಭಾಗಕ್ಕೆ ಬುದ್ಧನಗರಾಂತ ಒಂದು ಬೋರ್ಡಿನ ಆಚೀಚೆ ನಗುವ ಬುದ್ಧ, ಕನ್ನಡಕದ ಅಂಬೇಡ್ಕರ್ ಕೇರಿಯ ಕಣ್ಣಾಗಿ ನಿಂತರು. ನಮಗೂ ಸರ್ಕಾರಿ ಕೆಲಸ ಸಿಕ್ಕು ಊರೂರು ಅಲೆದರೂ ಆಗೊಮ್ಮೆ ಈಗೊಮ್ಮೆ ಊರಿಗೆ ಬಂದಾಗ ಕೇರಿಗೆ ಹೋಗಿ ಹನುಮಣ್ಣನನ್ನು ಮಾತಾಡಿಸದೇ ಇರುತ್ತಿರಲಿಲ್ಲ. ಊರು ಕೇರಿಗಳು ತಮ್ಮ ನರಗಳನ್ನು ಬಿಗಿದುಕೊಂಡು ಸದಾ ಬಿಮ್ಮ್ ಎನ್ನುತ್ತಿದ್ದವು. ಸರದ ಮೇಲೆಯೇ ಹೊಡೆದಾಟ ಬಡಿದಾಟಗಳೂ ಟೇಸನ್, ಕೋರ್ಟು ಎಂದು ಅಲೆದಾಡಿ ದಿನವೂ ಕತ್ತಿಯನ್ನು ಎರಡೂ ಕಡೆಯೂ ಮಸ ಮಸಾಂತ ಮಸೆಯುತ್ತಲೇ ಇದ್ದರು.

ಕಾರಣ ಹಲವು. ಅದರಲ್ಲಿ ಒಂದು ಶರಣಪ್ಪ ಹಾಗೂ ಬಸಣ್ಣನ ಹೊಲದ ನಡುವೆ ಒಂದು ಆರು ಎಕರೆಯಷ್ಟು ಗೋಮಾಳ ಭೂಮಿ ಇತ್ತು. ಎಲ್ಲಾಕಡೆ ಇದ್ದ ಗೋಮಾಳ ಭೂಮಿಯನ್ನು ಮಾದರೂ ಲಿಂಗಾಯತರೆನ್ನದೆ ಎಲ್ಲರೂ ಹೊಡಕೊಂಡು ಇದಷ್ಟು ಉಳಿದಿತ್ತು. ಶರಣಪ್ಪ ಬಸಣ್ಣ ಕೂತು 'ನೀನರ್ಧ, ನಾನರ್ಧ ಗೋಮಾಳವನ್ನು ಒತ್ತರಿಸಿ ಬಿಡೋಣ ಬ್ಯಾರೆಯಾರಾದ್ರೂ ನಡುವೆ ಬರಬಾರ್ದು' ಎಂದು ಮಾತಾಡಿಕೊಂಡು ಮಳೆಗಾಗಿ ಕಾದರು. ಮಳೆಯೇನೋ ಬಂತು. ಆ ರಾತ್ರಿಯೇ ಊರವರಿಗೆ ಟ್ರಾಕ್ಟ್ರಿಯ ಸದ್ದು ಕೇಳಿ. ರಾತ್ರಿಯೆಲ್ಲಾ ಮನೆಗಳಲ್ಲಿ ಆ ಬಗ್ಗೆ ಜಿಜ್ಞಾಸ ನಡೆಯಿತು. ಶರಣಪ್ಪ, ಬಸಣ್ಣರೂ ಆತಂಕಿತರಾಗಿ ಬೆಳಿಗ್ಗೆಯೇ ಬೇಸಾಯ ಹೂಡಿ ಆ ಗೋಮಾಳವ ಸೇರಿಸಿಕೊಂಡು ಬಿಡಬೇಕೆಂದು ಮಾತೂ ಆಡಿಕೊಂಡರು.

ಮಾತಿನಂತೆ ಎರಡೂ ಬೇಸಾಯಗಳು ಹೊಲದ ಹತ್ತಿರ ಬಂದು ನೋಡಿದರೆ, ಆ ಗೋಮಾಳವನ್ನು ಯಾರೋ ಆಗಲೇ ಉತ್ತು ಬಿಟ್ಟಿದ್ದಾರೆ. ಅಲ್ಲಿ ಲಾಪಾಯಿಂಟ್ ಹನುಮಣ್ಣ ಅವನ ಮಗ ಚೌಡ ಕಲ್ಲು ಆರಿಸುತ್ತಾ ಏನೇನೋ ಮಾತಾಡಿಕೋಳ್ಳುತ್ತಿದ್ದಾರೆ. ರಾತ್ರಿಯೆಲ್ಲಾ ಬಂದ ಟ್ರ್ಯಾಕ್ಟರಿಯ ಸದ್ದು ಯಾವುದೆಂಬುದೀಗ ಅವರಿಗೆ ಹೊಳೆಯಿತು. ಇಬ್ಬರು ಲಿಂಗಾಯತ್ರ ನಡುವೆ

ಇವನೊಬ್ಬ ಮಾದಿಗ ಬಂದನಲ್ಲಾ ಎಂದು ಹಲ್ಲು ಕಡಿದರು. ನಂತರದಲ್ಲೇ ಪಂಚಾಯಿಯನ್ನೂ ಸೇರಿಸಿದರು. ಇದರ ಫಲವಾಗಿ ಬಡಿದಾಟಗಳೂ ನಡೆದವು. ಎರಡು ದಿನ ಊರೊಳಗೆ ಪೋಲೀಸರು ಇದ್ದೂ ಹೋದರು. ಈಗ 'ಮಾವ' 'ಮಾವನಮನೆ' ಎಂದರೆ ಟೇಷನ್ ಎಂದೇ ಅರ್ಥ ಬದಲಾಗಿತ್ತು. ಬೀಗತನ ಹೋಗಿ ಬದ್ದವೈರತ್ವ ಬೆಳೆದು ನಿಂತಿತ್ತು. ಎರಡೂ ಕಡೆಯ ರಾಜೀ ಕಬೂಲಿಗೆ ನಾವು ಎಷ್ಟೇ ಯತ್ನಿಸಿದರೂ "ನೀವು ಊರೋಗಿರರಲ್ಲಲಾ.... ನಿಮ್ಗೇನು ನಮ್ಮ ಕಷ್ಟ ಅರ್ಥವಾಗ್ತತೆ. ಊರಿಗೆ ಬಂದಿದೀರಿ ಚಂದವಾಗಿ ಉಂಡು ಗಿಂಡು ಹೋಗ್ರಿ....." ಎನ್ನುವರು. ಕೇರಿಯಲ್ಲಿನ ಹೊಸ ಹುಡುಗರಿಗೆ ನಮ್ಮ ಪರಿಚಯವೂ ಇಲ್ಲ. ಅವರಿಗೆ ನಾವು ಪರಿಚಿತರಾಗುತಿದ್ದುದು 'ಲಿಂಗಾಯತ್ರು' ಎಂದೇ ಹೊರತು ಇನ್ನೇನೂ ಅಲ್ಲ.

ಊರು ಸೆಟೆದುಕೊಂಡು ನಿಲ್ಲುವುದರೊಳಗೆ ಮೂರ್‍ನಾಲ್ಕು ಚುನಾವಣೆಗಳೂ, ಗ್ರಾಮಪಂಚಾಯ್ತಿಯ ಚುನಾವಣೆಯೂ ಬಂದು ಕೇರಿಯುವರೂ ಮೆಂಬರ್‍ರಾದ್ರಲ್ಲಾ! ಅಕ್ಕ ಪಕ್ಕದ ಖುರ್ಚಿಯಲ್ಲೇ ಕೂರಂಗೆ ಆದ್ರಲ್ಲಾ.... ಇನ್ನೂ ಕೆಂಡ ಹೊಗೆಯಾಡಲು ತವಕಿಸುತ್ತಿತ್ತು. ಈವಾಗಲೇ ಹನುಮಣ್ಣ ಸತ್ತು ಹೋದ ಸುದ್ದಿ ಬಂದದ್ದು. ನಾನೂ ಹೊರಟೆ. ಕೊನೆಯಬಾರಿಗೆ ಅವನ ಮುಖ ನೋಡಿದ್ರಾಯ್ತು ಎಂದು.

ಕೈಯಲ್ಲಿ ಮಲ್ಲಿಗೆ ಹಾರದ ಪೊಟ್ಟಣ ಹಿಡಿದು ಊರಲ್ಲಿ ಬಸ್ಸಿಳಿದಾಗ ಅದೇ ನರಬಿಗಿತ, ಯಾರ ಮುಖದಲ್ಲೂ ಸಾವಿನ ಸೂತಕ ಕಾಣೆ. ಶರಣಜ್ಜ ಸಿಕ್ಕು ನಾನು ಬಂದ ಉದ್ದೇಶ ಕೇಳಿ ".....ಲೇ ಚಿಗವ್ವಾ..., ಅತ್ತೆ ಸತ್ತಾಗ ಮಣ್ಣಿಗೆ ಬರ್‍ಲಿಲ್ಲಾ.. ಅವನ್ಯಾವನೋ ದಕ್ಲಾರ ಸತ್ತುದಾನೇಂತ ಹೂವಿನಾರ ತಗಂಬಂದಾನೆ.. ಹೋಗು ಹೋಗೋ.. ಎಂದು. ಒಂದಿಬ್ಬರು ಮಾತಾಡಿಸಿದರು. 'ನೀನು ಬರಬಾರ್‍ದಿತ್ತು' ಎಂದರು. ಬೆಳಿಗ್ಗೆನೇ ಒಂದು ಸುತ್ತು ಸರದ ಮೇಲೆ ಹೊಡೆದಾಟ ಬಡಿದಾಟವಾಗಿತ್ತಂತೆ. ಹನುಮಣ್ಣನ ಶವವನ್ನು ಹೂಳುವ ವಿಚಾರಕ್ಕೆ

ಚೌಡ ಅವನ ಮಗ ನಂದನಾ, ಚೇತನ ಹೊಸ ಗೋಮಾಳದ ಹೊಲದಲ್ಲೇ ಹನುಮಣ್ಣನ ಸಮಾಧಿ ಮಾಡಬೇಕೆಂದು ಗುದ್ದು ತೋಡ ತೊಡಗಿದರಂತೆ. ಅಕ್ಕ ಪಕ್ಕದ ಶರಣಪ್ಪ, ಬಸಣ್ಣ ನಮ್ಮ ನಡುವೆ "ಆ ಮಾದ್ಗಿನ ಶವವೇ?" ಎಲ್ಲಾದರೂ ಉಂಟೇ. ಮತ್ತೆ ಅಲಲೋ ಕಲಲೋ....., ಹಿರಿಯರೆಲ್ಲಾ ಕೂಡಿ "ಅವನದೂಂತ ಹೊಲ ಆದ ಮೇಲೆ... ನೀವು ಏನು ಮಾತಾಡಂಗಿಲ್ಲಾ..." ಎಂದು ರಾಜಿ ಕಬೂಲಿ ಮಾಡಿದ ಮೇಲೆ ಹೆಣವನ್ನು ಎತ್ತಿ ಹೊಲಕ್ಕೆ ಒಯ್ದಿದ್ದರು. "ಇಷ್ಟೊತ್ತಿಗಾಗ್ಲೆ ಮಣ್ಣಾಗಿರುತ್ತೆ....., ಈಗ್ಯಾಕೆ ಹೋಗ್ತೀಯಾ" ಅಂತ ಬಾಲ್ಯದ ಗೆಳೆಯ ಬಸವರಾಜ ಅಂದ. "ಸಮಾಧಿ ಮೇಲಾದ್ರೂ ಈ ಹಾರ ಹಾಕಿ ಬರ್‍ತೀನಿ" ಅಂತ ಹೊರಟೆ. ಅವನನ್ನು 'ಬಾರೋ' ಎಂದೆ. ತಲೆ ಅಲ್ಲಾಡಿಸಿದ.

ಮಣ್ಣು ಹಾಕಿ ಅವನು ಬಂಧುಗಳು ನನ್ನ ಎದುರಿಗೇ ಬಂದರು. ಕೆಲವರು ನನ್ನ ಗುರುತು ಹಿಡಿದರೂ ಮಾತಾಡಿಸಲಿಲ್ಲ, "ಯಾರು ಯಾರು" ಎಂದು ಕೆಲವರು ಕೇಳಿದ ಪ್ರಶ್ನೆಗೆ "ಲಿಂಗಾತ್ರನು" ಎಂಬ ಉತ್ತರವೆ ಬಂದಿತು. ಹೊಲಕ್ಕೆ ಹೋದೆ. ಆಗಲೇ ಪೂರ್ಣ ಮಣ್ಣು ಎಳೆದು ಗುಡ್ಡೆ ಮಾಡಿ ದೊಡ್ಡ ದೊಡ್ಡ ಮುಳ್ಳಿನ ಕಳ್ಳೆಗಳನ್ನು ಪೇರಿಸಿ ಕಲ್ಲನು ಇಡುತ್ತಿದ್ದರು. ಚೌಡ ನನ್ನನ್ನು ನೋಡಿ ಕಣ್ಣೀರು ಹಾಕಿದ. ಕರಿಯಣ್ಣ , ಅವನ ಮಗ ಸುರೇಶ ಅಲ್ಲೇ ಇದ್ದರು. ಪೊಟ್ಟಣವ ಬಿಚ್ಚಿ ಗುಡ್ಡೆಯ ಮೇಲೆ ಹಾರ ಹಾಕಲು ಹೋದೆ. ಹನುಮಣ್ಣನ ಮೊಮ್ಮಕ್ಕಳು ಮಾಧವ ಮತ್ತು ಮಧುಸೂದನ ಅಡ್ಡ ಬಣದರು. "ನಿಮ್ಮಂತವರ ಮೊಸಳೆ ಕಣ್ಣೀರು ನಮಗೆ ಅರ್ಥವಾಗುತ್ತೆ,.;" ಅಂದ ಅವರಲ್ಲೊಬ್ಬ.'ಓ ಇವನೇ ಇರ್‍ಬೇಕು ಹನುಮಣ್ಣ ಹೇಳುತ್ತಿದ್ದ ದಾವಣಗೆರೆಯಲ್ಲಿ ಓದುತ್ತಿದ್ದ ಮೊಮ್ಮಗ ಅಂದುಕೊಂಡು ಒಂದು ಹೆಜ್ಜೆ ಹಿಂದೆ ಸರಿದೆ. ಕಲಿತ ಮಾತು, ರೋಷದ ನೋಟ. ನಾನೇನೂ ಮಾತಾಡಲಿಲ್ಲ. ಚೌಡ, ಕರಿಯಣ್ಣರೇ ಆ ಹುಡುಗರಿಗೆ ಏನೋ ಹೇಳಿ "ನೀವು ಹಾಕಿ ಸಾರ್...." ಎಂದರು. ಹನುಮಣ್ಣನ ಕುಳ್ಳು ದೇಹ, ಮುಖವನ್ನು ಕಣ್ಮುಂದೆ ತಂದು ಕೊಂಡು, ಅವನ ಕಕ್ಕುಲಾತಿ, ಪ್ರೀತಿಯ ಮಾತು ಸ್ಮರಣೆಗೆ ತಂದುಕೊಂಡು ಹಾರ ಹಾಕಿ ಕೈ ಮುಗಿದು ಹಿಂದಕ್ಕೆ ತಿರುಗಿ ಹೊರಟೆ. ಹೊಲದ ಬದುವನ್ನು ದಾಟಿದಾಗ ಮತ್ತೊಮ್ಮೆ ಹಿಂದಕ್ಕೆ ತಿರುಗಿ ನೋಡಿದೆ. ಆ ಹುಡುಗ ನಾನು ಹಾಕಿದ ಹಾರ ತೆಗೆದು ದೂರಕ್ಕೆ ಎಸೆಯುತ್ತಿರುವುದು ಕಾಣಿಸಿತು.

ಮನಸ್ಸು ಭಾರವಾಗಿತ್ತು, ನಿದ್ದೆ ಕಣ್ಣು ತುಂಬಿ ಬರುತ್ತಿತ್ತು. ಬಸ್ಸಿನ ಸೀಟಿಗೆ ಒರಗಿ ಕಣ್ಮುಚ್ಚಿದೆ. ನಿದ್ದೆ ಆವರಿಸಿತು. ಅದರಲ್ಲೊಂದು ಕನಸು. ಅದೇ ಹನುಮಣ್ಣ. ನೋಡಿದರೆ ಅವನೀಗ ಎಚ್ಚರಾಗಿದ್ದಾನೆ. ಕುಳ್ಳನಾಗಿಲ್ಲ ಎತ್ತರವಿದ್ದಾನೆ, ಇನ್ನೂ ಬೆಳೆಯುತ್ತಿದ್ದಾನೆ. ಮರದಾಟಿ ಆಕಾಶದೆತ್ತರಕ್ಕೆ. ಅವನ ಪಾದದ ಬುಡದಲ್ಲಿ ನೂರಾರು ಜನ. ಅವನ ಕಿರು ಬೆರಳಿನಷ್ಟು ನಾವು ಎತ್ತರಿಲ್ಲ. ಅವನ ಬಾಹುಬಲಿ ಎತ್ತರದ ಮುಂದೆ ನಾವು ಕುಬ್ಜರಾಗಿ ಹೋಗಿದ್ದೆವು. ಎಷ್ಟು ಜಿಗಿದರೂ ಅವನ ಎತ್ತರಕ್ಕೆ ನಾವು ಏರಲಾಗುತ್ತಿಲ್ಲ. ಅವನು ತ್ರಿವಿಕ್ರಮನಂತೆ ಬೆಳೆಯುತ್ತಲೇ ಹೋದ.



**(ಚಿತ್ರದುರ್ಗದ ಸರ್ಕಾರಿ ಪದವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಲ ಡಾ. ಲೋಕೇಶ ಅಗಸನಕಟ್ಟೆ ಕನ್ನಡದ ಹಿರಿಯ ಕವಿ, ಕಥೆಗಾರ ಮತ್ತು ವಿಮರ್ಶಕರೂ ಹೌದು.)**

---

**ಹೊಸ ಮನುಷ್ಯ' ಆಗಸ್ಟ್ ಸಂಚಿಕೆ:**

## ವಾರ್ಷಿಕ ವಿಶೇಷ ಸಂಚಿಕೆ

ಇದರಲ್ಲಿ–

**ವೈದೇಹಿಯವರ ಹೊಸ ಕಥೆ**
**ಹನೂರು ಕೃಷ್ಣಮೂರ್ತೀ ಅವರ**
**ಹೊಸ ಕಾದಂಬರಿಯ ಕೆಲ ಪುಟಗಳು**
**ಎಚ್.ಎಸ್. ಶಿವಪ್ರಕಾಶ ಅವರ 'ಬಹುಧರ್ಮ ಭಾರತ'**
**ವಿಶೇಷ ಉಪನ್ಯಾಸದ ಬರಹ ರೂಪ**
**ಲಕ್ಷ್ಮೀಶ ತೋಳ್ಪಾಡಿಯವರ ವಿಶೇಷ ಲೇಖನ:**
**'ಹಿಂದೂ ಧರ್ಮದ ಸದ್ಯದ ಸಂಕಟಗಳು'**
**ಖ್ಯಾತ ಭಾಷಾ ಸಂಸ್ಕೃತಿ ತಜ್ಞ ಗಣೇಶ್ ಎನ್ ದೇವಿಯವರೊಂದಿಗೆ**
**ಭಾರತೀಯ ಭಾಷೆಗಳ 'ಸ್ಥಿತಿ–ಗತಿ'ಗಳ ಕುರಿತು**
**ಡಾ. ಎಸ್. ಸಿರಾಜ್ ಅಹಮದ್ ಅವರು ನಡೆಸಿರುವ ಸಂದರ್ಶನ**
**ಕೆ. ಸತ್ಯನಾರಾಯಣ ಅವರ 'ಸಾಹಿತ್ಯ ಸಮಾಜ: ಅಂದು–ಇಂದು':**
**ಒಂದು ವಿಶ್ಲೇಷಣೆ**
**ವೆಂಕಟೇಶ ಮಾಚಕನೂರರ ಚೀನಾ ಪ್ರವಾಸದ ಸಚಿತ್ರ ಕಥನ**
**ಬಿ.ಎಸ್. ದಿವಾಕರರ ಹಿಮಾಲಯದ ಪರ್ವತ ಶ್ರೇಣಿಯಿಂದ**
**ಕನ್ನಡಿಗನ ಟಿಪ್ಪಣಿಗಳು**
**'ಗಾಂಧಿ ವ್ಯಕ್ತಿತ್ವದ ಇಂದಿನ ಬಿಕ್ಕಟ್ಟುಗಳು':**
**ಸಂಜಯ್ ಪಲ್ಶೀಕರ್ ಅವರ ಲೇಖನದ ಕನ್ನಡಾನುವಾದ**
**ಮಹಾತ್ಮ ಗಾಂಧಿಯವರ ಆತ್ಮಚರಿತ್ರೆಯ ಪರಿಷ್ಕೃತ ಆವೃತ್ತಿಯ**
**ವಿಶೇಷತೆಗಳ ಕುರಿತು ಕೆ.ವಿ.ಅಕ್ಷರ ಅವರಿಂದ 'ಪುಸ್ತಕಾವಲೋಕನ'**
**ಜಯಂತ ಕಾಯ್ಕಿಣಿಯವರಿಂದ**
**'ನನ್ನ ಮೆಚ್ಚಿನ ಹಳೆಯ ಕನ್ನಡ ಚಿತ್ರಗೀತೆಗಳು': ವಿಶೇಷ ಬರಹ**
**ಆಯ್ದ ಸಾಹಿತ್ಯ ಚಿಂತಕರಿಂದ**
**'ನಾನು ಓದಿದ ಕನ್ನಡದ ಶ್ರೇಷ್ಠ ಪುಸ್ತಕ': ಟಿಪ್ಪಣಿಗಳು**
**ಖ್ಯಾತ ಕವಿ–ಕವಯತ್ರಿಯರ ವಿಶೇಷ ಕವನಗಳು**

ಇವುಗಳೊಂದಿಗೆ ಇನ್ನೂ ಹಲವು ವೈಶಿಷ್ಟ್ಯಗಳು!

**ಪ್ರಿಯ ಓದುಗರೇ,**

**ಈ ನಮ್ಮ ಸಾಹಸದೊಂದಿಗೇ ನೀವೂ ಕೈಜೋಡಿಸಬಹುದು. ನಿಮ್ಮ ಮಿತ್ರರು ಮತ್ತು ಪರಿಚಿತರಿಂದ ಜಾಹೀರಾತುಗಳನ್ನು ಕೊಡಿಸಬಹುದು. ನೀವೂ ನಿಮ್ಮ ಆರ್ಥಿಕ ಅನುಕೂಲಕ್ಕನುಸಾರವಾಗಿ ವೈಯಕ್ತಿಕ ಶುಭಾಶಯ ಜಾಹೀರಾತುಗಳನ್ನು ನೀಡಬಹುದು. ಅವುಗಳ ವಿವರ ಇಂತಿದೆ:**

**ಕಪ್ಪು ಬಿಳುಪು ಒಳಪುಟಗಳು : ಪೂರ್ಣ ಪುಟ: ಎರಡು ಸಾವಿರ ರೂಪಾಯಿ ಅರ್ಧ ಪುಟ : ಒಂದು ಸಾವಿರ ರೂಪಾಯಿಗಳು ಕಾಲುಪುಟ: ಆರು ನೂರು ರೂಪಾಯಿಗಳು**

ಸಂಪರ್ಕಿಸಿ : **ಸಂಪಾದಕರು, 'ಹೊಸ ಮನುಷ್ಯ'**
ಮೊಬೈಲ್ : 94492 42284

## ನವಿಲುಗರಿ

### ಕೆ.ಪಿ. ನಟರಾಜರ ಎರಡು ಪದ್ಯಗಳು



#### ೧. ನಾನಲ್ಲಿರುವೆ

ನಾನಲ್ಲಿರುವೆ ಆ ಮರದೊಡಲಲ್ಲಿ
ಕಣ್ತೆರೆದಿರುವ ರಸ ಪುಷ್ಪದಂತೆ
ಸ್ನಿಗ್ದ ವರ್ಣೀಯ ಪುಷ್ಪದಾಕಾಂಕ್ಷೆಯಂತೆ

ಅನಂತ ಕಾಲವನೀ ಕ್ಷಣಾರ್ಧದಲಿ
ಬದುಕಲಿಚ್ಛಿಸಿದಜ್ಞಾತ ಮರದೊಳರಳಿರುವಾ
ಕನ್ನಡದ ಹೂವಿನಂತೆ

ನಾನಿಲ್ಲಿರುವೆ ಈ ದಿನದಲರಳಿರುವ
ದಿನಕರನ ಹಗಲ ಮುಂಗುರುಹು
ಚುಮು ಚುಮು ಬಿಸಿಲ ಮುಂಜಾವದಂತೆ

ನಾನಿಲ್ಲಿರುವೆ ಅನಾದಿ ಅನಂತನ ಒಡಲ
ಹೊಸ ಪತ್ರಮಾಲೆಯಲಂಕರಿಸಲಾಗಮಿಸುತ್ತಿರುವ ನವ ಚೈತ್ರನಂತೆ

ನಾನಿಲ್ಲಿರುವೆ ನವ ಶಿಶುವಿನೆದೆಯಲುದಿಸಿ
ಉಸಿರು ಹುಯ್ಯುತ್ತಿರುವ
ಹೊಸ ಜೀವ ಶ್ವಾಸೋಚ್ಛ್ವಾಸದಂತೆ



ನಾನಿಲ್ಲಿರುವೆ ಪಂಚ ಪುಷ್ಪಗಳಲ್ಲಿ ಅರಳಿ ನಿಂತು
ಷಡ್ರಸಗಳಲಿ ಹೊಮ್ಮಿ ದೇಹ ತಂತು ತಂತು

ನಾನಿಲ್ಲಿರುವೆ ಹಗಲು ರಾತ್ರಿಗಳಲ್ಲಿ
ಸ್ತ್ರೀ ಪುರುಷ ಸೌಂದರ್ಯದೊಡಲಲ್ಲಿ
ಮೊರೆವ ಮೃಗ ಜಲದಲ್ಲಿ

ಇಲ್ಲಿ ನಾನಿರುವೆ .......

#### ೨. ನಾನು ಅಲ್ಲಿರುವೆ

ನಾನು ಅಲ್ಲಿರುವೆ

ಸಂಜೆ ಬಯಲಲ್ಲಿ
ಸುಳಿವ ತಂಗಾಳಿಯಲ್ಲಿ

ರೆಂಬೆ ಕೊಂಬೆಗಳ
ತೊಟ್ಟು ತೊಟ್ಟಿನಲಿ
ಸಿಲುಕಿದಾಹಾರಾಂಶ
ದುತ್ಪತ್ತಿಕೋಶಪತ್ರಗಳಲ್ಲಿ

ಸುಡುವ ಸೂರ್ಯನ
ಬಿಸಿಲ ತೀಕ್ಷ್ಣತೆಗಳುಕದೆ
ಹಸಿರ ಮುಕ್ಕಳಿಸಿ
ಲಕಲಕಿಸುವೀ
ಪತ್ರ ಸಂಕುಲದಲ್ಲಿ

ಬಿಟ್ಟ ಕಣ್ಣಾಗಿ
ಸುತ್ತ ಮುತ್ತಲೂ
ನೋಡುತ್ತಿರುವ
ಕಾಲ ಭೈರವನ
ನಿಷ್ಠುರ ನೋಟದಲ್ಲಿ


ಚಿತ್ರಗಳು : ರೂಪ ಹಾಸನ

ವಿಷವನೇ ಉಂಡು
ಅಮೃತವ ಸ್ಫುರಿಸುವೀ
ಹರಿದ್ವರ್ಣ ಪತ್ರಗಳ
ಪ್ರಾಣವಾಯುವಾವಾರದಲ್ಲಿ

ತಿನ್ನುವ ಗೆದಲಿ
ಗಾಹಾರವಾದರೂ
ನಿಗುರಿ ಮೇಲೆದ್ದು
ಆಕಾಶಕ್ಕೆಟಗುಗ್ಯೆ
ಯ್ಯಾಗುವಾ ವೃಕ್ಷ
ದಿಚ್ಛಾ ಶಕ್ತಿಯಲ್ಲಿ

ಮರದ ಪದತಲದಲ್ಲಿ
ಬಿದ್ದು ಇಟ್ಟಾಡಿರುವ
ತೊಟ್ಟು ಕಳಚಿದ
ಹಣ್ಣೆಲೆಗಳ
ಛಂದೋಲ್ಲಾಸದಲ್ಲಿ.......

ನಾನು ಅಲ್ಲಿರುವೆ

### ಕಾಡು ಜೇಡ ಹಾಗೂ ಬಾತುಕೋಳಿ ಹೂವು

ಅಂಗೈಯಗಲಕೂ ಮೈಚಾಚಿ
ಮೂರು ಮರಕೂ
ಸಾಮ್ರಾಜ್ಯ ವಿಸ್ತರಿಸಿ
ನೇತುಬಿದ್ದಿದೆ
ಕಾಡುಜೇಡವೊಂದು
ಮರದಿಂದ ಮರಕ್ಕೆ
ಡೇರೆ ಕಟ್ಟಲು
ತನ್ನ ನಡುವಿಗೇ
ಗೂಟ ಹುಯ್ದು

ಹಬ್ಬುತ್ತಲೇ ಇದೆ ಮೆಲ್ಲ ಮೇಲಕೆ
ನವಿರು ಬಳ್ಳಿಯೊಂದು.

ಹಬ್ಬುವ ಪರಿಯುಂಟೇ?
ಜಗದಲ್ಲಿ! ಅದೂ....
ಜೋತು ಬಿದ್ದ ಜೇಡನೆಳೆಯ ನಂಬಿ!

ಬಾತುಕೋಳಿಯಂಥ ಹೂ
ಅರಳುವುದು ಆ
ಬಳ್ಳಿಯ ಕಣ್ಣ ಕೊಳದಲ್ಲಿ

ಕೀಟ ಹಿಡಿವ ಕಲೆಯಿದೆಯಂತೆ
ಚಿತ್ತಾಕರ್ಷ ಹೂಮೈಯಿಗೆ

ಬಿಟ್ಟುಕೊಂಡಿದೆಯೇ?
ಜೇಡ ಅದಕೆಂದೇ
ಬಳ್ಳಿಯನು ಬಲೆಗೆ



ಕಾದು ಕಾಣಬೇಕಿದೆ
ಹೂ ಬಿಡುವ ಕಾಲ....
ನಾಳೆಗೆ.

**–ಹೆಚ್. ಆರ್. ಸುಜಾತ**

# ಭಾಷೆ, ಸಾಹಿತ್ಯ, ಸಂಸ್ಕೃತಿ ಇತ್ಯಾದಿ: ಪುಸ್ತಕ ಬೆರಗು, ಮುನಿಸು ಮತ್ತು ಆದರ್ಶ ಪಾಲನೆ ಕುರಿತಂತೆ..

## ಕುವೆಂಪು : ಎರಡು ಭವ್ಯ ಪುಸ್ತಕಗಳು



**ಈ** ಎರಡು ಪುಸ್ತಕಗಳ ಬಗ್ಗೆ ಈ ಮುಂಚೆಯೇ ಬರೆಯಬೇಕಿತ್ತು. ಈ ಪುಸ್ತಕಗಳ ಚೆಂದ ಮತ್ತು ಶ್ರೀಮಂತಿಕೆಗೆ ಮನಸೋತ ನನ್ನ ಗೆಳೆಯರೊಬ್ಬರು ತಮ್ಮ ಕುಟುಂಬಕ್ಕೆ ಇವನ್ನು ತೋರಿಸಲು ತೆಗೆದುಕೊಂಡು ಹೋಗಿದ್ದವರು ಈಗ ಮರಳಿಸಿದ್ದಾರೆ. ಇವುಗಳಲ್ಲಿ ಒಂದು 'ಅನುರಕ್ತಿ' ಕುವೆಂಪು ಅವರ ಕವಿತೆಗಳ ಸಚಿತ್ರ ಕೃತಿ ಚಿತ್ರ ಎಂದರೆ ಅಂತಿಥ ಚಿತ್ರಗಳಲ್ಲ. ಕುವೆಂಪು ವರ್ಣಿಸಿದ ಮಲೆನಾಡಿನ ಚರಾಚರ ಲೋಕ ವೈವಿಧ್ಯವನ್ನೆಲ್ಲ ಅದರ ರುದ್ರ ರಮಣೀಯತೆಗಾಗಲೀ, ಸ್ನಿಗ್ಧ ಸೌಂದರ್ಯಕ್ಕಾಗಲೀ ಕಿಂಚಿತ್ತೂ ಊನವಾಗದಂತೆ ಸೂರೆ ಮಾಡಿದ ಅದ್ಭುತ ಚಿತ್ರ ಲೋಕವಿದೆ, ಅಷ್ಟೇ ಅಲ್ಲ, ಕುವೆಂಪು ಕವಿತೆಗಳಿಗೆ ವಸ್ತುವಾದ ಮಲೆನಾಡಿನ ಹೊರಗಿನ ರಸಬೀಡುಗಳ ಮತ್ತು ಮೇರು ವ್ಯಕ್ತಿತ್ವಗಳ ವಿಭಾಗವೂ ಇದೆ. ಈ ಕೃತಿಯ ಸಂಪಾದಕರು ಡಾ. ಕೆ.ಸಿ. ಶಿವಾರೆಡ್ಡಿ. ಪ್ರಕಾಶಕರು : ಬೆಂಗಳೂರಿನ ಎಂ.ಮೂನಿಸ್ವಾಮಿ ಅಂಡ್ ಸನ್ಸ್‌ನ ಎಂಸಿ. ನರೇಂದ್ರ ಪುಟಗಳು : ೩೬೭ ಬೆಲೆ: ರೂ. ೨೭೫೦/-

ಎರಡನೆಯ ಪುಸ್ತಕ : 'ಕುವೆಂಪು ಮಲೆನಾಡು.



ಇದು ಕುವೆಂಪು ಅವರ ಕವಿ ಮನಸ್ಸನ್ನು ಜಾಗೃತಗೊಳಿಸಿ ಅವರ ಲೋಕ ಗ್ರಹಿಕೆಯ ವಿನ್ಯಾಸಗಳನ್ನು ರೂಪಿಸಿದ ಮಲೆನಾಡಿ ಸಸ್ಯ ಕೀಟಾದಿ ಪ್ರಾಣಿ ಪಕ್ಷಿಗಳೆಲ್ಲದರ ಜೀವಂತ ಚಿತ್ರಣ ಇಲ್ಲಿದೆ. ಇಲ್ಲಿನ ಧುಮ್ಮಿಕ್ಕುವ ಜಲರಾಶಿ, ಮೇಘಮಾಲೆಗಳಿಂದಾವೃತವಾದ ಪರ್ವತಶ್ರೇಣಿಗಳಿಂದ ಹಿಡಿದು, ಮಲೆನಾಡಿನ ಬೆರಗುಗೊಳಿಸುವ ಜೀವವ್ಯೂಹದ ಸಕಲ ತಂತುಗಳನ್ನೂ ಸೂಕ್ಷ್ಮಸುಂದರವಾಗಿ ಸೆರೆಹಿಡಿದಿರುವ ಅಪೂರ್ವ ಚಿತ್ರಗಳು ಮತ್ತು ಅವುಗಳನ್ನು ಕುರಿತ ಸ್ಥಳೀಯ ಮಾಹಿತಿಯ ಜೊತೆಗೇ ವೈಜ್ಞಾನಿಕ ಮಾಹಿತಿಯನ್ನೂ ಒಳಗೊಂಡಿರುವ ಈ ಅಮೂಲ್ಯ ಗ್ರಂಥ ಜೀವಪರಿಸರ ಕ್ಷೇತ್ರದಲ್ಲಿ ಆಸಕ್ತಿಹೊಂದಿದವರ ಕುತೂಹಲವನ್ನೂ ಕೆರಳಿಸುವಂತಿದೆ. ಈ ಪುಸ್ತಕದ ಸಂಪಾದಕರು: ಡಾ. ಕೆ. ಪುಟ್ಟಸ್ವಾಮಿ ಪ್ರಕಾಶಕರು : ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳ್ಳಿ ಪುಟಗಳು : ೩೧೬ ಬೆಲೆ : ರೂ. ೧೨೦೦/-.

ಈ ಎರಡೂ ಪುಸ್ತಕಗಳನ್ನು ಶ್ರೇಷ್ಠ ಮಟ್ಟದ ದಪ್ಪ/ಹಾಲು ಕಾಗದವನ್ನು ಬಳಸಿ ಅತ್ಯುತ್ತಮ ಮುದ್ರಣ ತಂತ್ರಜ್ಞಾನದ ಸಹಾಯದಿಂದ ಕನ್ನಡ ಪುಸ್ತಕ ಪ್ರಕಾಶನ ಹೆಮ್ಮೆಪಡುವಂತೆ ಸಿದ್ಧಪಡಿಸಲಾಗಿದೆ. ಈ ದೃಷ್ಟಿಯಿಂದ ಇವುಗಳ ಸಂಪಾದಕರ ಜೊತೆಗೇ ಪ್ರಕಾಶಕರೂ ಅಭಿನಂದನಾರ್ಹರಾಗಿದ್ದಾರೆ. ಆಶ್ಚರ್ಯವೆಂದರೆ ಈ ಎರಡೂ ಪುಸ್ತಕಗಳ ಸಂಪಾದಕರು ಬಯಲುಸೀಮೆಯವರು! ಅದೇನೇ ಇರಲಿ, ಈ ಎರಡೂ ಕೃತಿಗಳು ಆರ್ಥಿಕ ಅನುಕೂಲವಿರುವ ಎಲ್ಲ ಕನ್ನಡಿಗರ ಮನೆಗಳನ್ನು ಅಲಂಕರಿಸಬೇಕಾದಂಥವು.

## 'ಬಂಡಾಯ'ದ ಗೆಳೆಯರ ಮುನಿಸು; ಕಾಮು ಮಾತಿನ ಸೊಗಸು

**ನಾ**ನು ಈ ಹಿಂದಿನ ಎರಡು ಸಂಚಿಕೆಗಳಲ್ಲಿ 'ಬಂಡಾಯ'ದ ಬಗ್ಗೆ ಚಂಪಾರ ಬಗ್ಗೆ ಬರೆದುದನ್ನು ಓದಿ ನಮ್ಮ ಕೆಲವು ಓದುಗ ಗೆಳೆಯರು ನನ್ನೊಡನೆ, ಪತ್ರಿಕೆಯೊಡನೆ ಮುನಿಸಿಕೊಂಡಿದ್ದಾರೆ. ನಾನು ಹಾಗೆ ಬರೆಯುವಂತೆ ಅನಿವಾರ್ಯ ಮಾಡಿದ್ದೇನೆಂಬುದನ್ನು ಅರಿತು ಈ ಗೆಳೆಯರು ಮುನಿಸಿಕೊಂಡಿದ್ದರೆ ನನ್ನದೇನೂ ತಕರಾರಿಲ್ಲ. ಅವರಿಗೆ ಶುಭ ಕೋರುವೆ.

ಇನ್ನು 'ಬಂಡಾಯ'ದ ಬಗ್ಗೆ ಹೇಳುವುದಾದರೆ, ನನ್ನ ನಿಲುವು ಮೊದಲಿಂದಲೂ ಇದೇ ಆಗಿದೆ : ಸಾಹಿತ್ಯ ಹೀಗೇ ಇರಬೇಕೆಂದು ತಾಕೀತು ಮಾಡುವವರಿಗೆ ಸಾಹಿತ್ಯವೇನೆಂದು ಗೊತ್ತಿರಲಾರದು. 'ಬಂಡಾಯ' ಆ ಧಾರ್ಷ್ಟ್ಯವನ್ನು ಪ್ರದರ್ಶಿಸಿ ಕೆಲ ಕಾಲ ಕನ್ನಡ ಸಾಹಿತ್ಯದ ರುಚಿಯನ್ನೇ ಕೆಡಿಸಿತು. ಅದರ ಪರಿಣಾಮಗಳನ್ನು ನಾವಿನ್ನೂ ವಿಶ್ವವಿದ್ಯಾಲಯಗಳ ಸಾಹಿತ್ಯ ವಿಭಾಗಗಳ ಗುಣಮಟ್ಟಗಳಲ್ಲಿ, ಅವುಗಳ ಉತ್ಪನ್ನಗಳಾದ ನಮ್ಮ ಮಕ್ಕಳ ಪಠ್ಯಪುಸ್ತಕಗಳಲ್ಲಿ, ಸರ್ಕಾರಿ ಸಾಹಿತ್ಯ ಸಂಸ್ಥೆಗಳ ನೇಮಕಗಳಲ್ಲಿ ಕಾಣುತ್ತಿದ್ದೇವೆ.

ಸಾಹಿತ್ಯ ಒಂದು ಕಾಲಾವಧಿಯ ಚಳುವಳಿಯಾಗಬಲ್ಲುದು. ಆ ಚಳುವಳಿ ಆಂತರಿಕವಾದದ್ದು; ಕಾಲದ ಕರೆಗೆ ಓಗೊಟ್ಟು ತಾನಾಗಿ ಒಡಮೂಡುವಂತಹದ್ದು. ಅದು ಗುರುತಿಸಲ್ಪಡುವುದು ನಂತರದಲ್ಲಿ, ಅಧ್ಯಯನಗಳ ಮೂಲಕ. ಆದರೆ ಈ 'ಬಂಡಾಯ'ವೆಂಬುದು ಆರಂಭದಲ್ಲೇ ಒಂದು ಸಂಘಟನೆ ಮತ್ತು ಪ್ರಣಾಳಿಕೆಯನ್ನೂ ಘೋಷಿಸಿಕೊಂಡು ಒಂದು ರಾಜಕೀಯ ಪಕ್ಷದಂತೆ ಬೆಳೆಯಿತು. ಇಂತಹ ಸಾಹಿತ್ಯಾಂದೋಲನ ಹೆಚ್ಚೆಂದರೆ ಸಮಾಜಕಲ್ಯಾಣ ಇಲಾಖೆಗೆ ಗುಣಮಟ್ಟದ ಗುಮಾಸ್ತರುಗಳನ್ನು ಪೂರೈಸಬಲ್ಲುದಷ್ಟೇ.



ಪುನರಾವರ್ತನೆಯ ದೋಷವನ್ನು ನಿರ್ಲಕ್ಷಿಸಿ ಹೇಳುವುದಾದರೆ, ಬರಹಗಾರನ ಏಕಾಂತದಲ್ಲೇ ನಿಜವಾದ ಬಂಡಾಯ ಮೂಡುವುದು. ಆಲ್ಬರ್ಟ್ ಕಾಮು ಬರೆಯುವುದೇ ಬಂಡಾಯ ಎಂದು ಹೇಳಿದ್ದು ಈ ಅರ್ಥದಲ್ಲೇ.

## ವಿವೇಕ್ ಹೇಳದ ಆದರ್ಶ



ಕೆಲವು ದಿನಗಳ ಹಿಂದೆ ಪತ್ರಿಕೆಯ ಬಗ್ಗೆ ವಿವೇಕ್ ಶಾನಭಾಗ ಅವರಿಗೆ ಕರೆ ಮಾಡಿದ್ದೆ. ಅವರು ಪತ್ರಿಕೆ ಚೆನ್ನಾಗಿದೆ ಎಂದು ಹೇಳುತ್ತಲೇ, ಜೂನ್ ಸಂಚಿಕೆಯಲ್ಲಿ ನಿಮ್ಮ ಪತ್ರಿಕೆಯಲ್ಲೇ ನಿಮ್ಮದೇ ಪುಸ್ತಕದ ವಿಮರ್ಶೆ ಹಾಕಿಕೊಳ್ಳುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.. ಈ ಸೂಕ್ಷ್ಮದ ಬಗ್ಗೆ ಈವರೆಗೆ ಯೋಚನೆಯನ್ನೇ ಮಾಡದಿದ್ದ ನಾನು (ಏಕೆಂದರೆ ಈ ಹಿಂದೆಯೂ-ಪತ್ರಿಕೆಯ ಈ ಆರೇಳು ವರ್ಷಗಳ ಅವಧಿಯಲ್ಲಿ-ಎರಡು-ಮೂರು ಬಾರಿ ಹೀಗೆ ಮಾಡಿದ್ದೆ) ಈ ದಿಢೀರ್ 'ದಾಳಿ'ಯಿಂದ ಒಂದು ಕ್ಷಣ ಏನೂ ತೋಚದೆ, ಮುಂದಿನ ಸಂಚಿಕೆಯಲ್ಲೂ ನನ್ನ ಇನ್ನೊಂದು ಪುಸ್ತಕದ ವಿಮರ್ಶೆ ಬರಲಿದೆ. ಅದರಲ್ಲಿ ತಪ್ಪೇನು? ನಾನೂ ಒಬ್ಬ ಲೇಖಕನಲ್ಲವೇ?' ಎಂದೆ. ತಕ್ಷಣ ಅವರ ಮನಸ್ಸಿನಲ್ಲಿದ್ದ ಅನುಮಾನ ಹೊರಬಂತು : ಆ ವಿಮರ್ಶೆ ಪ್ರಶಂಸಾತ್ಮಕವಾಗಿದೆ! ಈಗ ನನ್ನ ಮುಜುಗರ ವಿಷಾದಕ್ಕೆ ತಿರುಗಿತು. ನಾನು ಹೇಳಿದೆ : 'ಮೊದಲು ನೀವು ನನ್ನ ಪ್ರಾಮಾಣಿಕತೆಯನ್ನು ಅನುಮಾನಿಸಿದಿರಿ, ಈಗ ವಿಮರ್ಶಕ ಚೆನ್ನಿಯವರ ಪ್ರಾಮಾಣಿಕತೆಯನ್ನು ಅನುಮಾನಿಸುತ್ತಿದ್ದೀರಿ!'. ವಿವೇಕರ ಮೊದಲ ಆಕ್ಷೇಪಣೆಯನ್ನು ಒಂದು ಆದರ್ಶದ ದೃಷ್ಟಿಯಿಂದ ಒಪ್ಪಬಹುದಾದದರೂ ಎರಡನೆಯದು ಅವರಿಗೆ ತಕ್ಕ ಮಾತಲ್ಲ ಎನ್ನಿಸಿತು. ಅದರಲ್ಲಿ ಒಂದಿಷ್ಟು ಒಗರೂ ಸೇರಿದಂತಿತ್ತು. ಅದು ಅವರಿಗೂ ಗೊತ್ತಾಗಿಯೋ ಏನೋ ಈ ಬಗ್ಗೆ ಅವರು ಮಾತು ಮುಂದುವರೆಸಲಿಲ್ಲ.

ಆದರೆ ನಾನು ಮಾತು ಮುಂದುರೆಸಿದೆ. ಏಕೆಂದರೆ ಆದರ್ಶವನ್ನು ನಾನೇಕೆ ಪಾಲಿಸಲಾಗುತ್ತಿಲ್ಲ ಎಂದು ವಿವರಿಸಬೇಕಿತ್ತು. ನಾನು ಹೇಳಿದೆ: 'ಒಂದು ಆದರ್ಶ ಸ್ಥಿತಿಯಲ್ಲಿ ಮಾತ್ರ ಒಂದು ಆದರ್ಶ ಪಾಲಿಸಲು ಸಾಧ್ಯ. ಮುಖ್ಯ ಲಹರಿಯ ಪತ್ರಿಕೆಗಳು ತಮ್ಮದೇ ಹಿತಾಸಕ್ತ ಗುಂಪುಗಳನ್ನು ಬೆಳೆಸಿಕೊಂಡು ತಮ್ಮದೇ ಗುಂಪಿನ ಲೇಖಕರನ್ನಷ್ಟೇ 'ಪೋಷಿಸು'ತ್ತಿರುವಾಗ ನಮ್ಮಂತಹ ಲೇಖಕರು ಏನು ಮಾಡಬೇಕು? ಕಳೆದ ಇಪ್ಪತ್ತು ವರ್ಷಗಳಲ್ಲಿ ನನ್ನ ಹತ್ತು-ಹನ್ನೆರಡು ಪುಸ್ತಕಗಳು ಬಂದಿವೆ. ಆದರೆ 'ಪ್ರಜಾವಾಣಿ'ಯಂತಹ ಪತ್ರಿಕೆ ನನ್ನ ಪುಸ್ತಕವೊಂದರ ವಿಮರ್ಶೆ ಪ್ರಕಟಿಸಿ ಎರಡು ದಶಕಗಳ ಮೇಲೇ ಆಯಿತು. 'ಸಾದರ ಸ್ವೀಕಾರ'ದಲ್ಲೂ ನನ್ನ ಪುಸ್ತಕಗಳ ಬಗ್ಗೆ ಮತ್ತೆ ಮತ್ತೆ ತಪ್ಪು ಮಾಹಿತಿ ನೀಡುತ್ತದೆ. ಏಕೆ? ಇಂತಹ ಪರಿಸ್ಥಿತಿಯಲ್ಲಿ ನಾವೇನು ಮಾಡಬಹುದು? ನನ್ನದೊಂದು ಪುಸ್ತಕ ಪ್ರಕಟವಾಗಿದೆ, ಅದು (ವಿಮರ್ಶಕರ ಪ್ರಕಾರ) ಹೀಗಿದೆ ಎಂದು ಕನ್ನಡ ಓದುಗರಿಗೆ ಗೊತ್ತಾಗಬೇಕೆಂದು ಒಬ್ಬ ಲೇಖಕನಾಗಿ ನಾನು ಇಚ್ಛಿಸುವುದು ಅನೈತಿಕವೇ? ಹಾಗಾದರೆ ನನ್ನ ಪತ್ರಿಕೆಯಲ್ಲಿ ನಾನು ಏನೇ ಬರೆಯುವುದೂ ಅನೈತಿಕವಾದೀತು! ನಿಜ, ನನ್ನ ಸ್ಥಿತಿಯಲ್ಲೇ ಅನೇಕರಿದ್ದಾರೆ. ಅವರು ಇದಕ್ಕೆ ತಂತಮ್ಮ ಪರಿಹಾರಗಳನ್ನು ತಾವೇ ಕಂಡುಕೊಳ್ಳಬೇಕಾಗುತ್ತದೆ; ಅದು ಅವರ ಹಣೆಬರಹ. ಕೆಲವರು ಕಂಡುಕೊಂಡಿದ್ದಾರೆ ಕೂಡ. ನಮ್ಮ ಪತ್ರಿಕೆ ಈ ದಿಸೆಯಲ್ಲಿ ತನ್ನ ಮಿತಿಗಳಲ್ಲೇ ಅಂತಹವರಿಗೆ ನೆರವಾಗುತ್ತಿದೆ.

ವಿವೇಕ್ ನಾನು ಮೆಚ್ಚುವ ಲೇಖಕರಲ್ಲೊಬ್ಬರು. ಪ್ರತಿಭಾಶಾಲಿ ಲೇಖಕರವರು. ಆದರೆ ಅವರು ಹಲವು ದೃಷ್ಟಿಯಿಂದ ಅದೃಷ್ಟವಂತ ಕೂಡ. ಅದೃಷ್ಟವಂತರು ತಮ್ಮ ಅದೃಷ್ಟವನ್ನು ನೆನೆದು ಆದರ್ಶದ ಮಾತಾಡಿದರೆ ಒಳ್ಳೆಯದೇನೋ.

**-ಡಿಎಸ್ನೆನ್**

೧೦ನೇ ಪುಟದಿಂದ)

ಕ್ರೋಢೀಕರಿಸಬಹುದು ಮತ್ತು ಅದನ್ನು ನಿಭಾಯಿಸಬಹುದಾದ ತಾಕತ್ತೂ ಕರ್ನಾಟಕ ಸರಕಾರಕ್ಕಿದೆ. ಇದಕ್ಕಿಂತ ಹೆಚ್ಚಿನ ಮೊತ್ತವನ್ನು ನಿಭಾಯಿಸುವ ತಾಕತ್ತು ನಮ್ಮ ರಾಜ್ಯ ಸರಕಾರಕ್ಕೆ ಇಲ್ಲವೆನ್ನುವುದನ್ನು ಮನಗಾಣಬೇಕಾಗಿದೆ. ಮೋದಿಯವರ ಸರ್ಕಾರದ ಕದ ತಟ್ಟಿ ವ್ಯರ್ಥ ಪ್ರಲಾಪ ಮಾಡುವುದಕ್ಕಿಂತ ನಮ್ಮ ಚಾಪೆಯಿದ್ದಷ್ಟು ನಾವು ಕಾಲು ಚಾಚುವುದೇ ಒಳ್ಳೆಯದು.

ಸಮಾನವಾಗಿ ಹಣವನ್ನು ನೇರ ಪಾವತಿ ಮಾಡಿದರೆ ಅದರ ಪರಿಣಾಮವಾಗಿ ಸಣ್ಣ ರೈತರಿಗೆ ಹೆಚ್ಚಿನ ಫಾಯಿದೆಯೂ, ದೊಡ್ಡರೈತರಿಗೆ ಕಡಿಮೆ ಲಾಭವೂ ಆಗುವ ಕಾರ್ಯಕ್ರಮವಾಗುತ್ತದೆ. ಬೆಳೆ ಬಿತ್ತನೆ ಕಾಲಕ್ಕೆ ಈ ಧನರಾಶಿ ರೈತರ ಕೈ ತಲುಪಿದರೆ (ಈಗಾಗಲೇ ತುಸು ತಡವಾಗಿರಬಹುದಾದರೂ, ಇದರ ಘೋಷಣೆಯನ್ನು ತಕ್ಷಣಕ್ಕೆ ಮಾಡಿದರೆ ರೈತರಿಗೆ ಒಂದು ನಿರೀಕ್ಷೆಯಾದರೂ ಇರುತ್ತದೆ), ಅದನ್ನು ಮುಂದಿನ ಬೆಳೆಗೆ ತಕ್ಷಣಕ್ಕೆ ಉಪಯೋಗಿಸಿಕೊಂಡು ಈಗಿನ ಬಿಕ್ಕಟ್ಟಿನಿಂದ ತುಸುಮಟ್ಟಿಗಾದರೂ ಹೊರಬರಬಹುದು. ಈ ವರ್ಷ ಮಳೆಯಂತೂ ಚೆನ್ನಾಗಿ ಆಗಿರುವುದರಿಂದ ಒಳ್ಳೆಯ ಇಳುವರಿ ಬಂದು ಮುಂಗಾರು ಬೆಳೆ ಕಟಾವಿನ ಹೊತ್ತಿಗೆ ರೈತರ, ಮುಖ್ಯವಾಗಿ ಸಣ್ಣ ರೈತರ ಪರಿಸ್ಥಿತಿ ಸುಧಾರಿಸಬಹುದು.

ನೇರ ನಗದು ಪಾವತಿ ಒಂದು ಸಮಾನತೆಯ ನೆಲೆಯಲ್ಲಿ ನಡೆಯುವ ಯೋಜನೆ. ಇದರಲ್ಲಿ ಬ್ಯಾಂಕಿನಿಂದ ಸಾಲಪಡೆಯದಿದ್ದವರಿಗೂ ಲಾಭವಾಗುತ್ತದೆ. ೨೦೧೨ರ ಋಣ ಮತ್ತು ಉಳಿತಾಯದ ಸಮೀಕ್ಷೆಯ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರ ಸಾಲದಲ್ಲಿ ಕೇವಲ ಶೇ. ೫೦ರಷ್ಟು ಮಾತ್ರ ಸಾಂಸ್ಥಿಕ ಮೂಲಗಳಾದ ಬ್ಯಾಂಕು ಮತ್ತು ಸಹಕಾರಿ ಸಂಘಗಳ ಬಾಬ್ತಿನಲ್ಲಿತ್ತು. ಮಿಕ್ಕ ಸಾಲವು ಬಡ್ಡಿವ್ಯಾಪಾರಿಗಳಿಂದ ಮತ್ತು ಇತರ ಮೂಲಗಳಿಂದ ಬಂದಿತ್ತು. ಹೀಗಿರುವಾಗ ಸಾಂಸ್ಥಿಕ ಮೂಲಗಳ ಸಾಲಗಳನ್ನು ಮಾತ್ರ ಮನ್ನಾ ಮಾಡುವುದು ಕೆಲವರಿಗೆ ಮಾತ್ರ ಅಂದರೆ ದೊಡ್ಡ, ಶ್ರೀಮಂತ ರೈತರಿಗೇ ಪರಿಹಾರವನ್ನೊದಗಿಸಬಹುದು.

ರೈತರ ಸದ್ಯದ ಸಂಕಷ್ಟವನ್ನು ಪರಿಹರಿಸಿದ ನಂತರ ಸರಕಾರ ತುರ್ತಾಗಿ, ಕೃಷಿಯಲ್ಲಿ ಮೂಲಭೂತ ಸುಧಾರಣೆಗಳನ್ನು ತರುವ, ಸುಸ್ಥಿರವಾಗಿ ಕೃಷಿ ಮುಂದುವರೆಯುವ, ನೀರನ್ನು ಕಡಿಮೆ ಬಳಸಿ ಇಳುವರಿಯನ್ನು ಉಳಿಸಿಕೊಳ್ಳುವ ಮತ್ತೆಂದೂ ಸಾಲಮನ್ನಾದ ಕೂಗು ಏಳಲು ಆಸ್ಪದ ಕೊಡದಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಇಂತಹ ದೂರದೃಷ್ಟಿ ಕುಮಾರಸ್ವಾಮಿಯವರ ನೇತೃತ್ವದ ಸಮ್ಮಿಶ್ರ ಸರಕಾರಕ್ಕಿದೆಯೇ? ನಾವು ಕಾದು ನೋಡಬೇಕಾಗಿದೆ.



**(ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್'ನಲ್ಲಿ ಅರ್ಥಶಾಸ್ತ್ರದ ಸಂದರ್ಶಕ ಪ್ರಾಧ್ಯಾಪಕರಾಗಿರುವ ಎಂ.ಎಸ್ ಶ್ರೀರಾಮ್ ಕನ್ನಡದ ಪ್ರತಿಭಾವಂತ ಕಥೆಗಾರರಲ್ಲಿ ಒಬ್ಬರೂ ಹೌದು)**

---

೧೧ನೇ ಪುಟದಿಂದ)

ಇವೆಲ್ಲದರಾಚೆಗೆ ಈ ಭೇಟಿಯನ್ನು ನೋಡುವುದು ಹೇಗೆ? ಆರ್‌ಎಸ್‌ಎಸ್ ಜೊತೆ ವೇದಿಕೆಗಳನ್ನು ಹಂಚಿಕೊಂಡವರ ಪಟ್ಟಿ ಮಹಾತ್ಮಾ ಗಾಂಧಿ, ಪಂಡಿತ್ ನೆಹರೂ ಅವರಿಂದಲೇ ಆರಂಭವಾಗುತ್ತದೆ. ಆದರೆ ಇವರ ಭೇಟಿ ಮತ್ತು ಭಾಷಣಗಳಿಂದ ಆರ್‌ಎಸ್‌ಎಸ್ ಏನೂ ಬದಲಾದಂತೆ ಇಲ್ಲ. ಅಲ್ಲಿಗೆ ಹೋದವರೂ ಏನೂ ಬದಲಾದಂತಿಲ್ಲ. ಬದಲಾವಣೆ ಆಗುತ್ತೋ ಬಿಡುತ್ತೋ ಅಥವಾ ಒಂದು ಬಗೆಯ ಚಲನೆಯಾದರೂ ಸಾಧ್ಯವಾಗುತ್ತೋ ಗೊತ್ತಿಲ್ಲ; ಆದರೆ ನಮ್ಮ ದೇಶ ಈ ಬಗೆಯ ಸಾರ್ವಜನಿಕ ಸಂವಾದಕ್ಕೆ ನಿಧಾನವಾಗಿಯಾದರೂ ತೊಡಗಬೇಕಾದ ತುರ್ತು ಇಂದಿನ ದಿನಗಳಲ್ಲಿ ಹೆಚ್ಚಿದೆ.

ಸಂಘ ಪರಿವಾರ ಪ್ರಾಮಾಣಿಕವಾಗಿಯೋ ಅಥವಾ ಅಲ್ಲವೋ ಇತ್ತೀಚಿನ ವರ್ಷಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಒಂದು ಬಗೆಯ ಒಳಗೊಳ್ಳುವ ರಾಜಕಾರಣವನ್ನು ಮಾಡುತ್ತಿದೆ. ಆ ಒಳಗೊಳ್ಳುವಿಕೆಯ ರಾಜಕಾರಣದ ಭಾಗವಾಗಿಯೇ ಅದು ಪ್ರಣವ್‌ರನ್ನು ತನ್ನ ಮುಖ್ಯ ಕಾರ್ಯಕ್ರಮಕ್ಕೆ ಆಹ್ವಾನಿಸಿದೆ ಎನ್ನುವುದಂತೂ ನಿಸ್ಸಂಶಯ. ಕಳೆದ ಬಾರಿ ಉಡುಪಿಯಲ್ಲಿ ಸಂಘಪರಿವಾರದ ನೇತೃತ್ವದಲ್ಲಿ ನಡೆದ ಧರ್ಮಸಂಸತ್‌ನಲ್ಲಿ ಮೋಹನ್ ಭಾಗವತ್ ಅವರು ಬಹಳ ಮುಖ್ಯವಾದ ಒಂದು ಮಾತು ಹೇಳಿದ್ದರು. ಅದನ್ನು ಯಾವ ಮಾಧ್ಯಮದವರೂ ಗಮನಿಸಿದಂತಿಲ್ಲ. ಆ ಮಾತುಗಳೆಂದರೆ, 'ಹಿಂದೂ ಸಮಾಜವನ್ನು ನಾವು ಪುನರ್‌ರಚಿಸುವ ಕಾಲ ಈಗ ಬಂದಿದೆ. ಆ ನೆಲೆಯಲ್ಲಿ ನಾವು ಕೆಲವು ಕಾರ್ಯಸೂಚಿಗಳನ್ನು ಹಾಕಿಕೊಂಡಿದ್ದೇವೆ. ನಮ್ಮ ದೈನಂದಿನ ಅಭ್ಯಾಸದ ನೆಲೆಯಲ್ಲಿ ರೂಢಿಸಿಕೊಂಡ ನಡೆ–ನುಡಿಗಳನ್ನು ನಾವು ಮತ್ತೆ ಪರಿಶೀಲನೆಗೆ ಒಳಪಡಿಸುವ ಅಗತ್ಯ ಇದೆ. ಹೆಡಗೇವಾರರನ್ನು ಪರಮಪೂಜನೀಯ ಎಂದು ಕರೆಯುವಂತೆ ನಾವು ಇನ್ನು ಅಂಬೇಡ್ಕರ್ ಅವರನ್ನೂ ಪರಮಪೂಜನೀಯರೆಂದು ಕರೆಯುವ ರೂಢಿ ಬೆಳೆಸಿಕೊಳ್ಳಬೇಕು'.

ಸಂಘದ ಸಂಕಥನದಲ್ಲಿ ಅಂಬೇಡ್ಕರ್ ಸ್ಪಷ್ಟವಾಗಿ ಮೂಡಿ ಬಂದಿರುವುದು ಅದರ ಒಳಗೊಳ್ಳುವಿಕೆಯ ರಾಜಕಾರಣದ ಭಾಗವಾಗಿಯೇ. ಅಂತೆಯೇ ಧರ್ಮಸಂಸತ್‌ನ ಸಭಾಮಂಟಪಕ್ಕೆ ನಾರಾಯಣಗುರುಗಳ ಮತ್ತು ವೇದಿಕೆಗೆ ದಲಿತ ಸಮುದಾಯದ' ಉನ್ನತ ಅಧಿಕಾರಿಯಾಗಿದ್ದ ಆರ್ ಭರಣಯ್ಯರ ಹೆಸರು ಇಟ್ಟಿರುವುದೂ ಈ ರಾಜಕಾರಣದಮುಂದುವರಿಕೆಯಾ ಆಗಿದೆ.ಈ ಒಳಗೊಳ್ಳುವಿಕೆಯ ರಾಜಕಾರಣದ ಭಾಗವಾಗಿಯೇ ಅದು ಸಾಮಾಜಿಕ ಸಾಮರಸ್ಯದ ಮಾತುಗಳನ್ನು ಆಡುತ್ತಿದೆ. ಸಂಘಪರಿವಾರ ಇಂದು ಸಾಮರಸ್ಯದ ಮಾತನ್ನಾಡುತ್ತಿರುವುದು ಈ ದೇಶದಲ್ಲಿ ವ್ಯಾಪಕವಾಗಿ ಹಬ್ಬುತ್ತಿರುವ ಹಿಂಸೆ, ಮತ್ತು ಅಸಹಿಷ್ಣುತೆಗೆ ಸೆಕ್ಯುಲರ್ ರಾಜಕಾರಣ ತೋರಿಸಿದ ಪ್ರತಿರೋಧದ ಒತ್ತಡದ ನೆಲೆಯಲ್ಲಿಯೇ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಅರ್ಥದಲ್ಲಿ ಗಾಂಧಿ, ಅಂಬೇಡ್ಕರ್ ಅವರನ್ನು ಒಳಗೊಂಡ ಆಧುನಿಕ ಭಾರತದ ಪ್ರಜಾತಾಂತ್ರಿಕ ಸೆಕ್ಯುಲರ್ ರಾಜಕಾರಣದ ಸಂಕಥನ; ಸಂಘಪರಿವಾರದ ಯೋಚನಾಕ್ರಮಗಳನ್ನು ಮತ್ತು ಕ್ರಿಯಾಚರಣೆಗಳನ್ನು ಆಳವಾಗಿ ಬಾಧಿಸಿರುವುದು ಎಷ್ಟು ದಿಟವೋ ಹಾಗೆಯೇ ಸಂಘ ಪರಿವಾರ ಆಡುತ್ತಿರುವ ರಾಷ್ಟ್ರೀಯತೆ, ದೇಶಭಕ್ತಿ, ದೈವಭಕ್ತಿ, ಆಹಾರ ತತ್ತ್ವ, ಸಮಾನ ನಾಗರಿಕ ಸಂಹಿತೆ, ಸ್ವದೇಶೀ ಇತ್ಯಾದಿಗಳ ಬಗ್ಗೆ ಸೆಕ್ಯುಲರ್ ರಾಜಕಾರಣವೂ ಗಂಭೀರವಾಗಿದೆ ಎನ್ನುವುದು ಈ ದೇಶದಲ್ಲಿ ಪರಸ್ಪರ ಒಬ್ಬರನ್ನೊಬ್ಬರು ಆಳವಾಗಿ ಮತ್ತು ಗಾಢವಾಗಿ ಪ್ರಭಾವಿಸಿರುವುದರ ಸೂಚನೆಯಾಗಿದೆ.

ಇನ್ನು ಪ್ರಣವ್ ಸಂಘದ ಚಾವಡಿಗೆ ಹೋಗಬಾರದು ಎಂದು ವಾದಿಸುವ ನಮ್ಮ ಪ್ರಗತಿಪರರ ಕೂಗುಗಳ ಬಗ್ಗೆ ಕೆಲವು ಮಾತು. ಪ್ರಜಾಸತ್ತಾತ್ಮಕ ರಾಜಕಾರಣದ ಒಂದು ಮೂಲಭೂತ ಲಕ್ಷಣವೇ ಸಂವಾದ. ೧೯೪೭ ಸೆ. ೧೬ರಂದು ದೆಹಲಿಯಲ್ಲಿ ನಡೆದ ಆರ್‌ಎಸ್‌ಎಸ್ ಸಭೆಯಲ್ಲಿ ಭಾಗವಹಿಸಿದ ಗಾಂಧಿ ತಮ್ಮ ಭಾಗವಹಿಸುವಿಕೆಯನ್ನು ಸಮರ್ಥಿಸುತ್ತ " ಪ್ರತಿಯೊಬ್ಬರಿಗೂ ತಮ್ಮ ಒಳ್ಳೆಯತನವನ್ನು ತೋರಿಸಲು ಒಂದು ಅವಕಾಶ ನೀಡಬೇಕು" ಎಂಬ ಮಾತನ್ನು ಹೇಳುತ್ತಾರೆ. ಆ ಸಮಾವೇಶದಲ್ಲಿ ಗೋಳ್ವಾಲ್ಕರ್ ಗಾಂಧಿಯವರನ್ನು ಪರಿಚಯಿಸುತ್ತ 'ಹಿಂದುತ್ವ ಸೃಷ್ಟಿಸಿದ ಮಹಾನ್ ವ್ಯಕ್ತಿ ಗಾಂಧೀಜಿ' ಎನ್ನುತ್ತಾರೆ. ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡಿದ ಗಾಂಧಿ 'ನಾನೊಬ್ಬ ಹಿಂದೂ ಅನ್ನಲು ನನಗೆ ಹೆಮ್ಮೆ ಇದೆ. ಆದರೆ ನನ್ನ ಹಿಂದುತ್ವ ಇನ್ನೊಬ್ಬರ ಬಗ್ಗೆ ಅಸಹನೆಯನ್ನಾಗಲೀ, ಪ್ರತ್ಯೇಕತಾಭಾವನೆಯನ್ನಾಗಲೀ ಹೊಂದಿಲ್ಲ' ಎನ್ನುವುದನ್ನು ಸಂಘದ ಮುಖಕ್ಕೆ ಹೇಳಿದ್ದರು. ಮಾತ್ರವಲ್ಲ, 'ಒಂದು ವೇಳೆ ಹಿಂದೂಗಳು ಭಾರತದಲ್ಲಿ ಹಿಂದೂಯೇತರರಿಗೆ ಜಾಗವಿಲ್ಲ, ಅದರಲ್ಲೂ ಮುಸ್ಲಿಮರಿಗೆ ಯಾವುದೇ ಸಮಾನ ಮತ್ತು ಗೌರವಾನ್ವಿತ ಬದುಕಿನ ಅವಕಾಶ ಇಲ್ಲ ಮತ್ತು ಅವರು ಇಲ್ಲಿ ಎರಡನೇ ದರ್ಜೆಯ ನಾಗರಿಕರಾಗಿ ಬದುಕಬೇಕು ಎಂದುಕೊಂಡರೆ ಮತ್ತು ಪಾಕಿಸ್ತಾನದಲ್ಲಿನ ಮುಸ್ಲಿಮರು ಹಿಂದೂಗಳ ಬಗ್ಗೆ ಹೀಗೆಯೇ ಅಂದುಕೊಂಡರೆ ಹಿಂದೂ ಧರ್ಮಕ್ಕೂ ಮತ್ತು ಮುಸ್ಲಿಂ ಧರ್ಮಕ್ಕೂ ಗ್ರಹಣ ಬಡಿದಂತೆಯೇ ಸರಿ' ಎಂದೂ ಹೇಳಿದ್ದರು.

ಸಂವಾದ ನಡೆಸುವ ಅಗತ್ಯವಿಲ್ಲ ಎಂದು ಕೂಗುವ ಜನರಿಗೆ ಪ್ರಜಾತಂತ್ರ ಕೇವಲ ಒಂದು ರಾಜಕೀಯ ಕ್ರಿಯಾಚರಣೆ ಮಾತ್ರ ಅಲ್ಲ ಅದೊಂದು ಆಧ್ಯಾತ್ಮಿಕ ಶ್ರದ್ಧೆ ಎನ್ನುವುದು ಗೊತ್ತಿಲ್ಲ. ಪ್ರಜಾತಂತ್ರ ಮೂಲಭೂತವಾಗಿ ನಿಕ್ಷೇಪಿಸಲ್ಪಟ್ಟ ತನ್ನ ತತ್ತ್ವಜ್ಞಾನೀಯ ಸ್ವ–ಭಾವದಲ್ಲೇ ಸತ್ಯದ ಕುರಿತು ಒಂದು ಮುಕ್ತವಾದ ಜಿಜ್ಞಾಸೆಯನ್ನು ಮಾಡುತ್ತದೆ. ಅದರ ಪ್ರಕಾರ ಈ ಜಿಜ್ಞಾಸೆಯಲ್ಲಿ ಎಲ್ಲರೂ ಸತ್ಯದ ದಾವೆ ಮಾಡುವವರೇ ಹೊರತು ಅವರಾರೂ ಸತ್ಯಲೋಕದ ಚಕ್ರಾಧಿಪತಿಗಳಲ್ಲ. ಆರ್‌ಎಸ್‌ಎಸ್ ಮುಂದಿಡುವ ಸತ್ಯದ ದಾವೆಗೆ ಎದುರಾಗಿ ಅಥವಾ ಕಡುವಿರೋಧಿಯಾಗಿರುವ ಇನ್ನೊಂದು ಸತ್ಯದ ದಾವೆಯನ್ನು ಮುಂದಿಡುವ ಅವಕಾಶವನ್ನು ಜುಜುಬಿ ಕಾರಣಗಳಿಗಾಗಿ ನಿರಾಕರಿಸುವ ಈ ದೇಶದ ಅಗ್ಗದ ಮತ್ತು ಜನಪ್ರಿಯ ಪ್ರಗತಿಪರತೆಗೆ ಮೋಕ್ಷ ಎಂಬುದೇ ಇಲ್ಲ.



**(ಕನ್ನಡದ ಹೊಸ ತಲೆಮಾರಿನ ಚಿಂತಕರಲ್ಲೊಬ್ಬರಾದ ನಿತ್ಯಾನಂದ ಶೆಟ್ಟಿಯವರು ತುಮಕೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ)**

## ಪುಸ್ತಕಾವಲೋಕನ

ಪು: *ನೀರೆಲ್ಲವೂ ತೀರ್ಥ*. ಲೇ: **ಡಿ. ಎಸ್ ನಾಗಭೂಷಣ**. ಪ್ರ: **ವಸಂತ ಪ್ರಕಾಶನ**, ಬೆಂಗಳೂರು. ಪುಟ: ೧೮೬. ಬೆಲೆ: **ರೂ. ೧೫೦/-**

## ಡಿ. ಎಸ್ ನಾಗಭೂಷಣ ಅವರ ಲೋಕ ಮೀಮಾಂಸೆ




**ಈ** ಪುಸ್ತಕ ಡಿ.ಎಸ್. ನಾಗಭೂಷಣ ಅವರು ತಮ್ಮ ಸಂಪಾದಕತ್ವದ *'ಹೊಸ ಮನುಷ್ಯ'* ಪತ್ರಿಕೆಗಾಗಿ ಬರೆದ ಸಾಂಸ್ಕೃತಿಕ ಟಿಪ್ಪಣಿಗಳನ್ನೊಳಗೊಂಡಂತೆ, ಇತರ ಕೆಲ ಲೇಖನಗಳ ಸಂಗ್ರಹವಾಗಿದೆ. ಮೊದಲೇ ಹೇಳೀಬಿಡುತ್ತೇನೆ, ನನ್ನಂಥವರಿಗೆ ನಾಗಭೂಷಣರಂಥವರ ಬರವಣಿಗೆಯ ಬಗ್ಗೆ ಬರೆಯುವುದು ತುಸು ಕಷ್ಟವೇ. ಏಕೆಂದರೆ ನಾನು ಪಕ್ಕಾ ಅಕೆಡಮಿಕ್ ಆಗಿ ಪುಸ್ತಕ ಮತ್ತು ಬರವಣಿಗೆಗಳನ್ನು ನೋಡುವವನು. ಅವರ 'ಘರಾಣಾ'ವೇ ಬೇರೆ. ಒಣ ಬೌದ್ಧಿಕ ಕಸರತ್ತಿನ ಪರಿಭಾಷೆಗಿಂತ, ಅನಿಸಿದ್ದನ್ನು ನೇರವಾಗಿ, 'ಸಾಮಾನ್ಯ ಮನುಷ್ಯ'ನಿಗೆ ಮುಟ್ಟುವ ಹಾಗೆ ಸರಳವಾಗಿ ಬರೆಯುವುದು ಅವರ ಜಾಯಮಾನ. ಇಂತಹ ಹಿತಾಸಕ್ತಿಗಳ ಲಘು ಸಂಘರ್ಷದೊಂದಿಗೆ ಅವರ ಈ ಪುಸ್ತಕವನ್ನು ಅರಿತುಕೊಳ್ಳುವ ಪ್ರಯತ್ನ ಮಾಡಿರುವೆ..

ಸಮಕಾಲೀನ ರಾಜಕೀಯ, ಸಾಹಿತ್ಯ, ಸಂಸ್ಕೃತಿ ಹಾಗೂ ಭಾಷೆಗೆ ಸಂಬಂಧಪಟ್ಟ ವಿಷಯಗಳನ್ನೊಳಗೊಂಡ 42 ಬಿಡಿ ಲೇಖನಗಳು ಈ ಪುಸ್ತಕದಲ್ಲಿವೆ. 'ಲೇಖಕರ ಮಾತು'ಗಳಲ್ಲಿ ನಾಗಭೂಷಣ ಅವರು ಹೇಳುವ ಈ ಮಾತು ಗಮನಾರ್ಹ: 'ಆರಂಭದ ಮೊದಲೆರಡು ವರ್ಷಗಳಲ್ಲಿ ಪತ್ರಿಕೆಯ ಸೀಮಿತ ಪುಟಗಳಿಂದಾಗಿ ರಾಜಕೀಯ ಸಂಪಾದಕೀಯ ಟಿಪ್ಪಣಿಗಳಲ್ಲಿ ಮುಳುಗಿರುತ್ತಿದ್ದ ನಾನು ಈ ಟಿಪ್ಪಣಿಗಳನ್ನು ನಿಯಮಿತವಾಗಿ ಬರೆಯುತ್ತಿರಲಿಲ್ಲ. ಆದರೆ ನಂತರದ ವರ್ಷಗಳಲ್ಲಿ ನಮ್ಮ ನಡುವಿನ ಪ್ರತಿಯೊಂದು ಸಾಂಸ್ಕೃತಿಕ ವಿದ್ಯಮಾನಕ್ಕೂ ನಾನು ಈ ಟಿಪ್ಪಣಿಗಳ ಮೂಲಕ ಪ್ರತಿಸ್ಪಂದಿಸಿ ಪತ್ರಿಕೆಯ ಜೀವಂತಿಕೆಯನ್ನು ವಿಸ್ತರಿಸುವ ಮತ್ತು ನನ್ನ ಜೀವಂತಿಕೆಯನ್ನು ಕಾಪಾಡಿಕೊಳ್ಳುವ ಕಡೆಯೂ ಗಮನ ಹರಿಸಿದೆ.'. ಈ ಲೇಖನಗಳನ್ನು ಬಿಡಿಯಾಗಿ ಪತ್ರಿಕೆಯಲ್ಲಿ ಪ್ರಕಟವಾದಾಗ ಓದುವ ಅನುಭವವೇ ಬೇರೆ, ಒಟ್ಟಾರೆಯಾಗಿ ಪುಸ್ತಕ ರೂಪದಲ್ಲಿ ಓದುವ ಅನುಭವವೇ ಬೇರೆ. ಇವು ಪತ್ರಿಕೆಯ ಬಿಡಿ ಸಂಚಿಕೆಯಲ್ಲಿ ಪ್ರಕಟಗೊಂಡಾಗ ನಿರ್ದಿಷ್ಟವಾದ ಸಾಂಸ್ಕೃತಿಕ ಘಟನೆಗಳಿಗೆ ಸ್ಪಂದಿಸುವ ತುಣುಕುಗಳಾಗಿ ಕಂಡರೆ, ಒಟ್ಟಾರೆಯಾಗಿ ಈ ಪುಸ್ತಕದಲ್ಲಿ ಅವು ಸಮಕಾಲೀನ ಸಾಹಿತ್ಯಿಕ-ಸಾಂಸ್ಕೃತಿಕ ಇತಿಹಾಸದ ನಿರೂಪಣೆಗಳಾಗಿ ಕಾಣುತ್ತವೆ. ಅಂದರೆ ಈ ಬಿಡಿ ಲೇಖನಗಳು ಒಂದು ಗುಚ್ಛವಾಗಿ ನಮ್ಮ ಪ್ರಸ್ತುತ ಬದುಕನ್ನು ಒಳಹೊಕ್ಕು ನೋಡುವಲ್ಲಿ ಪೂರಕ ಸಾಮಗ್ರಿಯಾಗಿ ಒದಗುತ್ತವೆ.

ಸಾಹಿತ್ಯ ಸಂಸ್ಕೃತಿಯ ವಿವಿಧ ಮಜಲುಗಳನ್ನು ಶೋಧಿಸುವ ಲೇಖನಗಳು ಅದರ ಸ್ವಾಸ್ಥ್ಯ ಮತ್ತು ರಾಜಕಾರಣದ ಬಗ್ಗೆ, ಒಳ್ಳೆಯ ಪುಸ್ತಕಗಳು ಯಾವವು, ಕೆಟ್ಟ ಸಾಹಿತ್ಯಕ ಆಚರಣೆಗಳಾವವು ಮುಂತಾದ ವಿಷಯಗಳ ಕುರಿತು ಸಂಪಾದಕೀಯಕ್ಕಿರುವ ಚಿಕ್ಕ ಜಾಗದಲ್ಲಿ ಸ್ಪಷ್ಟವಾಗಿ ನಿರೂಪಿಸುತ್ತವೆ. ಸಾಹಿತಿಗಳ ಕೆಟ್ಟ ರಾಜಕೀಯವನ್ನು ತರಾಟೆಗೆ ತೆಗೆದುಕೊಳ್ಳುವ ಲೇಖಕರು, ಅವರ ಬರವಣಿಯ ಹಿರಿಮೆಯನ್ನೂ ಗುರುತಿಸಿ ಯಾವುದು ಟೊಳ್ಳು, ಯಾವುದು ಗಟ್ಟಿ ಎಂಬ ತಿಳಿವಳಿಕೆಯನ್ನು ಕಾರಣಸಹಿತವಾಗಿ ನೀಡುತ್ತಾರೆ. ಸಾಹಿತ್ಯ ಸಂಸ್ಕೃತಿಗೆ ಸಂಬಂಧಪಟ್ಟ 'ಸಾಂಸ್ಕೃತಿಕ ನೀತಿಯೋ, ಅಧೋಗತಿಯೋ?'ಗಳಂತಹ ಲೇಖನಗಳನ್ನು ನೋಡಿದರೆ ಅವರು ಸಾಹಿತ್ಯಾಭ್ಯಾಸದಿಂದ 'ಸಮಾಜವಾದ'ದ ಕಡೆ ಏಕೆ ಚಲಿಸಿದರೆಂದು ಗೊತ್ತಾಗುತ್ತದೆ. ಅದೇನೆ ಇರಲಿ, ಡಿಎಸ್ಸೆನ್ ಅವರು ಸಾಹಿತ್ಯದ ಶುಷ್ಕವಾದ ಪ್ರಾಯೋಗಿಕ ವಿಮರ್ಶೆ ಮಾಡುವಲ್ಲಿ ಆಸಕ್ತಿ ತೋರಿಸದೆ ಅದನ್ನು ಸಾಂಸ್ಕೃತಿಕ ವಿದ್ಯಮಾನವಾಗಿ ನೋಡುತ್ತಾರೆ. ಸಮಾಜವಾದಿ ಪತ್ರಿಕೆಯ ಒಲವಿನ ಭಾಗವಾಗಿ ಹೀಗೆ ಆಗಿರುವುದು ಆಶ್ಚರ್ಯಕರವೇನಲ್ಲ. ಆದರೆ ಸಾಹಿತ್ಯ ವಿಶ್ಲೇಷಣೆಯನ್ನು ನಿರ್ವಾತದಲ್ಲಿ ಕೈಗೊಳ್ಳುವುದಕ್ಕಿಂತ ಅದನ್ನು ಲೋಕ ಮೀಮಾಂಸೆಯ ಸಂದರ್ಭದ ನೆಪವಾಗಿ ಬಳಸುವುದು ಒಳ್ಳೆಯದಲ್ಲವೇ?

ಸಾಹಿತ್ಯದ ಬಗ್ಗೆ ಸೂಕ್ಷ್ಮತೆಯನ್ನು ತೋರಿಸುವ ಇವರ ಕೆಲವು ಸಾಲುಗಳು ನನ್ನನ್ನು ಬೆರಗುಗೊಳಿಸಿವೆ. ಅನಂತಮೂರ್ತಿ ಅವರೊಂದಿಗಿನ ಕೊನೆಯ ಸಂದರ್ಶನ ಓದಿದರೆ, ನಾಗಭೂಷಣರ ಕನ್ನಡ ಸಾಹಿತ್ಯದ ಮೇಲಿನ ಹಿಡಿತವು ನಮ್ಮ ಗಮನ ಸೆಳೆಯುತ್ತದೆ. ಅವರು ಕೇಳುವ ಪ್ರಶ್ನೆಗಳ ಮೊನಚಾಗಿದ್ದು, ಕನ್ನಡದ ವಾಙ್ಮಯದಲ್ಲಿ ಅವರು 'ಒಳಗಿನವ'ರಾಗಿ ಕಾಣಿಸುತ್ತಾರೆ. ಸಾಹಿತ್ಯ ಸಂಸ್ಕೃತಿ ಹಾಗೂ ಭಾರತದ ಜಾತಿ ರಾಜಕಾರಣದ ಸಂಬಂಧಗಳನ್ನು ಭೇಧಿಸುವ ಅವರ ಪ್ರಶ್ನೆಗಳು ಅನಂತಮೂರ್ತಿಯವರನ್ನೂ ಆಳವಾಗಿ ಆಲೋಚನೆ ಮಾಡುವಂತೆ ಪ್ರೇರೇಪಿಸಿವೆ ಅನಿಸುತ್ತದೆ. ಈ ಪುಸ್ತಕದಲ್ಲಿ ನಾವು ತಪ್ಪದೆ ಓದ ಬೇಕಾದ ಹಲವು ಲೇಖನಗಳಲ್ಲಿ ಈ ಸಂದರ್ಶನವೂ ಒಂದು.

ಈ ಲೇಖನಗಳ ಆಂತರಿಕ ಸ್ವರೂಪವನ್ನು ಸ್ಥೂಲವಾಗಿ ಗ್ರಹಿಸುವುದಾದರೆ ಅವುಗಳಿಗೆ ಒಂದು ಸಾಮಾನ್ಯ ಅಂತಃಸಂಬಂಧವಿರುವುದನ್ನು ನಾವು ಕಾಣಬಹುದು. ಅಂದರೆ ಅವರು ಆಯ್ದುಕೊಳ್ಳುವ ಘಟನೆಗಳನ್ನು ಪರಿಚಯಿಸಿ, ಅದಕ್ಕೆ ಬೇಕಾಗುವ ನಿರ್ದಿಷ್ಟ ಹಿನ್ನಲೆಯನ್ನು ಕೊಟ್ಟು, ಸಕಾರಾತ್ಮಕ ಗುಣಗಳಿದ್ದರೆ, ಗುರುತಿಸುವ ತಮ್ಮ ಗುಣಗ್ರಾಹಿ ಶಕ್ತಿಯನ್ನು ಮೆರೆಯುತ್ತಾರೆ. ಇಲ್ಲವಾದರೆ, ಯಾವುದೇ ಮುಲಾಜು ಇಲ್ಲದೆ ತಾವು ವಿವರಿಸುವ ಘಟನೆಗಳ ಮೂಲಕ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಹಚ್ಚಿ ತೊಳೆಯುತ್ತಾರೆ. ಗಮನಿಸಬೇಕಾದ ಅಂಶವೆಂದರೆ ಅವರು ಯಾವುದನ್ನು ಇದ್ದ ಹಾಗೆ ಒಪ್ಪದೇ, ಯಾವುದನ್ನು ಅತಿಯಾಗಿ ಅಪ್ಪಿಕೊಳ್ಳದೇ ಒಂದು 'ವಿಮರ್ಶಾ ದೂರ'ವನ್ನು ಕಾಯ್ದುಕೊಳ್ಳುವ ಅವರ ಎಚ್ಚರ ನನಗೆ ವೈಯಕ್ತಿಕವಾಗಿ ಅನುಕರಣೀಯವೆನ್ನಿಸುತ್ತದೆ. ಯಾವುದನ್ನು ಪ್ರಶ್ನಿಸಿದೇ ಒಪ್ಪಿಕೊಳ್ಳುವ ಆಸಾಮಿ ಇವರಂತು ಅಲ್ಲ. ಇದರ ಒಂದು ಮಾದರಿಯಾಗಿ ಲೇಖಕರು ಪ್ರಸನ್ನರ *'ಶೂದ್ರರಾಗೋಣ ಬನ್ನಿ'* ಪುಸ್ತಕವನ್ನು ಪರಿಚಯಸುವ ಲೇಖನವನ್ನು ನೋಡಬಹುದು. ವ್ಯಕ್ತಿಗಳನ್ನು ಟೀಕಿಸುವಾಗಿನ ಮೃದುತ್ವ ಸಂಸ್ಥೆಗಳನ್ನು ಟೀಕಿಸುವಾಗ ಅಷ್ಟು ಕಾಣುವುದಿಲ್ಲ. ಅವರ ಈ ಮನೋಭಾವ ನಾವು ವಸಾಹತ್ತೋತರ ಸಂಸ್ಥೆಗಳನ್ನು ಹೇಗೆ ರೂಪಿಸಿಬೇಕೆಂಬುದರ ಕಡೆ ಗಹನವಾಗಿ ಚಿಂತಿಸುವಂತೆ ಮಾಡುತ್ತದೆ.

ಈ ಲೇಖನಗಳ ಮುಖಾಂತರ ಅವರು ಅರ್ಥ ಮಾಡಿಕೊಳ್ಳ ಹೊರಟ ನಮ್ಮ ಕಾಲದ ಹಿಂದೆ ಅವರ ಆಳವಾದ ಓದು ಮತ್ತು ಅಧ್ಯಯನದ ಹರಹುಗಳು ಇಣುಕಿವೆ. ಬಹಳ ಸರಳವಾಗಿ, ನೇರವಾಗಿ ಬರೆಯುವ ಈ ಲೇಖಕರ ಗದ್ಯ ಶೈಲಿ, ಅವರ ಸ್ಪಷ್ಟ, ನೇರ ಆಲೋಚನಾ ಶಕ್ತಿಗೆ ಸಾಕ್ಷಿಯಾಗಿದೆ. ಆದರೆ ಚಂಪಾರಂತವರ ನವಿರಾದ ಹಾಗೂ ಸೂಕ್ಷ್ಮವಾದ ಹಾಸ್ಯ ಪ್ರಜ್ಞೆ, ವಿಡಂಬನೆ ಇವರ ಗದ್ಯದಲ್ಲಿ ಕಾಣುವುದು ವಿರಳ. ಮತ್ತು ಸಂಕೀರ್ಣವಾದ ವಿಷಯಗಳಿದ್ದರೂ ಅವರ ನಿಲುವುಗಳು ಮಾತ್ರ ಖಡಾ ಖಂಡಿತವಾಗಿ ಮೂಡಿಬರುವುದು ಸ್ವಲ್ಪ ಸಮಸ್ಯಾತ್ಮಕವಾಗಿದೆ. ಕೆಲವು ಲೇಖನಗಳಂತೂ, ಉದಾಹರಣೆಗೆ 'ನಮ್ಮ ಸಂಸ್ಕೃತಿ ಮಂತ್ರಿ, ಶೆಲ್ಡನ್ ಪೊಲಾಕ್ ಮತ್ತು ಮಂಡ್ಯದ ಸಮ್ಮೇಳನ' ಲೇಖನದಲ್ಲಿ ಮಂತ್ರಿಯೊಬ್ಬರು ಒಂದು ಸಭೆಗೆ ಗೈರು ಹಾಜರಾಗುವುದು ಕೇವಲ ವರದಿಯಂತೆ ಭಾಸವಾದರೆ, ಪೊಲಾಕರು ಭಾರತೀಯ ಅಭಿಜಾತ ಪಠ್ಯಗಳ ಅನುವಾದ ಯೋಜನೆಯ ಸಂಪಾದಕರಾಗಿರುವ ಬಗ್ಗೆ ಇರುವ ಟಿಪ್ಪಣಿ ಇನ್ನಷ್ಟು ಆಳವಾದ ಒಳನೋಟಗಳನ್ನು ಬಯಸುವಂತಿದೆ.

ಕೊನೆಯದಾಗಿ, ನಾಗಭೂಷಣ ಅವರ ಜೊತೆ ನಾವು ಕೆಲವು ತಕರಾರುಗಳನ್ನು ಮಾಡಬಹುದು, ಅವರ ವಾದಗಳನ್ನು ಬುಡಮೇಲೂ ಮಾಡಬಹುದು. ಆದರೆ ತಮ್ಮ ಕಾಲದ ಜೊತೆ ಗುದ್ದಾಡುತ್ತ, ಸಾರ್ಥಕ ಜೀವನ ನಡೆಸಲು ನಮಗೆ ಎಂತಹ ಸಮಾಜ ಬೇಕೆಂಬುದರ ಕುರಿತು ಅವರು ನಡೆಸುವ ಜಿಜ್ಞಾಸೆಯ ಹಿಂದಿರುವ ಕಾಳಜಿಯನ್ನು ಅಲ್ಲಗಳೆಯುವಂತಿಲ್ಲ. ನೀರು ಮತ್ತು ತೀರ್ಥವೆನ್ನುವ ವ್ಯತ್ಯಾಸ ಮಾಡದ ಅವರ ಲೋಕಗ್ರಹಿಕೆ, ಅವರ ನಿಜವಾದ ಸಮಾಜಮುಖಿ ಕಾಳಜಿಗೆ ಒಪ್ಪುವ ತಲೆಬರಹವಾಗಿದೆ.

**-ಡಾ. ಎನ್.ಎಸ್. ಗುಂಡೂರ**

ಪು : **ಮನೆಯಂಗಳದಲಿ ಮಲೆನಾಡು** ಲೇ: **ರವಿ ಸಸಿತೋಟ** ಪ್ರ: **ಸಸಿತೋಟ ಪ್ರಕಾಶನ**, ಶಿವಮೊಗ್ಗ ಪು : ೧೮೧ ಬೆಲೆ : **ರೂ. ೧೫೦/**

## ತಂದೆಗೊಂದು ಸಾರ್ಥಕ ಶ್ರದ್ಧಾಂಜಲಿ




**ಕ**ಥೆಗಾರ ಮತ್ತು ಕಾದಂಬರಿಕಾರರಾಗಿ ಕನ್ನಡ ಓದುಗರಿಗೆ ಪರಿಚಯವಿರುವ ಸಸಿತೋಟ ತಮ್ಮ ಪ್ರೀತಿಯ ತಂದೆ ದುಗ್ಗಪ್ಪಗೌಡರ ಸುತ್ತ ಕಟ್ಟಿರುವ ತಮ್ಮ ನೆನಪಿನ ಚಿತ್ರಗಳ ಸಂಕಲನವಿದು. ಮಲೆನಾಡ ಜನರ ಜನಪ್ರಿಯ ಹವ್ಯಾಸವಾದ ಶಿಕಾರಿಯನ್ನು ಕುರಿತು ತಮ್ಮ ತಂದೆ ಹೇಳಿದ ವೈವಿಧ್ಯಮಯ ಮತ್ತು ಸ್ವಾರಸ್ಯಕರ ಪ್ರಸಂಗಗಳೊಂದಿಗೆ ತಮ್ಮ ಸಸಿತೋಟ ಎಂಬ ಹಳ್ಳಿಯ ಚಿತ್ರವಿಚಿತ್ರ ಜನರ ಗುಣ ಸ್ವಭಾವಗಳನ್ನು ಆತ್ಮೀಯವಾಗಿ ಪರಿಚಯಿಸುತ್ತಾ ಆರಂಭವಾಗುವ ಈ ಬರಹಗಳು ಸ್ಥಳೀಯ ನಂಬಿಕೆಗಳು ಮತ್ತು ಹಬ್ಬ ಆಚರಣೆಗಳ ಸ್ವಾರಸ್ಯಕರ ಕಥೆಗಳೊಂದಿಗೆ ಊರ ಸಾಂಸ್ಕೃತಿಕ ಚಿತ್ರವನ್ನೂ ಕೊಡುತ್ತಾ ಸಾಗಿ ಲೇಖಕರ ಕುಟುಂಬದ ಕಥೆ ಹೇಳುವ ಘಟನಾವಳಿಯ ಭಾವಪೂರ್ಣ ನಿರೂಪಣೆಯೊಂದಿಗೆ ದುಗ್ಗಪ್ಪಗೌಡರ ಚಿತ್ರವನ್ನೂ ನಮ್ಮ ಮನಸ್ಸಿನಲ್ಲಿ ಜೀವಂತವಾಗಿಸಿಬಿಡುತ್ತದೆ. ಹೀಗೇ ಒಟ್ಟಿಗೇ ಮೂರು ನಾಲ್ಕು ಉದ್ದೇಶಗಳನ್ನು ಸಾಧಿಸುವ ಈ ಕೃತಿ ಒಟ್ಟಾರೆ ಒಂದು ಸಾಹಿತ್ಯ ಕೃತಿಯಲ್ಲಿ ಕಾಣುವ ಸಾವಯವ ಐಕ್ಯತೆ ಮತ್ತು ಒಂದು ಸರಳ ಕಥನ ವೈಶಿಷ್ಟ್ಯತೆಗಳೊಂದಿಗೆ ನಮ್ಮ ಗಮನ ಸೆಳೆಯುತ್ತದೆ.

ಪುಸ್ತಕದುದ್ದಕ್ಕೂ ತಮ್ಮ ತಂದೆಯ ಬಗ್ಗೆ ಸಸಿತೋಟ ಅವರ ಪ್ರೀತಿ ಅಂತರ್ಗಂಗೆಯಾಗಿ ಹರಿಯುತ್ತದೆ. ಆದರೆ ಎಲ್ಲೂ ಅದು ಅವರನ್ನು 'ಹೀರೋ'ಆಗಿ ಚಿತ್ರಿಸುವ ಪ್ರಯಂತ್ನ ಮಾಡುವುದಿಲ್ಲ. ನೇರವಾಗಿ, ಯಾವುದೇ ಭಾಷಾಡಂಬರವಿಲ್ಲದೇ ಸಾದಾ ಸೀದಾ ಶೈಲಿಯಲ್ಲಿ ಲೇಖಕರು ಪ್ರಸಂಗಗಳನ್ನು, ಘಟನೆಗಳನ್ನು ನಿರೂಪಿಸುತ್ತಾ ಹೋಗುತ್ತಾರೆ. ಜೊತೆಗೆ ತಮ್ಮ ತಂದೆಯ ವ್ಯಕ್ತಿತ್ವ ಸೂಕ್ಷ್ಮವಾಗಿ ವ್ಯಕ್ತವಾಗುವ ಘಟನೆ ಮತ್ತು ಸಂದರ್ಭಗಳನ್ನು ತಮ್ಮ ಮನಸ್ಸಿನಲ್ಲಿ ಅಚ್ಚೊತ್ತಿದ ನೆನಪುಗಳನ್ನಷ್ಟೇ ನೆಚ್ಚಿ ಹೆಕ್ಕಿ ಜೋಡಿಸಿರುವ ಜೀವನ ಸಾರ್ಥಕತೆಯನ್ನು ಕುರಿತ ಲೇಖಕರ ಒಳನೋಟ. ನಮ್ಮ ಗಮನ ಸೆಳೆಯುತ್ತದೆ. ಉದಾ : 'ದಡ್ಡೆ ಹಂದಿ', 'ಯುಗಾದಿ ಹೋಳಿಗೆ', 'ಅಪ್ಪಯ್ಯ ಬರುತ್ತಾರೆ', 'ಅಪ್ಪನ ಮೂಲವ್ಯಾಧಿ' 'ಅಪ್ಪನ ಅಧ್ಯಕ್ಷತೆ' ಮುಂತಾದವು. 'ಕಲ್ಲು ಮಂಚದ ಮಹಿಮೆ'ಯಂತೂ ದುಗ್ಗಪ್ಪಗೌಡರ ಗೃಹಸ್ಥಿಕೆಯ ಅಪೂರ್ವ ವಿವೇಕವನ್ನು ತೆರೆದಿಡುವಂತಿದೆ. ಈ ಕಾರಣಕ್ಕೇ ಅವರ ದೇಹಾಂತ್ಯವನ್ನು ಕುರಿತ ಅಧ್ಯಾಯಗಳು ನಮ್ಮ ಮನಸ್ಸನ್ನು ಆರ್ದ್ರಗೊಳಿಸಿಬಿಡುತ್ತವೆ.

ಕೃತಿಯ ಸಾರ್ಥಕತೆಗೆ ಇನ್ನೂ ಮುಖ್ಯ ಕಾರಣವೆಂದರೆ, ದುಗ್ಗಪ್ಪಗೌಡರ ಸಾರ್ವಜನಿಕವಲ್ಲದ ಒಂದು ಕೌಟುಂಬಿಕ ಪರಿಸರದಲ್ಲೇ ಮೂಡಿಕೊಂಡ ವ್ಯಕ್ತಿತ್ವದ ವಿಶಿಷ್ಟ ಘನತೆ. ಅದರಲ್ಲಿ ಅವರ ಒಂದು ಪ್ರತಿಭಾ ವಿಶೇಷವೂ ಸೇರಿಕೊಂಡಿದೆ. ಅಡಿಕೆ ಸುಲಿಯಲು ಬರುವ ಆಳುಮಕ್ಕಳಿಗೆ ಹೇಳುವ ಮತ್ತು ಈ ಸಂಗ್ರಹದಲ್ಲಿ ಒಂದು 'ಸಾಕ್ಷಿಪ್ರಜ್ಞೆ'ಯೇ ಆಗಿಬಿಡುವ ಕಲ್ಲು ಮಂಚದ ಮೇಲೆ ಕೂತು ಬೆಳದಿಂಗಳನ್ನು ಸವಿಯುತ್ತಾ ಮಕ್ಕಳಿಗೆ ಹೇಳುವ ಕಥೆಗಳು ಮತ್ತು ಪ್ರಸಂಗಗಳು ಅವರದ್ದೇ ಆದ ಸೃಜನಶೀಲತೆಯಲ್ಲಿ ಅದ್ದಿ ಬಂದಂಥವು. ಒಮ್ಮೆ ಸಸಿತೋಟರ ತಾಯಿ 'ನಿಮ್ಮ ಕಥೆ ಅಂದರೆ ಸುಳ್ಳುಪಳ್ಳು' ಎಂದು ಕಿಚಾಯಿಸಿದಾಗ ಅವರು 'ಕಥೆ ಅಂದರೆ ಮತ್ತೇನು? ಅಲ್ಲಿ ಸುಳ್ಳುಪಳ್ಳು ಎಲ್ಲ ಇರುತ್ತೆ. ಕಥೆ ಅಂದ್ರೆ ಏನು ನಿನಗೆ ಗೊತ್ತಾ?' ಎಂದು ಕೇಳಿ ತಮ್ಮ ಕಥೆಗಾರಿಕೆಯ ಹಿಂದಿನ ಒಂದು ಕಲಾ ಪ್ರಜ್ಞೆಯ ಸೂಚನೆ ನೀಡುತ್ತಾರೆ. ಅವರು ಎಂದೂ ಒಂದು ಕಥೆಯನ್ನು ಒಂದೇ ರೂಪದಲ್ಲಿ ಹೇಳುತ್ತಿರಲಿಲ್ಲವಂತೆ. ಸಂದರ್ಭ ನೋಡಿ ವಿವರಗಳನ್ನು ಬದಲಾಯಿಸಿ ಆದರೆ ಕಥೆಯ ಸ್ವಾರಸ್ಯ ಕೆಡದಂತೆ ಮತ್ತು ಸಂದರ್ಭಕ್ಕೆ ತಕ್ಕ ಸಂದೇಶವೂ ಹೊರಡುವಂತೆ ಹೇಳುತ್ತಿದ್ದರಂತೆ. ರವಿಯವರು ಈ ಕಥೆಗಳನ್ನು ತಮ್ಮ ತಂದೆಯ ತೀರ್ಥಹಳ್ಳಿ ಕಡೆಯ ಭಾಷೆಯ ಸೊಗಡನ್ನೂ ಉಳಿಸಿಕೊಂಡು ದಾಖಲಿಸುವ ಮೂಲಕ ಅವಕ್ಕೊಂದು ಸಾಹಿತ್ಯಿಕ ಸೊಗಸನ್ನೂ ನೀಡಿದ್ದಾರೆ.ಹಾಗೆಂದೇ ದುಗ್ಗಪ್ಪಗೌಡರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಕಡಿದಾಳು ಶಾಮಣ್ಣನವರು 'ನಮ್ಮ ದುಗ್ಗಣ್ಣಯ್ಯನಿಗೆ ವಿದ್ಯೆ ಸಿಕ್ಕಿದ್ದರೆ ಬಹಳ ಒಳ್ಳೆಯ ಸಾಹಿತಿಯೋ ಕಲಾವಿದರೋ ಅಗುತ್ತಿದ್ದರು' ಎನ್ನುವುದು.

**–ಡಿಎಸ್ಸೆನ್**

ಪು: **ಕಣ್ಣ ಭಾಷೆ** ಲೇ: **ಜ್ಯೋತಿ ಗುರುಪ್ರಸಾದ್** ಪ್ರ: **ಹೊಸ ಸಂಜೆ ಪ್ರಕಾಶನ**, ,ಕಾರ್ಕಳ ಪುಟ : ೧೧೮ ಬೆಲೆ : **ರೂ. ೧೪೦/-**

## ಜೀವನೋತ್ಸಾಹದ ಸರಳ ಅಭಿವ್ಯಕ್ತಿಗಳು




ಜ್ಯೋತಿ ಗುರುಪ್ರಸಾದ್ ಅವರ 'ಕಣ್ಣ ಭಾಷೆ' ಕನ್ನಡದಲ್ಲೊಂದು ಹೊಸ ಪ್ರಯೋಗ. ಕನ್ನಡ ವರ್ಣಮಾಲೆಯ ಒಂದೊಂದು ಅಕ್ಷರವನ್ನೂ ಒಂದು ಜಿಗಿಹಲಗೆಯನ್ನಾಗಿ ಮಾಡಿಕೊಂಡು ತಮ್ಮ ಮನೋಲಹರಿಗೆ ಹೊಂದಿಕೆಯಾಗುವ ವಿಚಾರ, ವಸ್ತು, ಸಂಗತಿಗಳನ್ನು ಕುರಿತು ತಮ್ಮ ವಿಚಾರಗಳನ್ನು ಓದುಗರೊಂದಿಗೆ ಹಂಚಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. 'ಶೈನಾ' ಎಂಬ ಕೈಬರಹದ ಪತ್ರಿಕೆಯಲ್ಲಿ ಪ್ರಕಟವಾದ ಅಂಕಣಗಳ ಸಂಗ್ರಹ ಈ ಕೃತಿ. ಹಾಗಾಗಿ ಅಂಕಣಬರಹಕ್ಕೆ ಸಹಜವಾದ ವಸ್ತುವೈವಿಧ್ಯತೆ, ಹೆಚ್ಚು ಆಳವಿಲ್ಲದ ಹರವು ಇದರ ಲಕ್ಷಣವೂ ಆಗಿದೆ.

ಕನ್ನಡ ಭಾಷೆ ತಮಗೆ ಕಣ್ಣಿನಷ್ಟೇ ಮುಖ್ಯ, ಹಾಗಾಗಿ ತಮ್ಮ ಅಂಕಣದ ಹೆಸರೂ ಕಣ್ಣ ಭಾಷೆಯಾಯಿತು, ಈ ಭಾವಕ್ಕೊಂದು ಖಚಿತ ಅಭಿವ್ಯಕ್ತಿ ದೊರೆತದ್ದು ಕನ್ನಡ ಚಲನ ಚಿತ್ರಗೀತೆಯಿಂದ ಎನ್ನುವ ಲೇಖಕಿ ಕನ್ನಡ ವಾಙ್ಮಯದಿಂದ ಹೆಕ್ಕಿ ತೆಗೆದ ಅಸಂಖ್ಯ ಉದಾಹರಣೆಗಳನ್ನು ಬಳಸುವ ಹಾಗೇ ಕನ್ನಡ ಚಲನ ಚಿತ್ರಗೀತೆಗಳ ಸಾಲುಗಳನ್ನೂ ಚಲನಚಿತ್ರದ ಕಥೆಗಳನ್ನೂ ಉದಾಹರಿಸುವ ಮೂಲಕ ಹಳೆಯ ಎಷ್ಟೋ ಕನ್ನಡ ಚಲನ ಚಿತ್ರಗೀತೆಗಳ ಸಾಹಿತ್ಯಿಕ ಮೌಲ್ಯವನ್ನು ಗುರುತಿಸುವ ಕೆಲಸವನ್ನು ಮಾಡಿದ್ದಾರೆ ಎನ್ನಬಹುದು.

ತಮಿಳು ಮಾತೃಭಾಷೆಯ ಕನ್ನಡ ದಿಗ್ಗಜಗಳಾದ ಮಾಸ್ತಿ, ಪುತಿನ, ಕೈಲಾಸಂ, ಜಿ ಪಿ ರಾಜರತ್ನಂ ತರಹದವರ ಪರಂಪರೆಯ ಹೊಸ ತಲೆಮಾರಿನ ಮುಂದುವರಿಕೆಯಾದ ಜ್ಯೋತಿ ಗುರುಪ್ರಸಾದ್ ಅವರೂ ಸಹ 'ಕಣ್ಣ ಭಾಷೆ' ಯಂತಹ ಪ್ರಯೋಗಗಳ ಮೂಲಕ ತಮ್ಮದೇ ಆದ ಕೊಡುಗೆಯನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡುವ ಪ್ರಯತ್ನ ನಡೆಸಿದ್ದಾರೆ. ತಮಿಳು ಅವರ ಹೆತ್ತೊಡಲಾದರೆ ಕನ್ನಡವು ಅವರನ್ನು ಪೊರೆದ ಮಡಿಲು. ಈ ಹಿನ್ನೆಲೆಯು ಅವರ ಅರಿವನ್ನು ಹೆಚ್ಚಿಸಿ ಅವರ ದೃಷ್ಟಿಯನ್ನು ವಿಶಾಲಗೊಳಿಸಿದೆ.

ತಮ್ಮ ಬರವಣಿಗೆಯುದ್ದಕ್ಕೂ ತಾವು ಅನುಸಂಧಾನ ಮಾಡುವ ಬಹುತೇಕ ಸಂಗತಿಗಳಲ್ಲಿ ಜ್ಯೋತಿಯವರು ಸಂಭ್ರಮ ಪಡುತ್ತಾರೆ, ಸಂಭ್ರಮವನ್ನು ಹಂಚುತ್ತಾರೆ, ಸುಂದರ ಹೂದೋಟದಲ್ಲಿ ಜಿಗಿದಾಡಿ ಜೀರುಂಡೆಗಳನ್ನು ಹಿಡಿದು ಖುಷಿಪಟ್ಟು ಮತ್ತೆ ಹಾರಿ ಬಿಡುವ ಮಗುವಿನ ಹಾಗೆ, ಕುವೆಂಪು, ಬೇಂದ್ರೆ, ಅಡಿಗ. ಪಂಪ, ಶಿಶುನಾಳ ಶರೀಫ, ಜಾನಪದ, ವಚನ, ಹೀಗೆ ಎಲ್ಲೆಲ್ಲೋ ಸುಳಿದಾಡಿ ಕನ್ನಡ ಇಂಗ್ಲಿಷ್ ಭಾಷೆಯಲ್ಲಿ ತಾವು ಓದಿ ಖುಷಿಪಟ್ಟ ಕಾವ್ಯದ ಸಾರವನ್ನು ವಿಫುಲವಾಗಿ ಓದುಗರಿಗೂ ಹಂಚುತ್ತಾರೆ. ಲಿಂಗ ತಾರತಮ್ಯ, ಮತೀಯವಾದ, ಪರಿಸರ ಕಾಳಜಿ, ರೈತರ ಆತ್ಮಹತ್ಯೆಯಂತಹ ಸಾಮಾಜಿಕ ಸಮಸ್ಯೆಗಳು ಹೀಗೆ ಪ್ರಚಲಿತ ಸಮಕಾಲೀನ ಸಂಗತಿಗಳನ್ನು ಸಮಸ್ಯೆಗಳನ್ನು ಕುರಿತು ಆರೋಗ್ಯಕರ ರೀತಿಯಲ್ಲಿ ವಿವೇಚಿಸುತ್ತಾರೆ. ಕೆಲವು ಸಂಗತಿಗಳನ್ನು ಕೇವಲ ಸಾಹಿತ್ಯದ ಹಿನ್ನೆಲೆಯಲ್ಲಿ ಮಾತ್ರವೇ ಪರಿಗಣಿಸದೆ ಅವನ್ನು ವಿಭಿನ್ನ ದೃಷ್ಟಿಯಿಂದಲೂ ನೋಡುತ್ತಾರೆ. ನಮಸ್ಕಾರ ಮಾಡುವ ಅಂಗಿಕ ಚಟುವಟಿಕೆಯ ಬಗ್ಗೆ ಬರೆಯುತ್ತಾ ಅಂಗವಿಕಲರ ನೋವನ್ನು ಸ್ಮರಿಸುತ್ತ ಮಾನವೀಯತೆಯನ್ನು ಮೆರೆಯುತ್ತಾರೆ. ಔಷಧಿಯ ಬಗ್ಗೆ ಬರೆಯುತ್ತಾ ಇಂದು ವೈದ್ಯಕೀಯ ಕ್ಷೇತ್ರವು ಒಂದು ದಂದೆ ಮಾತ್ರವಾಗಿರುವುದನ್ನು ಕುರಿತು ವಿಷಾದಿಸುತ್ತಾರೆ. ಒಟ್ಟಾರೆ ಒಂದು ಪುಟಿಯುವ ಜೀವನೋತ್ಸಾಹದ ಅಕ್ಷರ ಅಭಿವ್ಯಕ್ತಗಳಾಗಿರುವ ಈ ಕಿರು ಲೇಖನಗಳು ತನ್ನ ವಸ್ತು ವೈವಿರ್ಧ್ಯಯ ಮತ್ತು ಸರಳ ಶೈಲಿಗಳಿಂದಾಗಿ ಓದುಗರ ಮನಮುಟ್ಟುವಂತಿದ್ದು ಚಿಂತನೆಗೆ ಹಚ್ಚುವಂತಿವೆ.

**–ಎಂ. ರಾಜು**



**'ಹೊಸ ಮನುಷ್ಯ' ಓದುಗರೆಲ್ಲರಿಗೆ**
**ಹಾರ್ದಿಕ ಶುಭಾಶಯಗಳು**



**ಕರ್ನಾಟಕ ಸಂಘ**

ಮಂಡ್ಯ

**'ಹೊಸ ಮನುಷ್ಯ' ಓದುಗರೆಲ್ಲರಿಗೆ**
**ಹಾರ್ದಿಕ ಶುಭಾಶಯಗಳು**



**ಕೆ. ಅರ್ಕೇಶ್**

(ನಿವೃತ್ತ ಐಜಿಪಿ)
ಮೈಸೂರು

‘ಹೊಸ ಮನುಷ್ಯ’ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು!



**ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ**
**ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ**
**ಬೆಂಗಳೂರು**

## ತಿಂಗಳ ಸಾಲುಗಳು...



ಎಲ್ಲರಿಗೂ ಯಾವುದು ಒಳ್ಳೆಯದೋ ಅದೇ ನಿಜವಾಗಿ ಒಳ್ಳೆಯದು

-ಲಿಯೋ ಟಾಲ್‌ಸ್ಟಾಯ್

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**
**ಲೆಕ್ಕ ಪರಿಶೋಧಕರು, ಮೈಸೂರು**
ಮೊಬೈಲ್ : ೯೮೮೬೦೬೮೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor,
‘Hosa Manushya’, ‘HIG-5, ‘Nudi’, Kallahalli Extension,
Vinoba Nagara, Shivamogga -577204( Karnataka)